that the same Minimum Wages Act will be enforced even in Mysore Press.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ ಕಾರ್ಮಿಕ ಇಲಾಖೆಯ ಮಂತ್ರಿಗಳ ಜೊತೆ ಚರ್ಚೆ ಮಾಡಿ, ಇದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತೇನೆ.

ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ನನ್ನ ಭಾಷಣದಲ್ಲಿ ಪ್ರಸ್ತಾಪ ಮಾಡುತ್ತಾ ಐ.ಎ.ಎಸ್. ಐ.ಪಿ.ಎಸ್ ಮತ್ತು ಐ.ಎಫ್.ಎಸ್. ಮತ್ತು ಸರ್ಕಾರಿ ಅಧಿಕಾರಿಗಳ ಬಗ್ಗೆ ರೆಫರ್ ಮಾಡಿದ್ದೆ. ನನ್ನ ಉದ್ದೇಶ ಏನು ಇತ್ತು ಎಂದರೆ ಈ ಸರ್ಕಾರ ಯಾವರೀತಿ ನಡೆಯುತ್ತಿದೆ ಎನ್ನುವುದಕ್ಕೆ ಕೆಲವು ವಿಷಯಗಳನ್ನು ಹೇಳಬೇಕಾಗಿರುವುದು. ಈಗ ನಮ್ಮಲ್ಲಿ ನಾಲ್ಕು ಚೀಫ್ ಇಂಜಿನಿಯರ್‌ಗಳು ಇದ್ದವರು ಶ್ರೀ ದೇವೇಗೌಡರ ಕಾಲದಲ್ಲಿ ೩೨ ಜನ ಆಗಿದ್ದಾರೆ. ಇದಕ್ಕೆ ಏನು ಕಾರಣ ಎಂದರೆ, ಯಾರಾದರೂ ದೊಡ್ಡ ಮನುಷ್ಯರ, ಒಬ್ಬ ಮಂತ್ರಿಯ ಅಳಿಯ ಪ್ರಮೋಶನ್ ಬೇಕು ಎಂದರೆ ಪ್ರಮೋಶನ್ ಕೊಡಲಿಕ್ಕೆ ಒಂದು ಜಾಗವನ್ನು ಸೃಷ್ಟಿ ಮಾಡುವುದು ಈ ರೀತಿಯಾಗಿದೆ. ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ೩ ಜನರಿದ್ದಾರೆ, ಸೆಕ್ರೆಟರಿಗಳು ಮೊದಲು ೩ ಜನ ಇದ್ದರು. ಅದರ ಜೊತೆಗೆ ಈಗ ೨೦ ಸೇರಿಸಿದ್ದಾರೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟನ್ನು ಮೂರು ಭಾಗ ಮಾಡಿದ್ದಾರೆ. ಅದನ್ನು ಸಿರಿಕಲ್ಚರ್, ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಎಂದು ಭಾಗ ಮಾಡಿದ್ದು ಇವುಗಳಲ್ಲಿ ಬರೀ ಸಂಬಳ ಸಾರಿಗೆಗಾಗಿ ೫೦ ಪರ್ಸೆಂಟ್‌ನಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಎಲ್ಲದಕ್ಕೂ ಒಬ್ಬೊಬ್ಬ ಡೈರೆಕ್ಟರ್ ಇದ್ದಾರೆ ಜಾಯಿಂಟ್ ರಿಜಿಸ್ಟ್ರಾರ್‌ಗಳು ೨೭ ಜನ ಇದ್ದಾರೆ. ಇರಬೇಕಾಗಿರುವುದು ೩ ಜನ. ಹಾಗೆಯೇ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬ ಡೈರೆಕ್ಟರ್ ಇದ್ದುದನ್ನು ಮೂರು ಮಾಡಿದ್ದಾರೆ. ಇ.ಎಸ್.ಐ ಗೆ ಒಬ್ಬ ಡೈರೆಕ್ಟರ್, ಹೆಲ್ತ್‌ಗೆ ಒಬ್ಬ ಡೈರೆಕ್ಟರ್ ಮತ್ತು ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್ ಎಂದು ಒಬ್ಬರು. ಈ ರೀತಿ ವಿಪರೀತವಾಗಿ ಡಿಪಾರ್ಟ್‌ಮೆಂಟ್‌ಗಳನ್ನು ಸೃಷ್ಟಿ ಮಾಡಿ ಹಣಕಾಸಿನ ಪರಿಸ್ಥಿತಿಯಲ್ಲಿ ಒಟ್ಟು ನಮಗೆ ಬರುತ್ತಿರುವ ಉತ್ಪಾದನೆಯಲ್ಲಿ ೧೩೦ ಕೋಟಿ ರೂಪಾಯಿಗಳನ್ನು ಸಂಬಳಕ್ಕಾಗಿ ಕೊಡುತ್ತಾರೆ, ಸಂಬಳದ ಜೊತೆಗೆ ಸುಮಾರು ೨೭ ಲಕ್ಷ ರೂಪಾಯಿಗಳನ್ನು ಇದಕ್ಕೆ ಸೇರಿಸಬೇಕಾಗುತ್ತದೆ. ಇವರ ಕಾರು ಒಬ್ಬೊಬ್ಬರ ಮನೆಯಲ್ಲಿ ಮೂರು–ನಾಲ್ಕು ಮಂದಿ ಕೆಲಸ ಮಾಡುವ ಆಳುಗಳು ಎಲ್ಲಾ ಸೇರಿದರೆ ಇಷ್ಟೊಂದು ಹಣವನ್ನು ಈ ಅಧಿಕಾರಿಗಳ ಸಂಬಳ ಮತ್ತಿತರ ಸೌಲಭ್ಯಗಳಿಗಾಗಿ ಖರ್ಚು ಮಾಡಿದರೆ ಹೇಗೆ ? ಇವೆಲ್ಲಾ ನಾನ್ ಪ್ಲಾನ್‌ನಲ್ಲಿ ಬರುವಂಥಾದ್ದು. ಅರ್ಧಕ್ಕಿಂತ ಜಾಸ್ತಿ ಹಣ ಸಂಬಳ ಸಾರಿಗೆಗಳಿಗೇ ಖರ್ಚಾಗುತ್ತಿದೆ. ಏಕೆಂದರೆ ನಮ್ಮ ಸರ್ಕಾರದವರು ಈ ಐ.ಎ.ಎಸ್ ಅಧಿಕಾರಿಗಳ ಒತ್ತಡಕ್ಕೆ ಮಣಿದು ಅವರಿಗೆ ಪ್ರಮೋಶನ್ ಕೊಡಬೇಕೆಂಬ ಉದ್ದೇಶದಿಂದ ಅವರಿಗೆ ಕೊಡುತ್ತಿರುವ ಸದಾವಕಾಶವನ್ನು ದುರುಪಯೋಗ ಮಾಡಿಕೊಂಡು ದಿನೇದಿನೇ ಡಿಪಾರ್ಟ್‌ಮೆಂಟ್‌ಗಳನ್ನು ಜಾಸ್ತಿ ಮಾಡಿ ಸರ್ಕಾರಕ್ಕೆ ಬರುತ್ತಿರುವ ಒಟ್ಟು ಆದಾಯದಲ್ಲಿ ಅರ್ಧಭಾಗವನ್ನು ಇವರಿಗಾಗಿ ಖರ್ಚು ಮಾಡುತ್ತಿದ್ದಾರೆ. ಇದು ತುಂಬಾ ಅನ್ಯಾಯ. ಇದನ್ನು ನೋಡಿದರೆ ಕರ್ನಾಟಕದಲ್ಲಿ ಫೈನಾನ್ಸಿಯಲ್ ಕ್ರೈಸಿಸ್ ಇದಕ್ಕಾಗಿಯೇ ಆಯಿತು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಈ ಫೈನಾನ್ಸಿಯಲ್ ಕ್ರೈಸಿಸ್ ಅನ್ನು ಒಪ್ಪಿಕೊಳ್ಳುವಾಗ ನನಗೆ ಒಂದು ಅನುಮಾನ ಬರುತ್ತದೆ, ಇಲ್ಲಿ ಯಾರೂ ಕೂಡ ನಾನು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಾ ಇಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಮಾನ್ಯ ಮಂತ್ರಿಗಳು ಮಾತನಾಡುವುದರಲ್ಲಿ ಅವರ ಸಂಧಾನಗಳಲ್ಲಿ ನಿರತರಾಗಿದ್ದಾರೆ. ಸರ್ಕಾರವನ್ನು ಪ್ರತಿನಿಧಿಸುವವರು ಯಾರಿದ್ದಾರೆ ಇಲ್ಲಿ ?

ಶ್ರೀ ವೀರಣ್ಣ.—ಆರೋಗ್ಯ ಮಂತ್ರಿಗಳು ತಾವು ಹೇಳುವುದನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಅವರ ಡಿಪಾರ್ಟ್‌ಮೆಂಟಿಗೆ ಸಂಬಂಧಿಸಿದ್ದನ್ನು ಅವರು ನೋಟ್ ಮಾಡಿಕೊಳ್ಳುತ್ತಿದ್ದಾರೆ. ನೀವು ಕೂಡ ಅವರ ಜೊತೆಯಲ್ಲಿ ಮಾತನಾಡುತ್ತಿದ್ದೀರಿ. ಸುಮ್ಮನೆ ನಾವು ಇಲ್ಲಿ ಮಾತನಾಡಿದರೆ ಏನು ಪ್ರಯೋಜನ ?

ಶ್ರೀ ಬಿ. ರಾಚಯ್ಯ.—ನೀವು ಮಾತನಾಡಿದ್ದನ್ನು ಇಲ್ಲಿ ವರದಿಗಾರರು ಬರೆದುಕೊಳ್ಳುತ್ತಿದ್ದಾರೆ. ನಾವು ಮುಖ್ಯವಾದ ಅಂಶಗಳನ್ನು ಮಾತ್ರ ಗುರುತು ಹಾಕಿಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲಿ ಕಾಂಗ್ರೆಸ್ಸಿನವರು ಕೂಡ ಇಲ್ಲ. ಆದರೂ ಕೂಡ ಈ ಕಡೆಗೆ ಗಮನ ಕೊಡದೆ ನೀವು ನಿಮ್ಮ ಸಂಭಾಷಣೆಗಳಲ್ಲಿ ನಿರತರಾದರೆ ಹೇಗೆ ?

ಶ್ರೀ ಬಿ. ರಾಚಯ್ಯ.—ನಾನು ಗಮನಕೊಟ್ಟು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಅವರು ಕೇಳುತ್ತಿದ್ದಾರೆ. ನೀವು ಮಾತನಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಇವರ ಫೈನಾನ್ಸಿಯಲ್ ಕ್ರೈಸಿಸ್ ಯಾವ ಮಟ್ಟಕ್ಕೆ ಬಂದಿದೆ ಎಂದರೆ ಮಾನ್ಯ ನಜೀರ್ ಸಾಬ್ ಅವರು ಬಹಳ ದಿವಸಗಳಿಂದ ಸಂತೋಷದಿಂದ ಒಂದು ಮಗು ಹುಟ್ಟಿಸಿದ್ದೇವೆ. ಈ ಪ್ರಪಂಚಕ್ಕೇ ಅದು ದಾರಿ ದೀಪ ಎಂದು ಹೇಳಿಕೊಳ್ಳುತ್ತಾರೆ. ಹಳ್ಳಿಗಳಲ್ಲಿ ತಾವು ಹೋಗಿ ನೋಡಿ. ದೀಪಗಳಿಲ್ಲ, ಬಲ್ಬ್‌ಗಳಿಲ್ಲ. ಅಷ್ಟೋ ಇಷ್ಟು ಹಣ ವಸೂಲಿ ಮಾಡಿದ್ದನ್ನು ಅವರು ಬ್ಯಾಂಕ್‌ಗೆ ರೆಮಿಟ್ ಮಾಡುತ್ತಾರೆ. ಆದರೆ ರಿಕವರ್ ಮಾಡುವ ಅಧಿಕಾರ ಅವರಿಗೆ ಇಲ್ಲ. ವಾಪಸ್ಸು ಕೊಡುವ ಅಧಿಕಾರವನ್ನು ಅವರಿಂದ ತೆಗೆದುಕೊಂಡುಬಿಟ್ಟಿದ್ದಾರೆ. ನಮ್ಮ ಕಡೆಯಲ್ಲಿಯಂತೂ ಈ ಪರಿಸ್ಥಿತಿ ಇದೆ. ಶ್ರೀ ವೀರಣ್ಣನವರ ಕ್ಷೇತ್ರದಲ್ಲಿ ಪರಿಸ್ಥಿತಿ ಹೇಗಿದೆಯೋ ಗೊತ್ತಿಲ್ಲ. ನಮ್ಮ ಪಂಚಾಯಿತಿಯಲ್ಲಿ ಎರಡು ಹಳ್ಳಿಗಳು ಬರುತ್ತವೆ. ಬೈರಸಂದ್ರ ಮತ್ತು ಹೊಸಹಳ್ಳಿ ಎಂದು. ಅಲ್ಲಿ ಅಗ್ರಿಕಲ್ಚರಲ್ ಲೇಬರರ್ ಒಬ್ಬರು ನಮ್ಮ ಪಾರ್ಟಿಯಿಂದ ಗೆದ್ದು ಬಂದಿದ್ದಾರೆ, ದೀಪ ಇಲ್ಲ ಎಂದು ಪ್ರಧಾನರಿಗೆ ಹೇಳಿದರೆ ನೀವೆ ಹಾಕಿಬಿಡಿ ದುಡ್ಡು ಬಂದಮೇಲೆ ಅಡ್ಜಸ್ಟ್ ಮಾಡಿಸಿಕೊಡುತ್ತೇನೆ ಎಂದು ಅವರು ಹೇಳುತ್ತಾರಂತೆ. ದಿವಸಕ್ಕೆ ೫ ರೂಪಾಯಿಗಳನ್ನು ಸಂಪಾದನೆ ಮಾಡುವ ಅವರು ಓಟು ಕೊಟ್ಟಿರುವುದಕ್ಕೆ ಜನ ಬಯ್ಯುತ್ತಾರೆ, ದೀಪಗಳು ಇಲ್ಲ, ಎಂದರೆ 'ನೀವೇ ಹಾಕಿಸಿಕೊಳ್ಳಿ' ಎಂದು ಹೇಳಿದರೆ ಹೇಗೆ ?

ಈ ಪರಿಸ್ಥಿತಿ ಬಂದಿದೆ. ಹಣಕಾಸಿನ ಕ್ರೈಸಿಸ್ ಬಗ್ಗೆ ಸರ್ಕಾರದ ಅಂಕಿಅಂಶ ತೆಗೆದುಕೊಂಡರೂ ಕೂಡ, ಸರ್ಕಾರದ ಒಟ್ಟು ಆದಾಯ ೩೮೮೫.೭೫,೯೩,೦೦೦ ಈಗ ೬ ತಿಂಗಳಲ್ಲಿ ವಸೂಲ್ಮಾಡಿರುವುದು ೧೪೩೪೬.೭೦೦ ೦ ೦ ಇನ್ನು ಮೂರು ತಿಂಗಳು ಇದೆ ವಸೂಲ್ಮಾಡಬೇಕಾಗಿರುವುದು ಎಷ್ಟು ಎಂದರೆ ೨,೪೫೪ ಕೋಟಿ ರೂಪಾಯಿಗಳು. ಇವರು ನಿಜವಾಗಿಯೂ ವಸೂಲ್ಮಾಡುತ್ತಾರೆಯೋ ? ಫೈನಾನ್ಷಿಯಲ್ ಕ್ರೈಸಿಸ್ ಓವರ್‌ಕಮ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಇದನ್ನು ನಾವು ಯಾವರೀತಿ ಎಕ್ಸ್‌ಪೆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಏನೂ ಕೆಲಸಗಳು ನಡೆಯುತ್ತಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿಕೊಂಡಿದ್ದಾರೆ. ಬಹಳ ಸಂತೋಷದಿಂದ ಕರ್ನಾಟಕ ಜನತಾ ಆಡಳಿತದಲ್ಲಿ ೫ ಸಾರ್ಥಕ ಸಂವತ್ಸರಗಳು ಎಂದು, ಏನು ಸಾರ್ಥಕ ? ಸಾರ್ಥಕ ಆಗಿರುವುದು ಏನು ಎಂಬುದನ್ನು ಪೂರ್ತಿ ಗಮನಿಸಿದರೆ, ಇವತ್ತು ನಮ್ಮ ಸಂಬಳಗಳಿಗೆ ಮತ್ತು ಭತ್ಯೆಗಳಿಗೆ ಏನೂ ಏಟು ಆಗಿಲ್ಲ. ಹಳ್ಳಿಗಳ ಕಡೆ ಯಾವತರಹದ ಅಭಿವೃದ್ಧಿ ಕಾರ್ಯಗಳು ಆಗುತ್ತಿವೆ ಎಂಬುದನ್ನು ನೋಡಬೇಕು. ನಿನ್ನೆ ಮೊನ್ನೆ ಪತ್ರಿಕೆಯಲ್ಲಿ ನಾವು ಓದಿದ್ದೇವೆ. ಪಿ.ಡಬ್ಲ್ಯೂ.ಡಿ. ಕಂಟ್ರಾಕ್ಟರುಗಳು ಕೆಲಸ ಮಾಡುವುದನ್ನು ಬಿಟ್ಟಿದ್ದಾರೆ. ಪಿ.ಡಬ್ಲ್ಯೂ.ಡಿ ಇಲಾಖಾ ಅಧಿಕಾರಿಗಳು ಯಾವ ಕೆಲಸ ಕಾರ್ಯಗಳನ್ನೂ ತೆಗೆದುಕೊಳ್ಳುತ್ತಿಲ್ಲ. ಈ ಬಗ್ಗೆ ಮಾನ್ಯ ದೇವೇಗೌಡರು ಹೇಳಬೇಕು. ಇದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಇದನ್ನು ತಾವು ಗಮನಿಸಬೇಕು ಈ ರೀತಿ ಆದರೆ ಯಾವ ಕೆಲಸ ಮಾಡುತ್ತೀರಿ, ಎಂತಹ ಕೆಲಸಗಳನ್ನು ಮಾಡುವುದಕ್ಕಾಗುತ್ತದೆ ಪಿ.ಡಬ್ಲ್ಯೂ.ಡಿ.ನವರು ಆದ್ಯತೆಗಳಿಗನುಸಾರವಾಗಿ ಆದರೂ ಅನುಕೂಲ ಮಾಡಿಕೊಡುತ್ತಾರೆ ಎಂದರೆ, ಅವರ ಪ್ರಕಾರ ಇರಿಗೇಷನ್‌ಗೆ ಕೊಟ್ಟಿರುವ ಮೊತ್ತ ಎಷ್ಟು ೧೨೭೪ ಕೋಟಿ. ಖರ್ಚು ಮಾಡಿರುವುದು ಇದ ವರೆಗೆ ೬೫ ಕೋಟಿ ಎಂದು ಹೇಳಿದ್ದಾರೆ ಈ ೬೫ ಕೋಟಿ ಸಂಬಳಸಾರಿಗೆಗೆ ಆಗಿರುವುದಿಲ್ಲ. ಏನು ಡೆವಲಪ್‌ಮೆಂಟ್ ಆಗಿದೆ, ನೀರಾವರಿಯಲ್ಲಿ ಎಷ್ಟು ಕೆಲಸಗಳು ಆಗಿವೆ ಎಂಬುದನ್ನು ಯೋಚನೆ ಮಾಡಬೇಕು. ಇಂತಹ ಪರಿಸ್ಥಿತಿ ಮುಂದುವರಿದರೆ, ಯಾವರೀತಿ ಕರ್ನಾಟಕದ ಅಭಿವೃದ್ಧಿ ಮುಂದೆ ಹೋಗುತ್ತದೆ ? ಈ ಒಂದು

ಯೋಚನೆ ಇಲ್ಲದೆ ಸರ್ಕಾರ ನಡೆಸುತ್ತಿದ್ದಾರೆಯೂ, ಇವರು ಸಾರ್ಥಕ ಸಾಧನೆ ಏನೂ ಮಾಡಿಲ್ಲ. ಸುಮ್ಮನೆ ಕಾಲ ತಳ್ಳುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಾವು, ಇದನ್ನು ಗಮನಿಸಿದಾಗ ಮಾನ್ಯ ಮುಖ್ಯಮಂತ್ರಿಯವರು, ರಾಜ್ಯಪಾಲರ ಭಾಷಣಲ್ಲಿ ಕ್ರಿಟಿಕಲ್ ಅನಾಲಿಸಿಸ್ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಏಕೆ ಈ ರೀತಿ ಆಯಿತು, ಇದಕ್ಕೆ ಕಾರಣರು ಯಾರು ? ಕೇಂದ್ರ ಸರ್ಕಾರದ ಬಾಧ್ಯತೆ ಏನು ? ಅವರು ಕೊಟ್ಟಿರುವ ತೊಂದರೆಗಳನ್ನೂ ನಾವು ಗಮನಿಸಬೇಕು. ಮೊನ್ನೆ ಕಾಂಗ್ರೆಸ್ಸೇತರರ ಮುಖ್ಯಮಂತ್ರಿಗಳು ಸಭೆ ಸೇರಿ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಕೊಟ್ಟಿರುವ ಟರ್ಮ್ಸ್ ಆಫ್ ರೆಫರೆನ್ಸ್ ಏನಾದರೂ ಫಾಲೋ ಮಾಡಿದರೆ ರಾಜ್ಯಗಳಿಗೆ ಹಣ ಸಿಗುವುದಿಲ್ಲ. ಮಾನ್ಯ ಎಸ್.ಪಿ.ಕೆ ಸಾಳ್ವೆ ಅವರ 9ನೇ ಫೈನಾನ್ಸ್ ಕಮೀಷನ್ ಏನು ಮಾಡಿದ್ದಾರೆ. ಇದರಲ್ಲಿ ರಾಜ್ಯಗಳಿಗೆ ಹಣ ಸಿಕ್ಕುವುದಿಲ್ಲ. ಏನಾದರೂ ಟರ್ಮ್ಸ್ ಆಫ್ ರೆಫರೆನ್ಸ್ ಪೂರ್ತಿ ಬದಲಾವಣೆ ಮಾಡಿದರೆ ರಾಜ್ಯ ಸರ್ಕಾರಗಳಿಗೆ ಸ್ವಲ್ಪ ಅನುಕೂಲ ಸಿಗುತ್ತದೆ ಎಂಬುದನ್ನು ಅವರು ಒಪ್ಪಿದ್ದಾರೆ. ಇದರ ಬಗ್ಗೆ ಒಂದು ರೆಫರೆನ್ಸ್. ಇನ್ನೊಂದು ದುರಾದೃಷ್ಟವಶಾತ್ ಹೊಸ ಡೆವಲಪ್‌ಮೆಂಟ್ ಆಗಿದೆ. ಇದರ ಬಗ್ಗೆ ರೆಫರೆನ್ಸ್ ಮಾಡಿ ಜನತಾ ಸರ್ಕಾರದಲ್ಲಿ ಆಗಿರುವುದು ಏನು, ನಿಜವಾಗಿಯೂ ನಮಗೇನಾದರೂ ಪೂರ್ತಿ ಅಡ್ಮಿನಿಸ್ಟ್ರೇಷನ್ ಕಂಟ್ರೋಲ್ ಇದೆಯೇ ಎಂದರೆ, ಅದೂ ಇಲ್ಲ. ತಮಗೆ ತಿಳಿದಹಾಗೆ ಭೂಪಾಲ್‌ನಲ್ಲಿ ಕಲೆಕ್ಟರ್ಸ್ (ಜಿಲ್ಲಾಧಿಕಾರಿಗಳ) ಸಮ್ಮೇಳನ ಮಾಡಿದರು. ಅದೂ ನೇರವಾಗಿ ಪ್ರೈಮ್ ಮಿನಿಸ್ಟರ್ ಎಲ್ಲರನ್ನೂ ಕರೆಯಿಸಿ, ಅಲ್ಲಿರುವ ಜಿಲ್ಲಾಧಿಕಾರಿಗಳು, ಜಿಲ್ಲಾ ದಂಡಾಧಿಕಾರಿಗಳನ್ನು ಕರೆಯಿಸಿ, ಅವರನ್ನು ಕಂಟ್ರೋಲ್‌ಗೆ ತೆಗೆದುಕೊಂಡು ಅಲ್ಲಿನ ಆಡಳಿತ ಸೂತ್ರವನ್ನು ಅವರಿಂದ ತೆಗೆದುಕೊಂಡಾಗ ಮಾಡಿದರು. ಈಗ ಪುನಃ ಹೈದರಾಬಾದ್‌ನಲ್ಲಿ ಒಂದು ಸಭೆ ಕರೆದಿದ್ದಾರೆ. ಇದರಿಂದ ನಮಗೇನಾಗುತ್ತದೆ ಎಂದರೆ. ಹಂತ ಹಂತಕ್ಕೂ ರಾಜ್ಯಗಳ ಮೇಲೆ ಕೇಂದ್ರ ತನ್ನ ಅಧಿಕಾರವನ್ನು ಚಲಾಯಿಸುವ ರೀತಿಯಲ್ಲಿ ಹೋಗುತ್ತಿದೆ. ಇದರ ಬಗ್ಗೆ ಏನಾದರೂ ಪ್ರತಿಭಟಿಸಿದ್ದೀರಾ ? ಇದರ ಬಗ್ಗೆ ಒಂದು ಮಾತೂ ನೀವು ಹೇಳಲಿಲ್ಲ. ನಾವು ಇದೇರೀತಿ ನಡೆದುಕೊಂಡು ಹೋದರೆ ಕಾಂಗ್ರೆಸ್ಸೇತರ ಸರ್ಕಾರಗಳ ಗತಿ ಏನು ಎಂಬ ಅನುಮಾನ ಬರುತ್ತದೆ. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಬೇಕಾಗಿತ್ತು.

ಗೌರ್ನಮೆಂಟ್‌ನವರು ಈ ಬಗ್ಗೆ ಬರೆದರೆ, ಗೌರ್ನರ್‌ರವರು ಇವರ ಮಾತು 'ಕೇಳುತ್ತಾರೋ ಇಲ್ಲವೋ ಎಂಬ ಅನುಮಾನ ಇದೆ. ಆದರೂ ಕೂಡಾ ಈ ಬಗ್ಗೆ ನಾವು ಗಮನಿಸಬೇಕಾಗುತ್ತದೆ. ತಮ್ಮ ಇವರು ಸಾಧನೆಗಳ ಬಗ್ಗೆ ಹೇಳಿದ್ದಾರೆ. ಏನು ಸಾಧನೆ ಮಾಡಿದ್ದಾರೆ ಎಂದು ಒಂದೊಂದಾಗಿ ಗಮನಿಸೋಣ. ರೈತರ ಬಗ್ಗೆ ನಾನು ನಿನ್ನೆ ಹೇಳಿದೆ. ರೈತರ ಸಾಲ ಏಕೆ ಇದನ್ನು ರದ್ದು ಮಾಡಿ ಎಂದು ಹೇಳಿದೆ. ರೈತರು ನಿಜವಾಗಿಯೂ ಕೂಡ ನಿಮ್ಮನ್ನು ಒಪ್ಪುತ್ತಿಲ್ಲ. ರೈತರ ಸಾಲ ರದ್ದು ಮಾಡುತ್ತೇವೆ ಎಂದು ನೀವೇ ಒಪ್ಪಿಕೊಂಡಿದ್ದೀರಿ ರದ್ದು ಮಾಡುತ್ತೇವೆ ಎಂದು ಹೇಳಿದ್ದರೂ ಅದನ್ನು ಕೂಡ ಮಾಡಲಿಲ್ಲ ನೀವು "ನಬಾರ್ಡ್" ಹೆಸರು ಹೇಳಿಕೊಂಡು ರೈತರ ಸಾಲ ರದ್ದು ಮಾಡುವುದಕ್ಕೆ ಹಿಂದೇಟು ಹೊಡೆಯುತ್ತಿದ್ದೀರಿ. ಇನ್ನು ಎರಡನೆಯದಾಗಿ ಅನ್‌ಎಂಪ್ಲಾಯ್‌ಮೆಂಟ್ ಬಗ್ಗೆ ರೆಫರೆನ್ಸ್ ಇದೆಯೋ ಎಂದು ನೋಡಿದರೆ, ಸರ್ಕಾರದವರ ಲೆಕ್ಕದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಎಂಬುದೇ ಇಲ್ಲ. ಇವರು ಸಂಸಾರಕ್ಕೆ ಒಂದು ಕೆಲಸ ಕೊಡುತ್ತೇವೆ ಎಂದು ಹೇಳಿದ್ದರು. ಸ್ಟೈಪೆಂಡರಿ ಗ್ರಾಜುಯೇಟ್ಸ್‌ನ್ನು ಕನ್‌ಫರ್ಮ್ ಮಾಡಲಿಲ್ಲ. ಲೋಕಲ್ ಕ್ಯಾಂಡಿಡೇಟ್ಸ್‌ನಲ್ಲಿ ಕೆಲವರನ್ನು ಕನ್‌ಫರ್ಮ್ ಮಾಡಿದರು ಹೊಸದಾಗಿ ಇನ್ನು ಮೂರು ವರ್ಷಗಳ ಕಾಲ ಯಾರನ್ನೂ ಸರಕಾರೀ ಕೆಲಸಗಳಿಗೆ ತೆಗೆದುಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಇದಕ್ಕೆ ನಮ್ಮ ಚೀಫ್ ಮಿನಿಸ್ಟರ್‌ರವರು ಒಂದು ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ಅದರ ಪ್ರಕಾರ ಇವರು ಹೇಳುವುದು ಏನೆಂದರೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸುತ್ತೇವೆ. ಇದಕ್ಕೆ ಅವರೇನಾದರೂ ಕನ್‌ಕರೆನ್ಸ್ ಕೊಟ್ಟರೆ ಹೊಸದಾಗಿ ಎಂಪ್ಲಾಯ್‌ಮೆಂಟ್‌ಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ಇದು ಏನಾಗುತ್ತದೆ ಎಂದರೆ ಇವರು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಒಂದು ಅರ್ಜಿ ಕೊಡುವುದು, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಅದನ್ನು ಟರ್ನ್‌ಡೌನ್ ಮಾಡುವುದು. ಅಂತೂ ಇಂತೂ ಕೆಲಸ ಕೊಡುವುದಿಲ್ಲ. ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಬಗ್ಗೆ ಇವರು ಯಾವುದೊಂದು ಕಾಳಜಿಯನ್ನೂ ವಹಿಸಿಲ್ಲ ಎಂದು ಸ್ಪಷ್ಟವಾಗುತ್ತದೆ. ಇನ್ನು ಇಂಡಸ್ಟ್ರಿಯಲ್ ರಿಲೇಷನ್ಸ್ ಬಗ್ಗೆ ಹೇಳುವುದಾದರೆ, ಇದು ಬಹಳ ಶಾಂತಿಯುತವಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಕಾಂತಾರವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕಾಳಜಿ ಇದೆ. ಆದರೆ ಆಗಿರುವುದು ಏನು ? ತಮಗೆ ತಿಳಿದಹಾಗೆ ಸುಮಾರು ಆರು ಸಾವಿರ

ಚಿಕ್ಕ ದೊಡ್ಡ ಪ್ರಮಾಣದ ಇಂಡಸ್ಟ್ರಿಗಳೆಲ್ಲಾ ಕ್ಲೋಸ್ ಆಗಿವೆ. ಲಕ್ಷಾಂತರ ಜನ ಕೆಲಸ ಇಲ್ಲದೆ ಹೋಗುವಂತಾಗಿದೆ. ಬೆಂಗಳೂರಿನಲ್ಲಿರುವ ಇಂಡಿಯನ್ ಟೊಬ್ಯಾಕೋ ಕಂಪನಿಯಲ್ಲಿ ಕಳೆದ ಮೂರು ತಿಂಗಳಿಂದ ಸ್ಟ್ರೈಕ್ ನಡೆಯುತ್ತಿದೆ. ಇಂತಹ ನೂರಾರು ಕಂಪೆನಿಗಳು ಕ್ಲೋಸ್ ಆಗಿದೆ. ಇದರ ಬಗ್ಗೆ ಸರಕಾರ ಏನಾದರೂ ಹಿಡಿತ ಇಟ್ಟುಕೊಂಡಿದ್ದಾರೆಯೇ ಎಂದರೆ ಇಲ್ಲ, ಅದನ್ನು ಬಿಟ್ಟಿದ್ದಾರೆ. ಜೊತೆಗೆ ನಡೆಯುತ್ತಿರುವುದು ಏನು ಎಂದರೆ ಪೋಲೀಸರ ಇಂಟರ್‌ಫಿಯರೆನ್ಸ್. ನಾನ್ ಕಾಂಗ್ರೆಸ್ (ಐ) ಗೌರ್ನ್‌ಮೆಂಟ್ ಇರುವ ರಾಜ್ಯಗಳಾದ ವೆಸ್ಟ್ ಬೆಂಗಾಲ ಹಾಗೂ ಕೇರಳಗಳಲ್ಲಿ ಪೋಲೀಸರ ನಾನ್ ಇಂಟರ್‌ಫಿಯರೆನ್ಸ್ ಇದೆ. ಇಲ್ಲಿ ಸ್ಟ್ರೈಕ್ ಆದಾಗ ಯಜಮಾನರ ಪರ ಹೋಗಿ ವರ್ಕರ್ಸ್‌ನ್ನು ಹೊಡೆಯುವುದು ಬಡಿಯುವುದು ಇಲ್ಲ. ಅಂತಹ ಒಂದು ಪಾಲಿಸಿಯನ್ನು ನೀವು ಇಲ್ಲಿ ಅನುಸರಿಸುವುದಿಲ್ಲ, ಜನತಾ ಸರ್ಕಾರದವರು ಇದರ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡಿ, ಯಜಮಾನರು ಮತ್ತು ಕಾರ್ಮಿಕರ ನಡುವೆ ಹೋರಾಟ ನಡೆದಾಗ, ಯಜಮಾನರ ಪರ ವಕಾಲತ್ತು ಹೋಗದೆ ಸುಮ್ಮನಿದ್ದರೂ ಸಾಕಾಗುತ್ತದೆ, ಆದರೆ ಮಾಲೀಕರ ಪರ ಹೋಗಿ ವರ್ಕರ್ಸ್‌ನ್ನು ಸದೆ ಬಡೆಯುತ್ತಾರೆ. ಇಂಡಸ್ಟ್ರಿಯಲ್ ರಿಲೇಷನ್ ಬಹಳ ಚೆನ್ನಾಗಿದೆ ಎಂದು ಏನು ಹೇಳುತ್ತಿದ್ದೀರಿ ಅದು ಸರಿಯಲ್ಲ. ತಮಗೆ ತಿಳಿದಹಾಗೆ ಮೈಸೂರಿನಲ್ಲಿ ಕೆ. ಆರ್. ಮಿಲ್ಸ್ ಮುಚ್ಚಿದೆ. ಮಾನ್ಯ ಪಂಪಾಪತಿಯವರನ್ನು ಅರೆಸ್ಟ್ ಮಾಡಿದ್ದಾರೆ ಎಂದು ಸಭಾಧ್ಯಕ್ಷರು ಹೇಳಿದ್ದಾರೆ. ದಾವಣಗೆರೆಯಲ್ಲಿ ಮೂರು ನಾಲ್ಕು ಟೆಕ್ಸ್‌ಟೈಲ್ ಮಿಲ್ಸ್ ಮುಚ್ಚಿದೆ. ಒಂದು ರೀತಿಯ ಇಂಡಸ್ಟ್ರಿಯಲ್ ಸ್ಲಂಪ್ ಇದೆ. ಇದಕ್ಕೆ ಮುಖ್ಯವಾದ ಕಾರಣ ಏನು ? ಇನ್ನೊಂದು ಕಾರಣ ತಾವು ನಿನ್ನೆಯೇ ಹೇಳಿದಹಾಗೆ ಎಲೆಕ್ಟ್ರಿಸಿಟಿ ಪ್ರಾಬ್ಲಂ. ಎಲೆಕ್ಟ್ರಿಸಿಟಿ ಬಗ್ಗೆ ಹೇಳುವಾಗ ಮೊದಲು ಯೋಜನೆಗಳು ಏನಿದ್ದವೋ, ಆ ಯೋಜನೆಗಳನ್ನೇ ನೀವು ನಂಬಿಕೊಂಡು ಈಗ ನಾವು ಕೆಟ್ಟಿದ್ದೇವೆ, ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಸಾಧನೆಯಲ್ಲಿ ಶೈಶವಾವಸ್ಥೆಯಲ್ಲಿ ನೀಡಿದ ಒತ್ತನ್ನು ಬಿಟ್ಟರೆ ನಂತರ ಹೊಸ ಯೋಜನೆಗಳ ಕಡೆಗೆ ಗಮನ ನೀಡಲಿಲ್ಲ ಎನ್ನುವುದು, ವಿದ್ಯುಚ್ಛಕ್ತಿ ಕೊರತೆಗೆ ಮುಖ್ಯಕಾರಣವಾಗಿದೆ ಎಂದು ಹೇಳಿದ್ದಾರೆ. ಎಲೆಕ್ಟ್ರಿಸಿಟಿ ಬಹಳ ಪ್ರಿಯಾರಿಟಿ ಸೆಕ್ಟರ್. ಇದರ ಬಗ್ಗೆ ಇನ್ನೂ ವ್ಯವಸ್ಥೆ ಶೈಶವಾವಸ್ಥೆಯಲ್ಲಿದೆ ಎಂದು ಇವರೇ ಒಪ್ಪಿಕೊಂಡಿದ್ದಾರೆ. ಕೈಗಾ ಪ್ಲಾಂಟ್‌ನ್ನು ಬೇಗ ಕಾರ್ಯಗತ ಮಾಡಬೇಕು. ರಾಮಗೊಂಡಂನಲ್ಲಿ ಹಾಗೂ ಇತರ ಅನೇಕ ಕಡೆಗಳಲ್ಲಿ ಥರ್ಮಲ್‌ಪ್ಲಾಂಟ್ ಬೇಕಾದಷ್ಟು ಇವೆ. ಆದರೆ ಕೈಗಾದಲ್ಲಿ ಸ್ಥಾಪಿಸಬೇಕೆಂದಿರುವ ಅಣು ವಿದ್ಯುತ್ ಯೋಜನೆ ಬಗ್ಗೆ ಕೆಲವರು ವಿರೋಧಿಸುತ್ತಿದ್ದಾರೆ. ಇದರಿಂದ ಎಕಲಾಜಿಕಲ್ ಇಂಬ್ಯಾಲೆನ್ಸ್ ಆಗುತ್ತದೆ, ಅಥವಾ ಚೆರ್ನೋಬಿಲ್ ಟೈಪ್ ಪ್ರಮಾದವಾಗುತ್ತದೆ, ಆದುದರಿಂದ ಇದನ್ನು ಕೈಬಿಡಿ ಎಂದು ಹೇಳುತ್ತಿದ್ದಾರೆ. ಪ್ರಪಂಚದಲ್ಲಿ ಇವತ್ತು ಥರ್ಮಲ್ ಪ್ಲಾಂಟ್ ಹಾಗೂ ಅಣುವಿದ್ಯುತ್ ಯೋಜನೆಗಳನ್ನು ವಿದ್ಯುಚ್ಛಕ್ತಿ ತಯಾರಿಸಲು ಎಸ್ಟಾಬ್ಲಿಷ್ ಮಾಡಿದ್ದಾರೆ. ಅವು ನಡೆದು ಅನುಕೂಲವಾಗುತ್ತಿದೆ. ಮದ್ರಾಸ್ ಸಿಟಿಯಲ್ಲೂ ಸಹ ಒಂದು ಪ್ಲಾಂಟ್ ಇಂತಹದೇ ಇದೆ. ಇಂತಹದನ್ನೇ ಕೈಗಾದಲ್ಲೂ ಮಾಡಿದರೆ ಏನೂ ಅನಾನುಕೂಲ ಆಗುವುದಿಲ್ಲ. ಆದುದರಿಂದ ಕೈಗಾ ಪ್ಲಾಂಟನ್ನು ತಕ್ಷಣ ತೆಗೆದುಕೊಂಡು ವಿದ್ಯುಚ್ಛಕ್ತಿ ಉತ್ಪಾದಿಸಿ, ಉದ್ಯಮಗಳಿಗೆ ಒದಗಿಸಿ ಕೊಡದೇ ಹೋದರೆ ಈ ಉದ್ಯಮಗಳು ನಡೆಯುವುದಿಲ್ಲ ಹಾಗೂ ಹೊಸದಾಗಿ ಸ್ಥಾಪನೆಯಾಗುವುದಿಲ್ಲ ತಾವು ಒಂದು ದಿವಸ ಏನಾದರೂ ತಮಿಳುನಾಡು ಬಾರ್ಡರ್‌ನಲ್ಲಿ 10 ಮೈಲಿ ದೂರದಲ್ಲಿರುವ ಹೊಸೂರಿಗೆ ಹೋದರೆ, ಅಲ್ಲಿ ಒಂದು ಬಹಳ ದೊಡ್ಡ ಇಂಡಸ್ಟ್ರಿಯಲ್ ಸಿಟಿ ಡೆವಲಪ್ ಆಗುತ್ತಿರುವುದನ್ನು ತಾವು ನೋಡಬಹುದು. ಅದೇ ರೀತಿ ಆಂಧ್ರದಲ್ಲೂ ಸಹ ಸಾಕಷ್ಟು ವಿದ್ಯುಚ್ಛಕ್ತಿ ಒದಗಿಸುತ್ತಿದ್ದಾರೆ. ಹಿಂದೂಪುರದಲ್ಲಿ ಒಂದು ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ ಬರುತ್ತಿದೆ.

ಆಂಧ್ರ ಮತ್ತು ತಮಿಳುನಾಡಿನಲ್ಲಿ ವಿದ್ಯುಚ್ಛಕ್ತಿ ಬೇಕಾದಷ್ಟು ಇದೆ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ಕೊರತೆ ಇದೆ ಎಂದು ಉದ್ಯಮಿಗಳು ಅಲ್ಲಿ ಹೋಗಿ ಉದ್ದಿಮೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ಇದರ ಬಗ್ಗೆ ನಮ್ಮ ಸ್ನೇಹಿತರು ಹೆಚ್ಚಿಗೆ ಗಮನಿಸಬೇಕು. ನಮ್ಮ ಪಕ್ಷದವರಿಗೆ ಯಾವ ರೀತಿಯಲ್ಲಾದರೂ ಕೂಡ ಕಾಂಗ್ರೆಸ್ ಪಕ್ಷ ಏನಿದೆ ಅದು ಕರ್ನಾಟಕವನ್ನು ನುಂಗುವುದೋ ಎಂಬ ಭಯ ಇದೆ. ಈ ಕಾಂಗ್ರೆಸ್ ಪಾರ್ಟಿ ಏನಿದೆ ಅವನ್ನು ಬಕಾಸುರನ ಪಾರ್ಟಿ ಎಂದು ನಾವು ಹೇಳುವುದು. ತಾವು ಜನಗಳಿಗೆ ಏನು ಮಾಡಬೇಕಾಗಿದೆ ಎಂದು ಯೋಚನೆ ಮಾಡಬೇಕು. ಮಾನ್ಯ ಹೆಗಡೆಯವರು ಹೇಳಿದರು ಜನಗಳು ಬೇಜಾರು ಬಿದ್ದಿದ್ದಾರೆ ಮೊದಲು ಇದ್ದಷ್ಟು ನಮಗೆ ಪ್ರಾಬಲ್ಯ, ಹೆಸರು ಇಲ್ಲ ಕೆಟ್ಟಿದೆ ಅದನ್ನು ಒಪ್ಪಿಕೊಳ್ಳುತ್ತೇನೆ ಎಂದು ಅದನ್ನು ಒಪ್ಪಿಕೊಳ್ಳುವವರು ಇವರು ಮಾಡುತ್ತಿರುವುದಾದರೂ ಏನು ಎಂದು ಇವತ್ತು ಕೇಳಬೇಕಾಗುತ್ತದೆ? ಇವರು ಯಾವ ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡು

ಮುಂದೆ ಹೋಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ರೈತರ ಸಾಲವನ್ನು ರದ್ದು ಮಾಡಲಿ ಮತ್ತು ರೈತರ ಕೆಲವು ಬೆಳೆಗಳಿಗಾದರೂ ನ್ಯಾಯವಾದ ಬೆಲೆಯನ್ನು ಕೊಡಲಿ, ಇಂತಹ ಕಾರ್ಯಕ್ರಮ ಗಳನ್ನು ಹಾಕಿಕೊಂಡು ಕಾಂಗ್ರೆಸ್ಸಿಗೂ ನಮಗೂ ಸ್ವಲ್ಪ ಡಿಫರೆನ್ಸ್ ಇದೆ ಎಂದು ತೋರಿಸಿಕೊಳ್ಳಲಿ. ಪ್ರಾಂತ್ಯಾಧಾರಿತ ರಾಜಕಾರಣವೆಂದು ಬಾಯಿಲ್ಲಿ ಹೇಳುವುದಲ್ಲ, ನಮ್ಮ ಮಾತನ್ನು ಕೃತಿಗೆ ಇಳಿಸುತ್ತೇ ವೆಂದು ಮುನ್ನುಗ್ಗಿದರೆ ಆಗುತ್ತದೆ, ಇಲ್ಲದಿದ್ದರೆ ಇಲ್ಲ. ಮಾನ್ಯ ರಮೇಶ್‌ಕುಮಾರ್‌ರವರು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಬಹಳ ಚೆನ್ನಾಗಿ ಹೇಳಿದರು ಅದರ ಇಂಪ್ಲಿಮೆಂಟೇಷನ್ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟರು. ತಾವು ಕೂಡ ರೈತರ ಚಳುವಳಿಯಿಂದ ಇಲ್ಲಿಗೆ ಬಂದು ಆ ಜಾಗವನ್ನು ಆಕ್ರಮಿಸಿರುವಿರಿ, ಈಗ ಕರ್ನಾಟಕದಲ್ಲಿ ಎಷ್ಟು ಜನ ಜಮೀನ್ದಾರರು ಲ್ಯಾಂಡ್ ರಿಫಾರ್ಮ್ ಆ್ಯಕ್ಟ್ ಅನ್ನು ಇಂಪ್ಲಿಮೆಂಟ್ ಮಾಡಿದೆ ೪೮ ಎಕರೆ ಇರಬೇಕೆಂದು ಇದ್ದರೂ ಕೂಡ ೨-೩ ಸಾವಿರ ಎಕರೆ ಜಮೀನು ಹೊಂದಿರುವವರು ಬೇಕಾದಷ್ಟು ಜನ ಇದ್ದಾರೆ. ಮೊನ್ನೆ ನಾನು ಒಬ್ಬ ಜಮೀನ್ದಾರನನ್ನು ಕೇಳಿದೆ ನಿಮ್ಮ ಹತ್ತಿರ ಎಷ್ಟು ಜಮೀನು ಇದೆ, ಅದಕ್ಕೆ ಅವನು ಹೇಳಿದ ೬೦೦ ಎಕರೆ ಇದೆ ಎಂದು. ಮತ್ತೊಬ್ಬರನ್ನು ಕೇಳಿದ್ದಕ್ಕೆ ಅವನು ೨೦೦೦ ಎಕರೆ ಇದೆ ಎಂದು ಹೇಳಿದ ಆ ಎರಡು ಸಾವಿರ ಎಕರೆ ಯನ್ನು ಹೇಗೆ ವ್ಯವಸಾಯ ಮಾಡಿಸುತ್ತೀರಿ ಎಂದು ಕೇಳಿದ್ದಕ್ಕೆ ನಮ್ಮ ರೈತರು ಬಹಳ ಒಳ್ಳೆಯವರು ಅವರೇ ವ್ಯವಸಾಯ ಮಾಡಿ ನಮಗೆ ಕೊಡುತ್ತಾರೆ ಯಾವ ತಕರಾರನ್ನು ಮಾಡುವುದಿಲ್ಲ ಎಂದು ಹೇಳಿದ. ಇಂತಹವರು ಬೇಕಾದಷ್ಟು ಮಂದಿ ಇದ್ದಾರೆ. ಹಿಂದೆ ಇದ್ದಂತಹ ಲ್ಯಾಂಡ್ ರಿಫಾರ್ಮ್ ಆಕ್ಟ್ ಅನ್ನು ಜಾರಿಗೆ ತಂದರೆ ೨೦-೩೦ ಲಕ್ಷ ಜಮೀನು ಸಿಕ್ಕುತ್ತದೆ. ಅವನ್ನು ಜಾರಿಗೆ ತಂದು ಹೊಸದಾಗಿ ಟೆನೆಂಟ್ಸ್‌ಗೆ ಅಪ್ಲಿಕೇಷನ್ಸ್ ಹಾಕುವುದಕ್ಕೆ ಅನುಕೂಲ ಮಾಡಿಕೊಟ್ಟಲ್ಲಿ ಈಗಲೂ ಕೂಡ ಲಕ್ಷಾಂತರ ಅರ್ಜಿಗಳು ಬರು ತ್ತವೆ. ಆದರೆ ಟೆನೆನ್ಸಿ ಪ್ರಾಬ್ಲಂ ಮುಗಿದಿದೆ ಎಂದು ಅದನ್ನು ಬ್ಯಾನ್ ಮಾಡಿದಿರಿ ಅದು ಮುಗಿದಿಲ್ಲ. ನಾವೂ ಕೂಡ ಬಡವರಪರವಾಗಿದ್ದೇವೆ ಎಂದು ಯೋಚನೆ ಮಾಡುವ ಹಾಗಿದ್ದರೆ ಈಗಲೂ ಲ್ಯಾಂಡ್ ರೀಫಾರ್ಮ್ ಆ್ಯಕ್ಟ್ ಅನ್ನು ಜಾರಿಗೆ ತಂದರೆ ಅನುಕೂಲವಾಗುತ್ತದೆ ಎಂದು ಅವರು ಹೇಳುತ್ತಿದ್ದಾರೆ. ಅರ್ಜಿಗಳನ್ನು ಕರೆಯಲಿ ನಾವೆಲ್ಲ ಅರ್ಜಿ ಹಾಕುತ್ತೇವೆ ನಾವು ಸಹಾಯ ಮಾಡುತ್ತೇವೆಂದು, ನಮಗೆ ಹೊಸದಾಗಿ ಟೆನೆಂಟ್ಸ್ ಅಪ್ಲಿಕೇಷನ್ಸ್ ಹಾಕುವುದಕ್ಕೆ ಅವಕಾಶ ಕೊಡಿ. ಇನ್ನು ಕೃಷಿಕರ ಬಗ್ಗೆ ಹೇಳುವು ದಾದರೆ ನೂರಕ್ಕೆ ೧೫-೨೦ ಜನ ಇದ್ದಾರೆ ಇವರಿಗೆ ಮಿನಿಮಮ್ ವೇಜಸ್ ಮಾಡಿದ್ದೇವೆಂದು ಹೇಳುತ್ತೀರಿ ಆದರೆ ನಿಮ್ಮ ಕಾನೂನನ್ನು ಕೇಳುವವರು ಯಾರು ಹತ್ತು ರೂಪಾಯಿ ಕೂಲಿ ಮಾಡಿದ್ದೀರಿ, ಆದರೆ ಅವರಿಗೆ ೫-೬ ರೂಪಾಯಿಗಳು ಸಿಗುತ್ತಿಲ್ಲ. ಅದು ಇಂಪ್ಲಿಮೆಂಟ್ ಆಗಿದೆಯೋ ಎಂಬುದರ ಬಗ್ಗೆ ಕಾಳಜಿ ವಹಿಸಬೇಕು. ಇನ್ನು ಬಾಂಡೆಡ್ ಲೇಬರ್ಸ್ ಕಾನೂನು ಎಂದು ಮಾಡಿದರು, ಇಂದಿರಾಗಾಂಧಿ ಯವರ ಕಾಲದಲ್ಲಿ ಈ ಸಿಸ್ಟಂ ಪಾಲಿಸಿಯಾಗಿ ಹೋಯಿತು. ಈಗಲೂ ಕೂಡ ಸಾವಿರಾರು ಜನ ಇದ್ದಾರೆ ಅವರ ಬಗ್ಗೆ ಕೂಡ ಕಾಳಜಿಯನ್ನು ವಹಿಸಬೇಕು. ಯಾರು ಬಡ ರೈತರಿದ್ದಾರೆ, ಕೃಷಿಕರಿದ್ದಾರೆ ಅಂತಹವರ ಬಗ್ಗೆ ಸ್ವಲ್ಪ ಹೆಚ್ಚಿನ ಗಮನವನ್ನು ಕೊಟ್ಟರೆ ಈ ಜನತಾ ಸರ್ಕಾರ ನಿಜವಾಗಿಯೂ ಕೂಡ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳುತ್ತದೆ. ಪುನಃ ಕರ್ನಾಟಕದಲ್ಲಿ ಗುಂಡೂರಾಯರು ಎಂದರೆ ಕಾಂಗ್ರೆಸ್ ಕರ್ನಾಟಕದಲ್ಲಿ ಬರುವುದಕ್ಕೆ ಅವಕಾಶ ಮಾಡಿಕೊಡಬಾರದು, ಅದಕ್ಕೋಸ್ಕರ ಬಡವರ ಬಗ್ಗೆ ಹೆಚ್ಚಿಗೆ ಕಾಳಜಿ ಇದೆ ಎಂದು ತೋರಿಸುವುದು ಅವಶ್ಯಕತೆ ಇದೆ ಎಂದು ನನಗನಿಸುತ್ತದೆ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದನ್ನು ನಾನು ಅನುಮೋದಿಸುತ್ತಾ, ಹೇಳುವುದೇನೆಂದರೆ ಇದು ಬರೀ ಮಧ್ಯಮ ವರ್ಗದ ಸರ್ಕಾರ ಅಲ್ಲ, ಇದು ಬಡವರ ಸರ್ಕಾರ ಕೂಡ ಎಂದು ಹೇಳುವಂತಹ ಪರಿಸ್ಥಿತಿ ಬರಬೇಕು. ಮತ್ತು ಆ ಬಗ್ಗೆ ಗಮನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೂ ಒಂದು ಎಂದರೆ, ಇಲ್ಲಿ ಗೌರ್ನ್‌ಮೆಂಟ್ ಇದೆಯೋ ಇಲ್ಲವೇ ಎನ್ನುವುದೇ ಅನುಮಾನ. ಏಕೆಂದರೆ ಪೊಲಿಟಿಕಲ್ ಆಗಿ ಯಾವ ಕೆಲಸವೂ ನಡೆಯುತ್ತಿಲ್ಲ. ಎಲ್ಲಾ ಕೆಲಸ ನಡೆಯುತ್ತಿರುವುದು ಬ್ಯೂರೋಕ್ರಸಿಯವರಿಂದ. ಅವರೇ ಕರ್ನಾಟಕದ ರಾಜ್ಯಭಾರ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಯಾವುದೇ ಕಾನೂನುಗಳನ್ನು ಮಾಡಲಿ ಅವುಗಳು ಇಂಪ್ಲಿಮೆಂಟ್ ಆಗುವುದಿಲ್ಲ. ಕಾನೂನುಗಳು ಸರಿಯಾಗಿ ಇಂಪ್ಲಿಮೆಂಟ್ ಆಗದ ರೀತಿಯಲ್ಲಿ ನೋಡಿಕೊಳ್ಳುವ ಬ್ಯೂರೋಕ್ರಸಿಗಳು ನಮ್ಮ ರಾಜ್ಯದಲ್ಲಿ ಇದ್ದಾರೆ, ನಮ್ಮ ಮಂತ್ರಿಗಳಲ್ಲಿ ಕೆಲವರು ತಮ್ಮ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುವಷ್ಟು ಶಕ್ತಿ ಇಲ್ಲದವರು ಇದ್ದಾರೆ. ಕೆಲವು ಮಂತ್ರಿಗಳು ತಮ್ಮ ಕೆಲಸಗಳನ್ನು ಜಬರ್‌ದಸ್ತಿಯಿಂದ ಮಾಡಿಸುವವರೂ ಇದ್ದಾರೆ. ನಮ್ಮ ರಾಜ್ಯ ದಲ್ಲಿ ಬ್ಯೂರೋಕ್ರಸಿ ಎಷ್ಟು ಪ್ರಬಲವಾಗಿದೆ ಎಂದರೆ, ಅವರೇ ಕೆಲವು ಪಾಲಿಸಿ ಡಿಸಿಷನ್‌ಗಳನ್ನು ತೆಗೆದು ಕೊಳ್ಳುವ ಮಟ್ಟದಲ್ಲಿ ಇದ್ದಾರೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರ ಎಷ್ಟು ಜಾಸ್ತಿ

ಯಾಗಿದೆ ಎಂದರೆ. ಇದನ್ನು ನಾನೇ ಹೇಳುತ್ತಿಲ್ಲ, ಜನಗಳೇ ಇದನ್ನು ಹೇಳುತ್ತಿದ್ದಾರೆ, ಕಾಂಗ್ರೆಸ್‌ನವರ ಕಾಲದಲ್ಲಿ ಲಂಚ ಕೊಟ್ಟರೆ ಕೆಲಸ ಆಗುತ್ತಿತ್ತು, ಜನತಾ ಸರ್ಕಾರ ಬಂದ ಮೇಲೆ ಲಂಚ ಕೊಟ್ಟರೂ ಕೆಲಸ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ ಈ ಪರಿಸ್ಥಿತಿಗೆ ಇವತ್ತು ಈ ಸರ್ಕಾರ ಬಂದು ಮುಟ್ಟಿದೆ. ಈಗ ಬಹಳ ಕೆಳಮಟ್ಟಕ್ಕೆ ನಾವು ಇಳಿದಿದ್ದೇವೆ. ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಮಾನ್ಯ ಗುಂಡೂರಾಯರ ಕಾಲದಲ್ಲಿ ಕೆಲವು ಐ.ಎ.ಎಸ್. ಆಫೀಸರ್‌ಗಳನ್ನು ಹಿಡಿದು ಅವರ ಮೇಲೆ ಕೇಸ್‌ಗಳನ್ನು ಹಾಕಿದ್ದರು. ಕೆಲವು ಚೀಫ್ ಇಂಜಿನೀಯರ್‌ಗಳನ್ನು ಹಿಡಿದು ಅವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದರು. ಅನೇಕ ಇನ್ನಿತರ ಆಫೀಸರ್‌ಗಳ ಮನೆಗೆ ರೇಡ್ ಮಾಡಿದ್ದರು. ಆದರೆ, ೪ ಈ ವರ್ಷಗಳಲ್ಲಿ ಯಾವ ಆಫೀಸರ್ ಮೇಲೂ ಕೇಸ್ ಹಾಕಿಲ್ಲ. ಭ್ರಷ್ಟಾಚಾರದ ವಿಷಯದಲ್ಲಿ ನಾನು ಮೊದಲು ಒಂದು ಇನ್‌ಸ್ಟೆನ್ಸ್‌ನು ಕೊಟ್ಟು ಹೇಳಿದ್ದೆ. ರೇಷ್ಮೆ ಇಲಾಖೆಯಲ್ಲಿ ಒಂದು ಏರ್ ಕಂಡೀಷನ್ಡ್ ಪ್ಲಾನ್ ತಯಾರು ಮಾಡುವುದಕ್ಕೆ ೧೦ ಕೋಟಿ ರೂಪಾಯಿಗಳ ಟೆಂಡರನ್ನು ಕರೆಯಲಾಗಿತ್ತು, ಬ್ಲೂ ಸ್ಟಾರ್ ಎನ್ನುವ ಒಂದು ಕಂಪನಿಯನ್ನು ಇದಕ್ಕೆ ೧೨ ಕೋಟಿ ರೂಪಾಯಿಗಳಾಗುತ್ತವೆಂದು ಟೆಂಡರ್‌ಗೆ ಅರ್ಜಿಯನ್ನು ಹಾಕಿಕೊಂಡಿತ್ತು. ಇನ್ನೊಂದು ಕಂಪನಿ ೧೪.೩೩ ಲಕ್ಷ ರೂಪಾಯಿಗಳಾಗುತ್ತದೆಂದು ಟೆಂಡರ್ ಹಾಕಿಕೊಂಡಿತ್ತು. ಈ ಟೆಂಡರ್‌ಗಳಲ್ಲಿ ೧೪.೩೩ ಲಕ್ಷ ರೂಪಾಯಿಗಳಾಗುತ್ತವೆಂದು ಹೇಳಿದ್ದ ಕಂಪನಿಗೆ ಟೆಂಡರ್‌ನ್ನು ಕೊಟ್ಟರು. ಈ ಟೆಂಡರ್ ಕೊಡುವುದರಲ್ಲಿ ಸೀನಿಯರ್ ಸೆಕ್ರೆಟರಿಗಳೇ ಇನ್‌ವಾಲ್ವ್ ಆಗಿದ್ದಾರೆ. ಆ ಇಬ್ಬರು ಸೆಕ್ರೆಟರಿಗಳೇ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಈ ಟೆಂಡರ್ ಆಕ್ಸೆಪ್ಟ್ ಮಾಡಿಕೊಳ್ಳುವುದರಲ್ಲಿ ಲಪಟಾಯಿಸಿದ್ದಾರೆ. ಇದೇ ತರಹ ನೂರಾರು ಭ್ರಷ್ಟಾಚಾರ ಕೇಸ್‌ಗಳು ಇವೆ. ಮೊದಲು ರಾಜಗೋಪಾಲಾಚಾರಿಯವರು ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಕೆಲಸ ಮಾಡುವ ನೌಕರರು ಲಂಚ ತೆಗೆದುಕೊಳ್ಳುವುದರಲ್ಲಿ ನಂಬರ್ ಒನ್ ಎಂದು ಹೇಳುತ್ತಿದ್ದರು. ಈಗ ಎಲ್ಲಾ ಇಲಾಖೆಗಳಲ್ಲೂ ಲಂಚ ಕೊಡಲೇಬೇಕು. ನಾನು ತಿಳಿದುಕೊಂಡಿರುವ ಪ್ರಕಾರ ಲಂಚ ತೆಗೆದುಕೊಳ್ಳುವುದರಲ್ಲಿ ಮೊದಲನೇಯದು ಅಂದರೆ ಎಕ್ಸೈಸ್ ಡಿಪಾರ್ಟ್‌ಮೆಂಟ್. ಈ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನ್ನು ಸ್ಟ್ರೀಮ್‌ಲೈನ್ ಮಾಡಿದರೆ, ಈಗ ಸರ್ಕಾರಕ್ಕೆ ವರ್ಷಕ್ಕೆ ಬರುತ್ತಿರುವ ಮುನ್ನೂರು ಕೋಟಿ ರೂಪಾಯಿಗಳ ಬದಲು ಏಳುನೂರು ಅಥವಾ ಎಂಟು ನೂರು ಕೋಟಿ ರೂಪಾಯಿಗಳು ಬರುತ್ತದೆ. ಡಿಸ್ಟಿಲರ್ಸ್‌ಗಳಾದ ಖೋಡೆ, ಮ್ಯಾಕ್‌ಡೋಲ್, ಅಮೃತ್ ಡಿಸ್ಟಿಲರಿಯವರು ಒಬ್ಬೊಬ್ಬರು ಒಂದು ದಿನಕ್ಕೆ ಒಂದು ಕೋಟಿ ರೂಪಾಯಿಗಳ ಅಷ್ಟು ಹಣವನ್ನು ನಮ್ಮ ರಾಜ್ಯದ ಬೊಕ್ಕಸಕ್ಕೆ ಮೋಸ ಮಾಡುತ್ತಿದ್ದಾರೆ. ಯಾರಿಗೋ ಲಂಚ ಕೊಡುತ್ತಾರೆ, ಎಲ್ಲಾ ಸರಿಮಾಡಿಕೊಂಡು ಕೆಲಸ ಮಾಡುತ್ತಾರೆ. ಲಂಚ ತೆಗೆದುಕೊಳ್ಳುವುದರಿಂದ ಯಾರೂ ಅವರ ತಂಟೆಗೆ ಹೋಗುವುದಿಲ್ಲ. ರಾಜಕಾರಣಿಗಳಿಗೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ರಾಜಕಾರಣಿಗಳಿಗೂ ಅಧಿಕಾರಿಗಳಿಗೂ ಬೇಕಾದಷ್ಟು ದುಡ್ಡು ಕೊಟ್ಟು ಸರ್ಕಾರಕ್ಕೆ ಮೋಸವನ್ನು ಅವರು ಮಾಡುತ್ತಾರೆ ಈ ರೀತಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಸರ್ಕಾರ ತಡೆಗಟ್ಟದಿದ್ದರೆ ಸರ್ಕಾರಕ್ಕೆ ಫೈನಾನ್‌ಶಿಯಲ್ ಕ್ರೈಸಿಸ್ ಆಗುತ್ತದೆ. ಮತ್ತು ಇನ್ನೂ ಹೆಚ್ಚು ಭ್ರಷ್ಟಾಚಾರ ನಡೆಯುತ್ತಾ ಹೋಗುತ್ತದೆ. ಲಂಚ ತೆಗೆದುಕೊಳ್ಳುವ ಮೊದಲನೆಯ ಡಿಪಾರ್ಟ್‌ಮೆಂಟ್ ಆದ ಎಕ್ಸೈಸ್‌ನ್ನು ಬಿಟ್ಟರೆ ಎರಡನೆಯದು ಅರಣ್ಯ ಇಲಾಖೆ. ಈ ಅರಣ್ಯ ಇಲಾಖೆಗೆ ಕೊಡುವ ಹಣದಲ್ಲಿ ೫೦ ಪರ್‌ಸೆಂಟ್ ಆದರೂ ಅಧಿಕಾರಿಗಳು ತಿಂದುಹಾಕುತ್ತಾರೆ. ಎರಡು ರೂಪಾಯಿಗಳ ಕೆಲಸ ಮಾಡಿ ೬ ರೂಪಾಯಿಗಳ ಲೆಕ್ಕ ಬರೆಯುವುದು ಒಂದು ಲಕ್ಷ ಸಸಿಗಳನ್ನು ನೆಟ್ಟರೆ ೬ ಲಕ್ಷ ಸಸಿಗಳನ್ನು ನೆಟ್ಟಿದ್ದೇವೆಂದು ಲೆಕ್ಕ ಬರೆದು ದುಡ್ಡು ತಿಂದು ಹಾಕುತ್ತಾರೆ. ಇದುವರೆಗೂ ಅರಣ್ಯ ಇಲಾಖೆಯವರು ನೆಟ್ಟಿದ್ದೇವೆ ಎಂದು ಹೇಳುವ ಸಸಿಗಳು ಇದ್ದಿದ್ದರೆ ಕರ್ನಾಟಕದಲ್ಲಿ ಎಲ್ಲೂ ಜಾಗ ಇರುತ್ತಿರಲಿಲ್ಲ. ಎಲ್ಲಾ ಕಡೆ ಕಾಡು ಇರುತ್ತಿತ್ತು. ಲೆಕ್ಕದಲ್ಲಿ ಮಾತ್ರ ಮರಗಳು ಇರುತ್ತವೆ ಹೊರತು ನಿಜವಾಗಿ ಇರುವುದಿಲ್ಲ, ಅರಣ್ಯ ಇರುವುದು ಕಡಿಮೆ ಆದರೂ ಅರಣ್ಯ ಮಾಡುವುದಕ್ಕೆ ಖರ್ಚು ಮಾಡುತ್ತಿರುವುದಂತೂ ತಪ್ಪಿಲ್ಲ ಈ ಭ್ರಷ್ಟಾಚಾರಕ್ಕೆ ಒಂದು ಮಿತಿ ಇರಬೇಕು. ಅಧ್ಯಕ್ಷರೇ, ನಾನು ಹೇಳುತ್ತಿರುವುದು ಭ್ರಷ್ಟಾಚಾರಕ್ಕೂ ಒಂದು ಮಿತಿ ಇರಬೇಕೆಂಬುದಾಗಿದೆ

ಶ್ರೀ ಸಿ. ಬೈರೇಗೌಡ.— ತಾವುಗಳು ಇಬ್ಬರೂ ವಕೀಲರು. ವಕೀಲರು ಸೇರಿಕೊಂಡು ಇದನ್ನೂ ಕೋರ್ಟ್ ಎಂದು ಅಂದುಕೊಂಡಿದ್ದಾರೋ ಏನೋ...

ಉಪಾಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರೇ ತಾವು ಮುಂದುವರಿಸಿ.

ಶ್ರೀ ಆರ್. ವೆಂಕಟರಾಮಯ್ಯ.— ಭ್ರಷ್ಟಾಚಾರ ಎಲ್ಲಾ ಕಡೆಗಳಲ್ಲಿಯೂ ನಡೆಯುತ್ತಾ ಹೋಗುತ್ತದೆ. ಇದು ಎಲ್ಲಾ ಇಲಾಖೆಗಳಲ್ಲಿಯೂ ಇದೆ. ಪಿ.ಡಬ್ಲ್ಯೂ.ಡಿ. ಯಲ್ಲಿ ದುಡ್ಡು ಇಲ್ಲ. ಒಂದು ವೇಳೆ ಅಲ್ಲಿಯೂ ಸಾಕಷ್ಟು ಹಣ ಇದ್ದಿದ್ದಲ್ಲಿ ಅಲ್ಲಿಯೂ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಾ ಇರುತ್ತಿತ್ತು. ಅದನ್ನು ಮಾನ್ಯ ದೇವೇಗೌಡರಿಗೂ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿರಲಿಲ್ಲ ಎಂದು ಕಾಣುತ್ತದೆ. ಅವರಿಗೆ ಕೊಡುವ ಹಣ ನಿಗದಿಪಡಿಸಿದ ಕೆಲಸಕಾರ್ಯಗಳು ಸಮಯದಲ್ಲಿ ಆಗದೇ ಇರುವ ಕಾರಣ ಬೆಲೆಯಲ್ಲಿಯ ಹೆಚ್ಚಳ ಇತ್ಯಾದಿಗಳಿಂದಾಗಿ ಆ ಇಲಾಖೆಯಲ್ಲಿ ಯಾವಾಗಲೂ ಹಣದ ಕೊರತೆ ಇದ್ದೇ ಇರುತ್ತದೆ. ಹೀಗೆ ನಮ್ಮ ರೆವಿನ್ಯೂ ಇಲಾಖೆಯು ಈ ವಿಚಾರದಲ್ಲಿ ನಾಲ್ಕನೇಯ ಸ್ಥಾನ ವನ್ನು ಗಳಿಸುತ್ತದೆ ಎಂದು ಹೇಳುತ್ತಾರೆ. ಆ ಮೇಲೆ ಪೋಲೀಸ್ ಇಲಾಖೆ ಬರುತ್ತದೆ. ಅವರ ಬಗ್ಗೆಯೂ ಅಷ್ಟು ಹೇಳುವುದಕ್ಕಾಗುವುದಿಲ್ಲ. ನಮ್ಮ ಜಾಲಪ್ಪನವರು ಏನೋ ತುಂಬಾ ಪ್ರಯತ್ನ ವನ್ನು ಇಲಾಖೆಯಲ್ಲಿನ ಸಂಧಾರಣೆಗಾಗಿ ಮಾಡುತ್ತಾ ಇದ್ದಾರೆ. ಆದರೂ ಕೂಡ ಇಲಾಖೆಯಲ್ಲಿ ನಡೆಯುತ್ತಿರುವುದು ನಡೆಯುತ್ತಾ ಇರುತ್ತದೆ. ಸ್ಟೇಷನ್‌ಗಳಲ್ಲಿ ಯಾವನಾದರೂ ಹೋದರೆ, ಕೆಲವಾರು ಸಂದರ್ಭಗಳಲ್ಲಿ ಕೊಡುವ ಮಾಮೂಲು ಕೊಡಲೇ ಬೇಕು. ಹಾಗೆಯೆ, ಎಸ್.ಪಿ. ಮಾಮೂಲು, ಸರ್ಕಲ್ ಇನ್ಸ್‌ಪೆಕ್ಟರ್ ಮಾಮೂಲ್ ಡಿ.ಎಸ್.ಪಿ, ಮಾಮೂಲ್, ಹೀಗೆ ಮಾಮೂಲುಗಳು ಇದ್ದೇ ಇವೆ. ಮಾಮೂಲು ಕೊಡದಿದ್ದರೆ ಯಾವ ಕೆಲಸವೂ ಸರಿಯಾಗಿ ಆಗುವುದಿಲ್ಲ ಹೀಗೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿಯೂ ಮಾಮೂಲ ಉಂಟು...

ಶ್ರೀ ಸಿ. ಬೈರೇಗೌಡ.— ಮಾನ್ಯ ವೆಂಕಟರಾಮಯ್ಯನವರು ಹೆಗಲು ಮುಟ್ಟಿನೋಡಿ ಕೊಳ್ಳುತ್ತಾ ಇದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.— ಸರಿನಾನು ಹೇಳುವುದೇನೆಂದರೆ. ಈ ಭ್ರಷ್ಟಾಚಾರದ ಬಗ್ಗೆ ತಡೆಗಟ್ಟುವಲ್ಲಿ ನಾವು ಸ್ವಲ್ಪ ಹೆಚ್ಚಿಗೆ ಗಮನಕೊಡದ್ದಿದ್ದರೆ. ಸರಕಾರದ ಬಗ್ಗೆ ಜನರಲ್ಲಿ ಇರುವ ಒಂದು ಸದಭಿಪ್ರಾಯ ಹೊರಟು ಹೋಗುತ್ತದೆ. ಈ ಭ್ರಷ್ಟಾಚಾರ ತುಂಬಾ ಹೆಚ್ಚಿಗೆ ಆಗುತ್ತಾ ಇದೆ. ಮೊದಲು ಸೀಕ್ರೆಟ್ ಆಗಿ ತೆಗೆದುಕೊಳ್ಳುತ್ತಾ ಇದ್ದರು, ಇದರ ಬಗ್ಗೆ ಜನತಾ ಸರ್ಕಾರದವರು ಲೋಕಾಯುಕ್ತವನ್ನು ಜಾರಿಗೆ ತಂದರು. ಹಾಗೆ ತಂದಾಗ ನಾವು ಇನ್ನಾದರೂ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂದು ಕೊಂಡಿದ್ದೆವು. ಆದರೆ ಹಾಗೆ ಆಗಲಿಲ್ಲ. ಅಲ್ಲಿಯೂ ಸರಿಯಾಗಿ ಕೆಲಸ ನಡೆಯುತ್ತಾ ಇಲ್ಲ. ಆಂಟಿಕರೆಪ್ಷನ್ ಡಿಪಾರ್ಟ್‌ಮೆಂಟ್‌ನಲ್ಲಿಯೇ ಕರಪ್ಶನ್ ಇದೆ. ಯಾವುದಾದರೂ ಒಂದು ದೂರು ಬಂದರೆ, ಅವರಿಂದ ವಸೂಲು ಮಾಡಿ ಸಂಬಂಧಪಟ್ಟವರು ಒಂದು ವರದಿಯನ್ನು ಕೊಡುತ್ತಾರೆ. ಲೋಕಾಯುಕ್ತದವರು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನ ಕೆಲವು ಆಫೀಸರ್ಸ್ ಮೇಲೆ ಫೈಂಡಿಂಗ್ಸ್ ಕೊಟ್ಟಿದ್ದಾರೆ. ಇಂತಹವುಗಳ ಬಗ್ಗೆ ಸ್ವಲ್ಪ ಗಮನ ಕೊಡಬೇಕು.

ನಿಜವಾಗಿಯೂ ಕೂಡ ನಮ್ಮ ಸರಕಾರ ರಾಜ್ಯಪಾಲರ ಭಾಷಣದಲ್ಲಿ ಇಷ್ಟೊಂದು ಸಾರ್ಥಕ ವಾದಂತಹ ಸಾಧನೆಗಳನ್ನು ಮಾಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಆದರೆ ಆ ಸಾಧನೆಗಳು ನಮಗೆ ಕಾಣುತ್ತಾ ಇಲ್ಲ. ಅದರ ಬಗ್ಗೆ ಏನು ಮಾಡುವುದು ಎಂದು ನಮಗೆ ಆಲೋಚನೆಯಾಗಿದೆ. ಅವರು ತಮ್ಮ ಸಾಧನೆಗಳ ಬಗ್ಗೆ ಹೀಗೆ ಹೇಳಿಕೊಂಡಿದ್ದಾರೆ "ಕರ್ನಾಟಕದ ಜನತೆ ತಮಗಾಗಿ ಒಂದು ಜವಾಬ್ದಾರಿಯುತ, ಸ್ಪಂದನಾಶೀಲ ಹಾಗೂ ಸುಗಮ್ಯವಾದ ಇಂದಿನ ಸರಕಾರವನ್ನು ಆಯ್ಕೆ ಮಾಡಿಕೊಂಡಿತು"

ಈಗ ಯಾವ ಒಂದು ಜವಾಬ್ದಾರಿಯೂ ಕಾಣುತ್ತಿಲ್ಲ. ಯಾರ ಮೇಲೆಯೂ ಯಾರಿಗೂ ಹತೋಟಿಯೂ ಇಲ್ಲ. ಸರಕಾರವೇ ಜವಾಬ್ದಾರಿಯುತವಾಗಿ ನಡೆಯುತ್ತಾ ಇಲ್ಲ ಯಾವ ಸ್ಪಂದನವೂ ಇಲ್ಲ. ಸುಗಮವೂ ಇಲ್ಲ. ಇಂತಹ ಒಂದು ಪರಿಸ್ಥಿತಿಯು ರಾಜ್ಯದಲ್ಲಿ ಈಗ ಇದೆ. ಈಗಲಾದರೂ ಕೂಡ ನಮ್ಮ ಸ್ನೇಹಿತರು ಎಚ್ಚೆತ್ತು ರಾಜ್ಯಭಾರವನ್ನು ಮಾಡಬೇಕು. ಈಗ ಇರು ವಂತಹ ಒಂದು ಪರಿಸ್ಥಿತಿಯನ್ನು ಸರಿಪಡಿಸಬೇಕು. ಹಾಗೆ ಮಾಡಲಿಲ್ಲವಾದರೆ, ಜನರು ತಮ್ಮ ಪರವಾಗಿ ಇರುವುದಿಲ್ಲ. ಇದನ್ನೆಲ್ಲಾ ಸರಿಪಡಿಸಿದರೆ, ಅವರು ಬೇರೆ ದಿಕ್ಕಿನಲ್ಲಿ ಹೋಗುವುದಕ್ಕೆ ಕಾರಣವೇ ಇಲ್ಲ The financial crisis is the creation of this so called bureaucratic set-up ಇದು ಅಧಿಕಾರಿ ವರ್ಗದವರು ಸೃಷ್ಟಿ ಮಾಡಿರುವ ಒಂದು ಸೆಟ್‌ಅಪ್ ಆಗಿದೆ.

ಅಧಿಕಾರಿಗಳು ಕಂದಾಯವನ್ನು ಕೂಡ ಸರಿಯಾಗಿ ವಸೂಲು ಮಾಡುತ್ತಾ ಇಲ್ಲ. ಮಾಡಿದ ಹಣವು ಅವರಿಗೆ ಅವರ ಸಂಬಳಸಾರಿಗೆಗೆ ಸರಿಹೋಗುತ್ತದೆ. ಇದನ್ನೆಲ್ಲಾ ಇವರು ಹೇಳಿಕೊಳ್ಳದಿದ್ದರೂ ಕೂಡ, ಹೋದ ಸಾರಿ ೭ನೇ ತಾರೀಖಿಗೆ ಸಂಬಳ ಸಾರಿಗೆ ಕಲವು ಕಡೆಗಳಲ್ಲಿ ಇಲ್ಲ ಎಂದು ಹೇಳಿದರು. ಮೊನ್ನೆ ಟ್ರೆಜರಿಗೆ ಒಂದು ಟೆಲೆಕ್ಸ್ ಮ್ಯಾಸೇಜ್ ಬಂತಂತೆ. ಅದರಲ್ಲಿ ೩೦ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿ ಎಂದಿದ್ದಾರೆ.

೧೧-೦೦ ಎ.ಎಂ.

ಈ ರೀತಿ ದಿನ ನಿತ್ಯ ಕೂಡ ನಾವು ಯಾವಯಾವ ಖಜಾನೆಗಳಿಗೆ ಹೋದರೆ ಏನು ಸಿಗುತ್ತದೆ ಸಿಗುವುದಿಲ್ಲ ಎಂಬ ಅನುಮಾನ ಬಂದಿದೆ. ಇನ್ನು ನಮ್ಮ ಸಾರ್ವಜನಿಕ ಉದ್ಯಮಗಳು ಇವೆ ಅದರ ಬಗ್ಗೆ ನೋಡುವುದಾದರೆ, ಅದರ ರೀತಿ ನೀತಿ ಬಗ್ಗೆ ನೋಡಿದರೆ ನಾವೆಲ್ಲಾ ತಲೆ ತಗ್ಗಿಸಬೇಕಾಗುತ್ತದೆ. ನಾವು ನೂರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಅದರಲ್ಲಿ ಹಾಕುತ್ತೇವೆ ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಎಂಬ ಹೆಗ್ಗಣಗಳು ಇವೆ. ಉದಾಹರಣೆಗೆ ಹೇಳುವುದಾದರೆ ನಾನು ಸಮಿತಿಯ ಜೊತೆಯಲ್ಲಿ ಕ್ಯಾಷ್ಯೂನೆಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಏನು ಇದೆ ಅದಕ್ಕೆ ಹೋಗಿದ್ದೆ. ಅಲ್ಲಿ ವಿಚಾರ ಮಾಡಿದಾಗ ಈವರೆಗೆ ಎರಡೂವರೆ ಕೋಟಿಯಷ್ಟು ಹಣವನ್ನು ಲಪಟಾಯಿಸಿರುವುದು, ಅಲ್ಲಿನ ನೌಕರರ ಸಂಬಳಕ್ಕೆಂದು ೩೦ ಲಕ್ಷ ರೂಪಾಯಿಗಳೆಂದು ಖರ್ಚು ಮಾಡಿದ್ದು ಕ್ಯಾಷ್ಯೂನೆಟ್ ಡೆವಲಪ್‌ಮೆಂಟ್‌ಗೆಂದು ೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ತಿಳಿದು ಬಂತು. ಸಂಬಳಕ್ಕೆ ೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಏನು ಹೇಳುತ್ತಿದ್ದೀರಿ ಇದಕ್ಕೆ ಒಂದು ನಾರ್ಮ್ಸ್ ಇದೆ ೧೨ ಪರ್ಸೆಂಟ್ ಖರ್ಚು ಮಾಡಬೇಕೆಂದು ಇದನ್ನು ಹೇಗೆ ಮಾಡಿದಿರಿ ಎಂದು ಕೇಳಿದ್ದಕ್ಕೆ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಅಲ್ಲಿ ಒಬ್ಬ ಚೇರ್ಮನ್ ಇದ್ದರು ಆ ಚೇರ್ಮನ್ನರವರು ಕಮಿಟಿ ಮೀಟಿಂಗ್‌ನಲ್ಲಿ ಏನೂ ಮಾತನಾಡಲಿಲ್ಲ ನಾನು ಹೊರಗಡೆ ಕರೆದು ಏಕೆ ನೀವು ಏನೂ ಮಾತನಾಡಲಿಲ್ಲ ಇಷ್ಟೊಂದು ಭ್ರಷ್ಟಾಚಾರ ನಡೆಯುತ್ತಿದೆ ನೀವು ಸುಮ್ಮನೆ ಕೂಳಿತಿದ್ದರಲ್ಲ ಎಂದು ಕೇಳಿದೆ. ಅವರು ಕೂಡ ಜನತಾ ಪಾರ್ಟಿಗೆ ಸೇರಿದವರು. ಅದಕ್ಕೆ ಅವರು ಹೇಳಿದರು ನಾನು ಬೋರ್ಡ್ ಮೀಟಿಂಗ್‌ಗೆ ಪ್ರಿಸೈಡ್ ಮಾಡುವುದು ಮಾತ್ರ ಅದರ ಬಗ್ಗೆ ಚರ್ಚೆ ಮಾಡುವ ಅವಕಾಶವಿಲ್ಲ ಎಂದರೂ ಚಿಕ್ಕವಯಸ್ಸಿನವರು ನೀವು. ನಿಮಗೆ ಸರ್ಕಾರದವರು ೨-೩ ಸಾವಿರ ರೂಪಾಯಿಗಳ ಸಂಬಳ ಕೊಡುತ್ತಿದೆ ಮನೆ, ಕಾರು ಕೊಟ್ಟಿದೆ, ನಿಮ್ಮನ್ನು ಇಲ್ಲಿ ಇಟ್ಟಿರುವುದು ಸರ್ಕಾರದ ಇಂಟರೆಸ್ಟ್ ಅನ್ನು ಸೇಫ್-ಗಾರ್ಡ್ ಮಾಡುವುದಕ್ಕೆ ಕಾರ್ಪೋರೇಷನ್ನಿನ ಇಂಟರೆಸ್ಟ್ ಅನ್ನು ಸೇಫ್-ಗಾರ್ಡ್ ಮಾಡುವುದಕ್ಕೆ ಎಂದು ಹೇಳಿದ್ದಕ್ಕೆ, ಯೋಚನೆ ಮಾಡುತ್ತೇವೆ ಕನ್‌ಸಲ್ಟ್ ಮಾಡುತ್ತೇವೆಂದು ಹೇಳಿದರು.

ಇನ್ನು ಕಿಯೋನಿಕ್ಸ್ ಸಂಸ್ಥೆಯ ಬಗ್ಗೆ ಹೇಳುವುದಾದರೆ ಎಷ್ಟು ಟೆಲಿವಿಷನ್ಸ್ ಸೆಟ್ ತಯಾರು ಮಾಡಬೇಕಾಗಿರುವುದು ? ಎಷ್ಟು ತಯಾರು ಮಾಡಿದ್ದೇವೆ ಎಂಬ ಲೆಕ್ಕವೇ ಅವರಲ್ಲಿ ಇಲ್ಲ. ಇದಕ್ಕೆ ಆಡಿಟ್ ಅಬ್ಜೆಕ್ಷನ್ಸ್ ಇದೆ. ಅದನ್ನೇನೂ ಜೇಬಿನಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅದರ ಬಗ್ಗೆ ಲೆಕ್ಕವೇ ಇಲ್ಲವೆಂದು ಹೇಳಿದರೆ ಹೇಗೆ ಎಂದು ಕೇಳಿದ್ದಕ್ಕೆ ಅವರು ಆನ್ಸರ್ ಮಾಡಲಿಲ್ಲ. ಸರ್ಕಾರೀ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಸಂಸ್ಥೆಯ ಬಗ್ಗೆ ಹೇಳುವುದಾದರೆ ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಅಲ್ಲಿ ತಯಾರು ಮಾಡಿದ ವಸ್ತುಗಳನ್ನು ಇನ್ನೊಬ್ಬ ಸೇಲ್ಸ್ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೆ ಕಳುಹಿಸಿದರೆ ಅವನು ಇಲ್ಲಿಂದ ಕಳಿಸಿದ್ದನ್ನು ಮಾರಾಟ ಮಾಡುವುದಿಲ್ಲ ಹಾಗೆಯೇ ಇಟ್ಟುಕೊಂಡಿರುತ್ತಾನೆ ಇದರಿಂದಾಗಿ ೩-೪ ಕೋಟಿ ರೂಪಾಯಿಗಳ ನಷ್ಟ. ಇನ್ನು ಭದ್ರಾವತಿಯ ಕಾರ್ಖಾನೆಯ ಬಗ್ಗೆಯಂತೂ ಹೇಳುವ ಹಾಗೆಯೇ ಇಲ್ಲ ೪೦-೫೦ ಕೋಟಿ ರೂಪಾಯಿಗಳ ನಷ್ಟವಾಗಿದೆ. ಸಾರ್ವಜನಿಕ ಉದ್ಯಮಗಳನ್ನು ಯಾವ ಉದ್ದೇಶದಿಂದ ಸ್ಥಾಪನೆ ಮಾಡಿದ್ದೇವೆಯೋ ಆ ಉದ್ದೇಶದಿಂದ ಆ ಸಂಸ್ಥೆಗಳು ಇವೊತ್ತು ನಡೆಯುತ್ತಿಲ್ಲ. ಅಕ್ರಮ ಮಾಡಿರುವ ಒಬ್ಬ ಅಧಿಕಾರಿಯ ಮೇಲೆ ಇಲ್ಲವೇ ಯಾರು ೫-೬ ಲಕ್ಷ ರೂಪಾಯಿಗಳನ್ನು ತಿಂದಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರೆ ಸರ್ಕಾರ ಏಕೆ ಹಿಂದೇಟು ಹೊಡೆಯುತ್ತದೆ ಎಂಬುದು ನನಗೆ ಅರ್ಥವಾಗಲಿಲ್ಲ, ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಹೇಗೆ ನಡೆಯುತ್ತಿದೆ ಎಂದರೆ ಅಲ್ಲಿ Rats have eaten away the buldozers. This is the Judicial finding. ಭ್ರಷ್ಟಾಚಾರ ಮಾಡಿರುವ ಮ್ಯಾನೇಜಿಂಗ್ ಡೈರೆಕ್ಟರ್ ಆಗಲೀ ಇಲ್ಲವೇ ಅಧಿಕಾರಿಗಳನ್ನಾಗಲೀ ಇವೊತ್ತು ಸರ್ಕಾರ ಮುಟ್ಟಿಲ್ಲ. ಇನ್‌ಡೈರೆಕ್ಟರ್ ಆಗಿ ನಾವೇ

ಭ್ರಷ್ಟಾಚಾರಕ್ಕೆ ಸಹಾಯ ಮಾಡಿದಹಾಗೆ ಆಗುತ್ತದೆ. ಇದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಜ್ಯುಡಿಷಿಯಲ್ ಫೈಂಡಿಂಗ್ಸ್ ಏನಿದೆ ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳನ್ನು ಬಲಿ ಹಾಕದೇ ಇದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ ? ಇವತ್ತಿನ ದಿವಸ ಸಾರ್ವಜನಿಕ ಉದ್ಯಮಗಳು ಬಹಳ ಕೆಟ್ಟಿವೆ. ಜನತಾ ಮನೆಗಳಿಗೆ ಸಂಬಂಧಪಟ್ಟಂತೆ ಬಿಲ್ ಅನ್ನು ರಿಲೀಸ್ ಮಾಡಲಿಲ್ಲವೆಂದು ಹಿಂದೆ ಮಾನ್ಯ ಬೈರೇಗೌಡರವರನ್ನು ಘೇರಾವ್ ಮಾಡಿದರು, ಅದು ಬಹಳ ಸಣ್ಣ ಮೊತ್ತದ್ದು. ಆದರೆ ಇಲ್ಲಿ ೨೦೦–೩೦೦ ಕೋಟಿ ರೂಪಾಯಿಗಳ ಬಿಲ್ ಅನ್ನು ಟ್ರಜರಿಯಿಂದ ರಿಲೀಸ್ ಮಾಡಿಲ್ಲ. ಜನಗಳು ಬಂದು ಬಂದು ಹೋಗುತ್ತಿದ್ದರೆ ನಮಗೆ ಶಾಪವನ್ನು ಹಾಕುವುದಿಲ್ಲವೇ? ಇದಕ್ಕೆಲ್ಲಾ ಕಾರಣವೇನೆಂದರೆ ಸಾರ್ವಜನಿಕ ಉದ್ಯಮಗಳಲ್ಲಿರುವ ನಷ್ಟ ಏನಿದೆ ಅದು ಒಂದರಿಂದ ಹತ್ತರಷ್ಟು ಬೆಳೆದಿದೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್ಸ್‌ಗಳಿಗೆ ಯುದ್ಧ ಎಂದು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ. ಜನತಾ ಪಾರ್ಟಿ ರಾಜಕಾರಣಿಗಳನ್ನು ನಾವು ಏನೂ ಬೈದಿಲ್ಲ ಬೇರೆಯವರ ಬಗ್ಗೆ ಹೇಳಿದ್ದೇವೆಂದು ವರ್ಗೀಸ್ (ಡಿ.ವೈ.ಜಿ.ಪಿ.)ಯವರು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳದ್ದೋ, ಇಲ್ಲ ಜನಗಳದೋ ಎನ್ನುವ ಅನುಮಾನ ಬಂದಿದೆ. ಈಗ ಯಾವ ಸ್ಟೇಜ್‌ಗೆ ಬಂದಿದ್ದೇವೆ ಎಂದರೆ ನಮ್ಮ ವೆಂಕಟಸ್ವಾಮಿಯವರ ವರದಿ ಬಂದಮೇಲೆ ಏಳು ಸಾವಿರ, ಹತ್ತು ಸಾವಿರ ರೂಪಾಯಿಗಳವರೆಗೂ ಸಂಬಳ ಪಡೆದುಕೊಳ್ಳುವ ಅಧಿಕಾರಿಗಳು ಇದ್ದಾರೆ, ಇದಲ್ಲದೆ ಮತ್ತೆ ಅವರಿಗೆ ಬೇಕಾದಷ್ಟು ಎಮಾಲ್ಯುಮೆಂಟ್ಸ್ ಕೂಡಾ ಪಡೆದುಕೊಳ್ಳುತ್ತಿದ್ದಾರೆ. ಆದರೂ ಕೂಡಾ ಒಬ್ಬನಿಗೆ ಪ್ರಮೋಷನ್ ಕೊಟ್ಟಿಲ್ಲ ಎಂದು ಸರ್ಕಾರವನ್ನು ದೂರುವುದು, ಒಂದು ಡಿಪಾರ್ಟ್‌ಮೆಂಟ್‌ನವರು ಇನ್ನೊಂದು ಡಿಪಾರ್ಟ್‌ಮೆಂಟ್‌ನವರನ್ನು ದೂರುವುದು ಇವೆಲ್ಲಾ ನೋಡಿದ್ದಾರೆ ಸರ್ಕಾರ ಇದೆಯೋ ಎಂಬ ಅನುಮಾನ ಬಂದಿದೆ. ಈ ರೀತಿಯ ಪರಿಸ್ಥಿತಿ ಆಗಬಾರದು. ಜನಗಳ ಬಗ್ಗೆ ನಾವು ಜನರಿಂದ ಆರಿಸಲ್ಪಟ್ಟಿದ್ದೇವೆ, ಅವರಿಂದ ಎಲೆಕ್ಟ್ ಆಗಿ ಬಂದಿದ್ದೇವೆ, ನಾವು ಜನಗಳಿಗೆ ಆನ್ಸರ್ ಮಾಡಬೇಕಾಗುತ್ತದೆ ಎಂದು ಅವರು ಭಯಭಕ್ತಿಯಿಂದ ಬದುಕಬೇಕಾಗುತ್ತದೆ. ಅವರಿಗೆ ಏನಾಗಿದೆ ಎಂದರೆ ಈ ಗೌರ್ನಮೆಂಟ್‌ನವರು ನನ್ನನ್ನು ಏನು ಮಾಡುವುದಕ್ಕಾಗುತ್ತದೆ, ಮಾಡಿದರೂ ಕೂಡಾ ಟ್ರಾನ್ಸ್‌ಫರ್ ಮಾಡುತ್ತಾರೆ ಅಷ್ಟೇ ತಾನೆ ಎನ್ನುವ ಒಂದು ದುರಹಂಕಾರದಿಂದ ವರ್ತಿಸುತ್ತಿದ್ದಾರೆ. ಅವರು ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳುವುದು ಒಂದೇ ಅಲ್ಲ, ಜನಗಳ ಬಗ್ಗೆ ಯೋಚನೆ ಮಾಡಿ ನಾವು ಅವರ ಸೇವೆ ಮಾಡಬೇಕು ಎನ್ನುವ ಮನೋಭಾವ ಪೂರ್ತಿ ಹೋಗಿದೆ. ಇದನ್ನು ತಪ್ಪಿಸಬೇಕು. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಅಂದರೆ ಸರ್ಕಾರದವರು ಅಧಿಕಾರಿಗಳ ಬಗ್ಗೆ ಯಾವ ಒಂದು ತಪ್ಪನ್ನು ಮಾಡಿದರೂ ಕೂಡಾ ನಿರ್ದಾಕ್ಷಿಣ್ಯವಾಗಿ ಅವರನ್ನು ಬಲಿ ಹಾಕುವ ಪ್ರವೃತ್ತಿ ಬೆಳೆಸಿಕೊಂಡರೆ ಆಗ ನಮ್ಮ ಸರ್ಕಾರದ ಮಾನ ಮರ್ಯಾದೆ ಬರುತ್ತದೆಯೋ ಹೊರತು ಇಲ್ಲದೇ ಹೋದರೆ ಈಗ ಆಗಿರುವ ರೀತಿಯಲ್ಲಿ ಫೈನಾನ್ಸಿಯಲ್ ಕ್ರೈಸಿಸ್ ಆಗುತ್ತದೆ. ಮಾನ ಮರ್ಯಾದೆ ಎಲ್ಲಾ ಹೋಗಿ ಪಾಪರ್ ಸರ್ಕಾರ ಎನ್ನುವ ಒಂದು ಪರಿಸ್ಥಿತಿ ಬರಬಾರದು ಎಂದು ನನ್ನ ಒಂದು ಅನಿಸಿಕೆ. ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ಆದರೆ ಕರ್ನಾಟಕ ಸರ್ಕಾರದವರು ಕೊಟ್ಟಿರುವ ಕೆಲವು ಅಂಕಿಸಂಖ್ಯೆಗಳನ್ನು ತೋರಿಸಿವರೆ ನಿಜವಾಗಿಯೂ ಕೂಡಾ ಕರ್ನಾಟಕದಲ್ಲಿ ಅಂಥ ಅಭಿವೃದ್ಧಿಯಾಗಿಲ್ಲ, ಇನ್ನೂ ಅಭಿವೃದ್ಧಿ ಆಗಬೇಕಾಗಿರುವುದು ಜಾಸ್ತಿ ಇದೆ ಎಂದು ಹೇಳುತ್ತೇನೆ. ಡಿಸ್ಟ್ರಿಕ್ಟ್-ವೈಸ್ ಇನ್‌ಕಂ, ಪರ್‌ಕ್ಯಾಪಿಟಾ ಇನ್‌ಕಂ ಎಂದು ೧೯೮೭-೮೮ರ ಅನ್ಯುಯಲ್ ಪ್ಲಾನ್‌ನಲ್ಲಿ ಕೊಟ್ಟಿದ್ದಾರೆ. ಅದನ್ನು ನೋಡಿದರೆ ಅದು ಹೋಗುತ್ತಾ ಹೋಗುತ್ತಾ ನಮ್ಮ ಇನ್‌ಕಂ ಏನಾಗಿದೆ ಎಂದು ಹೇಳಿದರೆ,ತುಂಬಾ ಕಡಿಮೆಯಾಗಿದೆ. ಬೆಂಗಳೂರು ಡಿಸ್ಟ್ರಿಕ್ಟ್‌ದು ಮೊದಲು ೧೩.೨ ಪರ್‌ಸೆಂಟ್

ಇದ್ದದ್ದು ಈಗ ಅದು ಕೂಡಾ ಕಡಿಮೆಯಾಗಿದೆ, ಅದೇ ರೀತಿ ಮೈಸೂರು ಮತ್ತು ಇನ್ನಿತರೆ ಎರಡು ಮೂರು ಡಿಸ್ಟ್ರಿಕ್ಟ್‌ಗಳು ಸ್ವಲ್ಪ ಜಾಸ್ತಿ ಇದ್ದದ್ದು ಅದು ಕೂಡಾ ಹೋಗುತ್ತಾ ಹೋಗುತ್ತಾ ಈಗ ಕಡಿಮೆಯಾಗಿದೆ. ೬,೦೦,೦೯ ಈ ರೀತಿ ಬರುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಅದರಲ್ಲೂ ಕೋಲಾರ ಜಿಲ್ಲೆ, ಗ್ರೇಡೇಷನ್‌ನಲ್ಲಿ ಅದು ೧೯ನೇ ಜಿಲ್ಲೆ ಕಡೆಯ ಜಿಲ್ಲೆ. ಬಿಜಾಪುರಕ್ಕಿಂತ ನಮ್ಮದು ಕಡಿಮೆ ಇದೆ. ಈ ಇಂಬ್ಯಾಲೆನ್ಸ್ ಏನು ಇದೆ, ಅದನ್ನು ಸರಿ ಮಾಡಬೇಕು ಎಂದು ಹೋದಸಾರಿಯೂ ಕೂಡಾ ಹೇಳಿದ್ದೆ. ಆದರೆ ಇಂಬ್ಯಾಲೆನ್ಸ್ ಸರಿ ಮಾಡುವುದಕ್ಕೆ ಆ ಪ್ರಯತ್ನಕ್ಕೆ ಹೋಗಲಿಲ್ಲ. ಇರಿಗೇಷನ್ ಪೊಟೆನ್ಸಿಯಾಲಿಟಿ ಬಗ್ಗೆ ಮಾತನಾಡುವಾಗ ಏರಿಯಾ ಅಂಡರ್ ಇರಿಗೇಷನ್ ಅಗ್ರಿಕಲ್ಚರಲ್ ರಾಕ್ವೆನ್ಸ್ ನಾವು ನೋಡಿದರೆ ೮೫-೮೬ಕ   ೬ ಪರ್‌ಸೆಂಟ್‌ಗೆ ಬಂದಿದ್ದೇವೆ. ಈಗ ೮೬-೮೭ಕ್ಕೆ

೧೮ ಪರ್ಸೆಂಟ್‌ಗೆ ಬಂದಿದ್ದೇವೆ. ನಮ್ಮ ಸರ್ಕಾರದವರು ಖರ್ಚು ಮಾಡುತ್ತಿರುವ ದುಡ್ಡನ್ನು ಲೆಕ್ಕ ಹಾಕಿಕೊಂಡರೆ ಅಪ್ಪರ್‌ಕೃಷ್ಣ ಪ್ರಾಜೆಕ್ಟ್ ಕಂಪ್ಲೀಟ್ ಆಗಬೇಕು ಎಂದರೆ ಐವತ್ತು ವರ್ಷಗಳು ಆಗುತ್ತದೆ. ಐವತ್ತು ವರ್ಷಗಳಿಗೂ ಆಗುತ್ತದೆಯೋ ಇಲ್ಲವೋ ಎನ್ನುವ ಒಂದು ಅನುಮಾನ ಕೂಡಾ ಬರುತ್ತದೆ, ಇನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಇವುಗಳ ಬಗ್ಗೆ ಬರೀ ಪೇಪರ್‌ನಲ್ಲಿ ಮಾತ್ರ ಇದೆ, ಏನೊಂದು ಕೂಡಾ ಕೆಲಸವನ್ನು ಮಾಡುತ್ತಿಲ್ಲ. ಸೆಂಟ್ರಲ್‌ನವರು ನಮಗೆ ಕೊಡತಕ್ಕಂಥ ಟ್ರೀಟ್‌ಮೆಂಟ್ ಬಗ್ಗೆ "ಸೆಮಿನಾರ್ ಆನ್ ಸೆಂಟರ್ ಸ್ಟೇಟ್ ರಿಲೇಷನ್ಸ್" ಎಂಬ ಪುಸ್ತಕದಲ್ಲಿ ಹೇಳಿದ್ದಾರೆ, ಅದನ್ನು ಹೇಳಿ ನನ್ನ ಈ ಪ್ರಸ್ತಾವನೆಯನ್ನು ಮುಗಿಸುತ್ತೇನೆ. ಸೆಂಟ್ರಲ್‌ನಲ್ಲಿ ನೋಡಿದರೆ ಬೇರೆ ರಾಜ್ಯದ ಅಧಿಕಾರಿಗಳನ್ನೆಲ್ಲಾ ಅವರೇ ಕಿತ್ತುಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ, ಅವಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ದುರಾದೃಷ್ಟವಶಾತ್ ಈಗ ಆ ಬಗ್ಗೆ ಅವರು ಇನ್ನು ಏನಾದರೂ ಸೆಂಟರ್‌ಗೆ ಹೋಗಿ ಬಿಟ್ಟರೆ ಅಲ್ಲಿ ದೊಡ್ಡ ಲೀಡರ್ ಆಗಬಹುದೋ ಏನೋ ಎನ್ನುವ ಒಂದು ಮನಸ್ಸು ಇದೆಯೋ ಏನೋ ಸೆಂಟರ್ ಬಗ್ಗೆ ಹೇಳುತ್ತಾ ಇದ್ದುದನ್ನು ಬಿಟ್ಟಿದ್ದಾರೆ.

ಮಾನ್ಯ ಅಧ್ಯಕ್ಷರೇ, ಇದರ, ಇಂಟ್ರೊಡಕ್ಷನ್‌ನಲ್ಲಿ ಈ ರೀತಿ ಇದೆ—

'...the State Governments in India have in all periods since independence, been characterized by disagreement and tensions as much as by harmony and agreement. Only the mixture, and the means of dealing with disputes, have varied from time to time. For nearly two decades after the Constitution of India came into force, differences were not as many or as open as they have now become perhaps because the Congress Party as it then existed held sway all over the country and inter governmental differences, were dealt with more inside the party than outside it. Perhaps it was because in the initial phase of indepence a strong nationalist sentiment and the general concern for the rapid economic development, enabled national requirements to receive priority over State or regional needs."

ಈಗ ಆಗಿರುವುದು ಏನು ? ಮೊದಲು ಕಾಂಗ್ರೆಸ್ ಸರ್ಕಾರ ಇತ್ತು. ಕಾಂಗ್ರೆಸ್ ಸರ್ಕಾರ ಹೋದ ಮೇಲೆ ಈಗ ಬೇರೆ ಬೇರೆ ಗವರ್ನಮೆಂಟ್‌ಗಳು ಇವೆ. ಏನು ಹೆಚ್ಚು ಆಗಿದೆ ಎಂದರೆ ರಾಮಕೃಷ್ಣ ಹೆಗಡೆ ಹೇಳಿದಂತೆ ಇದು ಸುಪ್ರೀಂ ಗವರ್ನಮೆಂಟ್

On page 19 :

"A Super power attitude and show of superiority on the part of the Union, which is the natural consequences of the concentration of powers and resources, has been responsible for generating a feeling of frustration and sense of injustice and discrimation and helplessness on the part of the States which in turn produces the dangerous forces of regionalism. The concentration of power has also distorted to the scheme of the constitution and led to the devaluation of important institutions like the Planning Commission and the Reserve Bank which have become the extended departments of the Executive. Even the Governor has become a

glorified servant of the Union. An omnipotent and omnipresent Union that the present Central Government has grown into and withering States are the very negation of democratic polity.

"States are demanding their legitimate share of the divisible pool of the resources on account of the Union resorting to increase the prices of commodities like diesel instead of increasing the excise duty or levying additional income tax in the name of surcharge..."

ಇದನ್ನು ನಾವು ನೋಡಿದರ ಕೂಡ ಮಾನ್ಯ ಸ್ಪೀಕರ್‌ರವರು ಕೊಟ್ಟಂತಹ ಲೆಕ್ಕ ಪ್ರಕಾರ ನಮಗೆ ಸೆಂಟ್ರಲ್‌ನಿಂದ ಬರಬೇಕಾದ ದುಡ್ಡು ಎಷ್ಟು ? ಎಷ್ಟು ದುಡ್ಡು ಬಂದಿದೆ ಎನ್ನುವ ಲೆಕ್ಕವನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಿಂದ ಬರಬೇಕಾಗಿರುವಂತಹ ಹಣ ೨೬೪ ಕೋಟಿ ರೂಪಾಯಿಗಳು. ಆದರೆ ಕೇಂದ್ರದವರು ಕೊಟ್ಟಂತಹ ಹಣ ೮೮ ಕೋಟಿ ರೂಪಾಯಿಗಳು ಇದಲ್ಲದೆ ಒಂದು ವಾರದೊಳಗೆ ಓ ಡಿ. ಕೊಡದಿದ್ದ ಪಕ್ಷದಲ್ಲಿ ಬಿಲ್ಸ್ ಹಾನರ್ ಮಾಡುವುದಿಲ್ಲ. ಬಿಲ್ಸನ್ನು ಡಿಸ್ ಆನರ್ ಮಾಡುತ್ತೇವೆ ಎಂದು ಹೇಳುತ್ತಾರೆ. ಇತರರು ಕನಿಷ್ಟ ಪಕ್ಷ ಮೂರು ವಾರವನ್ನಾದರೂ ಕೊಡಿ ಎಂದು ಹೇಳಿದರು. ಅವರು ಕೊಟ್ಟಂತಹ ಹಣ ೬೨ ಕೋಟಿ ರೂಪಾಯಿಗಳು. ನಿಮಗೆ ಫೈನಾನ್ಸಿಯಲ್ ಡಿಸಿಪ್ಲಿನ್ ಇಲ್ಲ, ನೀವು ನ್ಯಾಯವಾಗಿ ನಡೆಸಿಕೊಂಡು ಹೋಗಬೇಕು ಎಂದು ಹೇಳುತ್ತಾರೆ. ಇದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿಯಾಗಲೀ ಅಥವಾ ಮಾನ್ಯ ಮುಖ್ಯಮಂತ್ರಿಗಳ ಭಾಷಣದಲ್ಲಿಯಾಗಲೀ ಅನ್ಯಾಯ ನಡೆದಿಲ್ಲ ಎನ್ನುವ ಬಗ್ಗೆ ಏಕೆ ಪ್ರಸ್ತಾಪ ಮಾಡಲಿಲ್ಲ ? ಕೇಂದ್ರ-ಸರ್ಕಾರದಿಂದ ನಮಗೆ ಬರಬೇಕಾಗಿರುವಂತಹ ಹಣ ನಮಗೆ ಪೂರ್ತಿಯಾಗಿ ಬರಲಿಲ್ಲ. ೧೯೮೭ರಲ್ಲಿ ೩೨೨.೩೧ ಲಕ್ಷ ರೂಪಾಯಿಗಳು ಬರಬೇಕಾಗಿತ್ತು. ಅವರು ಪೂರ್ಣವಾಗಿ ಲೆಕ್ಕ ಹಾಕಿದರೆ ಸುಮಾರು ೨೦೦ ಕೋಟಿ ರೂಪಾಯಿಗಳ ಓ.ಡಿ. ನಮಗೆ ಕೊಡಬೇಕು. ಆದರೆ ಕೇಂದ್ರ ಸರ್ಕಾರದಿಂದ ಬರಬೇಕಾದ ಹಣವನ್ನು ನಮಗೆ ಕೊಡದೆ ಅವರು ನಮ್ಮಲ್ಲಿ ಫೈನಾನ್ಸಿಯಲ್ ಡಿಸಿಪ್ಲಿನ್ ಇಲ್ಲ ಎಂದು ಹೇಳುವುದು ಶುದ್ಧ ಅನ್ಯಾಯ. ಜೊತೆಗೆ ಇದರ ಬಗ್ಗೆ ಮಾನ್ಯ ಪೂಜಾರಿಯವರು ಲೋನ್ ಮೇಳ ಮಾಡಿದರು, ನಮ್ಮ ಜನತಾದವರು ಅದನ್ನು ಪ್ರತಿಭಟಿಸಬೇಕಾಗಿತ್ತು. ಲೋನ್ ಮೇಳ ಮಾಡುವುದಕ್ಕೆ ಯಾರದೂ ಅಭ್ಯಂತರವಿಲ್ಲ. ಇಲ್ಲಿ ಬಡವರಿಗೆ ಲೋನ್ ಕೊಡಲಿಕ್ಕೆ ಯಾರೂ ಬೇಡವೆಂದು ಹೇಳುವುದಿಲ್ಲ. ಆದರೆ ಕಾಂಗ್ರೆಸ್ ಲೋನ್ ಮೇಳ ಮಾಡಬಾರದು. ಇಲ್ಲಿ ಎಲೆಕ್ಟೆಡ್ ರೆಪ್ರೆಸೆಂಟಿಟೀವ್ಸ್ ಇರುತ್ತಾರೆ ಅವರ ಕೊ-ಆಪರೇಶನ್ ತೆಗೆದುಕೊಂಡು ಅವರಿಗೂ ಕೂಡ ಲೋನ್ ಫಾರಂ ಹಂಚಿ ಬಡವರಿಗೆ ಕೊಡುವುದಾದರೆ ಆ ನಿರ್ಧಾರವನ್ನು ನಾವು ಒಪ್ಪಿಕೊಳ್ಳಬಹುದು. ಅವರು ಮಾರ್ಚ್ ಬಂದ ಹಾಗೆ ಬಂದು ಕಾಂಗ್ರೆಸ್ ಜನರೊಂದಿಗೆ ಕೆ. ಸುಂದರ್ ಎಂಬ ಮಧ್ಯವರ್ತಿ ಮುಖಾಂತರ ೮೩ ಸಾವಿರ ಅಪ್ಲಿಕೇಶನ್ಸ್ ಕೊಟ್ಟು ಅದನ್ನು ಕಾಂಗ್ರೆಸ್ ಆಫೀಸ್‌ನಲ್ಲಿಯೇ ಕೊಟ್ಟಿದ್ದುದು ಇದು ನಿಜವಾಗಿಯೂ ಜನತಾ ಸರ್ಕಾರಕ್ಕೆ ಮಾಡಿದ ಅಪಮಾನವಲ್ಲ, ಜನತೆಗೆ ಮಾಡಿದ ಅಪಮಾನ. ಈ ಬ್ಯಾಂಕ್‌ಗಳನ್ನು ಕಾಂಗ್ರೆಸ್ ಬ್ಯಾಂಕ್ ಎಂದು ಅವರು ಮಾಡಿಕೊಂಡು ಲೋನ್ ಕೊಟ್ಟರೆ ಹೇಗೆ ? ೬೪೪ ಬ್ರಾಂಚ್‌ಗಳನ್ನು ಇಲ್ಲಿ ಇನ್‌ವಾಲ್ವ್ ಮಾಡಿಸಿ ಲಕ್ಷಾಂತರ ರೂಪಾಯಿಗಳನ್ನು, ಸರಿಯಾಗಿ ಫಂಕ್ಷನ್ ಮಾಡದೇ ಜನರಿಗೆ ಸಾಲಗಳನ್ನು ಕೊಟ್ಟರು.

ಈ ಬಗ್ಗೆ ನೀವು ಪ್ರತಿಭಟನೆಯನ್ನು ಸೂಚಿಸಬೇಕಾಗಿತ್ತು. ತ್ರಿಪುರಾದಲ್ಲಿ ಸಾಲ ಮೇಳ ನಡೆಯಲು ಬಿಡಲಿಲ್ಲ. ಈ ಸಂಬಂಧದಲ್ಲಿ ಅಲ್ಲಿ ಗಲಾಟೆ ನಡೆದಾಗ ಕರ್ಫ್ಯೂವನ್ನು ವಿಧಿಸಲಾಯಿತು. ಅಲ್ಲಿ ಐದು ಜನರು ಸತ್ತರು. ಕಾಂಗ್ರೆಸ್ ಪಕ್ಷದ ಮೂಲಕ ಸಾಲ ಮೇಳ ನಡೆಸಿ ಸಾಲ ಹಂಚಲು ಬಿಡುವುದಿಲ್ಲವೆಂದು ಅವರು ಹೇಳಿದರು. ಅದೇರೀತಿ ನೀವೂ ಸಹ ಹೇಳಬೇಕಾಗಿತ್ತು, ಸಾಲ ಕೊಡುವುದು ಇದ್ದರೆ ಎಲ್ಲರಿಗೂ ಕೊಡಲಿ. ಮೊನ್ನೆ ಬೆಂಗಳೂರು ನಗರದಲ್ಲಿ ನಡೆದ ಸಾಲ ಮೇಳದ ಸಂದರ್ಭದಲ್ಲಿ ೮೫ ಸಾವಿರ ಅರ್ಜಿಗಳನ್ನು ಜನರಿಗೆ ಸುಂದರ್ ಎಂಬ ವ್ಯಕ್ತಿಯು ಹಂಚಿಕೆ ಮಾಡಿದ್ದ. ಅರ್ಜಿಗಳನ್ನು ಕೊಡುವ ಸಂದರ್ಭದಲ್ಲಿ ಒಬ್ಬೊಬ್ಬರಿಂದ ೨೦೦ ರೂಪಾಯಿಗಳಿಂದ ಹಿಡಿದು ೫೦೦ ರೂಪಾಯಿಗಳವರೆಗೆ ಲಂಚ ತೆಗೆದುಕೊಂಡಿದ್ದ ಎಂದು ಪತ್ರಿಗಳಲ್ಲಿ ವರದಿ ಆಗಿತ್ತು. ಆದ್ದರಿಂದ ದೆಂತಹ ಒಂದು ಸಾಲ ಮೇಳವನ್ನು ನೀವು ಪ್ರತಿಭಟಿಸ

ಬೇಕಾಗಿತ್ತು, ಆದರೆ ಆ ಕೆಲಸವನ್ನು ನೀವು ಮಾಡಲಿಲ್ಲ. ನೀವು ಈ ಬಗ್ಗೆ ಸುಮ್ಮನಿದ್ದರೆ, ಇದು ಎಲ್ಲಿಗೆ ಹೋಗುತ್ತದೆಂದರೆ, ಮುಂದೆ ಇದೇ ಕಾಂಗ್ರೆಸ್ ಪಕ್ಷದವರ ದಬಾವಣೆಗೆ ಈ ಜನತಾ ಸರ್ಕಾರದ ಬಗ್ಗೆ ಬೇಕಾಗುತ್ತದೆ. ಅಷ್ಟಕ್ಕೆಲ್ಲಾ ನೀವು ಅವಕಾಶ ಕೊಡಬಾರದು. ಕರ್ನಾಟಕ ರಾಜ್ಯದಲ್ಲಿ ಫೈನಾನ್ಸಿಯಲ್ ಡಿಸಿಪ್ಲಿನ್ ಇಲ್ಲ ಎಂದು ಪೂಜಾರಿ ಅವರು ಹೇಳಿದ್ದಾರೆ. ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ ಆಗ ಬೇಕೆಂಬ ಆಸೆ ಶ್ರೀ ಪೂಜಾರಿ ಅವರಿಗೆ ಬಂದಿದೆ. ಇದನ್ನೇ ಅವರು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಬಾಗೇಪಲ್ಲಿಯಲ್ಲಿ ಲೋನ್ ಮೇಳ ನಡೆಸಲು ವ್ಯವಸ್ಥೆ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ಬೇರೆ ಕಡೆ ಗಳಲ್ಲಿಯೂ ಈ ರೀತಿಯ ವ್ಯವಸ್ಥೆ ನಡೆದಿದೆ. ಪೂಜಾರಿ ಅವರು ನಮ್ಮ ರಾಜ್ಯದವರೇ ಆಗಿದ್ದರೂ ಸಹ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾದಹಣವನ್ನು ಕೊಡಿಸಲು ವ್ಯವಸ್ಥೆ ಮಾಡುತ್ತಿಲ್ಲ. ಬೇರೆಬೇರೆ ಬಾಬುಗಳಿಂದ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಸುಮಾರು ಮುನ್ನೂರು ಕೋಟಿ ರೂಪಾಯಿಗಳಷ್ಟು ಬಾಕಿ ಬರಬೇಕಾಗಿದೆ. ಆದರೆ ಈ ಬಗ್ಗೆ ಅವರಿಗೆ ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡುವಂಥ ಇಂಟರೆಸ್ಟ್ ಅವರಿಗೆ ಇಲ್ಲ. ಈ ಜನತಾ ಸರ್ಕಾರಕ್ಕೆ ಕೆಟ್ಟ ಹೆಸರು ಬರಬೇಕು, ಮುಂದೆ ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರವೇ ಆಡಳಿತ ನಡೆಸಬೇಕು ಎಂದುಕೊಂಡು ಪ್ರತಿ ಘಟ್ಟದಲ್ಲಿಯೂ ಅವರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಇದರ ಜೊತೆಗೆ ಸಾಲ ಮೇಳಗಳನ್ನು ನಡೆಸುತ್ತಿದ್ದಾರೆ, ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಪಶ್ಚಿಮಬಂಗಾಳ, ಆಂಧ್ರ ಮುಂತಾದ ರಾಜ್ಯ ಗಳಲ್ಲಿಯೂ ಸಾಲ ಮೇಳಗಳನ್ನು ನಡೆಸಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಲ ಮೇಳ ನಡೆಸುವುದನ್ನು ಪ್ರತಿಭಟಿಸಬೇಕಾಗಿತ್ತು. ಆದರೆ ನೀವು ಕೆಲಸ ಮಾಡಲಿಲ್ಲ. ರಾಜ್ಯಪಾಲರ ಭಾಷಣದಲ್ಲಿಯಾದರೂ ಇದನ್ನು ನಮೂದು ಮಾಡಬೇಕಾಗಿತ್ತು. ಆದರೆ ಇಲ್ಲಿಯೂ ಸಹ ಅದನ್ನು ಪ್ರಸ್ತಾಪ ಮಾಡದೇ ಇದ್ದುದು ಸರಿಯಲ್ಲ. ಕಳೆದ ೫ ವರ್ಷಗಳಲ್ಲಿ ಇವರು ಮಾಡಿದಂಥ ಸಾಧನೆಗಳ ಬಗ್ಗೆ ಹೇಳಿದ್ದಾರೆಯೇ ಹೊರತು ಸಾಲ ಮೇಳದಂಥ ವಿಚಾರಗಳನ್ನು ಪ್ರಸ್ತಾಪ ಮಾಡಿಲ್ಲ. ಇಂತಹ ಅನ್ಯಾಯಗಳು ನಡೆಯುತ್ತಿವೆ ಎಂಬು ದನ್ನು ರಾಜ್ಯಪಾಲರ ಭಾಷಣದ ಮೂಲಕ ಕೇಂದ್ರಸರ್ಕಾರಕ್ಕೆ ತೋರಿಸಿದ್ದರೆ ಚೆನ್ನಾಗಿರುತ್ತಿತ್ತು. ಈ ಕಾರಣದಿಂದ ಈ ಸಲ ಮಾನ್ಯ ರಾಜ್ಯಪಾಲರ ಭಾಷಣ ಸರಿಯಾದ ಭಾಷಣವಾಗಿ ಹೊರಬಂದಿಲ್ಲ ಎಂದು ನನ್ನ ಅನಿಸಿಕೆ. ಇನ್ನೂ ಎರಡು ವರ್ಷಗಳ ಕಾಲ ನೀವು ಅಧಿಕಾರದಲ್ಲಿರುತ್ತೀರಿ. ಆದ್ದರಿಂದ ಜನರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ನೀವು ಹಾಕಿಕೊಳ್ಳಬೇಕು. ಶೇಕಡ ೮೦ರಷ್ಟು ಇರು ವಂತಹ ರೈತರ ಬಗ್ಗೆ ನೀವು ಹೆಚ್ಚಿನ ಕಾಳಜಿ ವಹಿಸಬೇಕು. ಕಾಂಗ್ರೆಸ್ ಪಕ್ಷದವರ ಒಂದು ಅಪಪ್ರಚಾರ ದಿಂದ ಮುಂದಿನ ಚುನಾವಣೆ ನಂತರ ಈ ಜನತಾ ಸರ್ಕಾರ ಅಧಿಕಾರದಲ್ಲಿ ಇರುತ್ತದೆಯೋ ಅಥವಾ ಇಲ್ಲವೋ ಎಂಬ ಅನುಮಾನ ನನಗೆ ಬಂದಿದೆ. ಆದ್ದರಿಂದ ನೀವು ಜನಸಾಮಾನ್ಯರನ್ನು ಸ್ಪಂಧಿಸುವ ರೀತಿ ಯಲ್ಲಿ ಆಡಳಿತ ನಡೆಸಬೇಕು. ಇಲ್ಲದಿದ್ದರೆ ಮುಂದೆ ಇಲ್ಲಿ ಬಕಾಸುರನಂಥ ಕಾಂಗ್ರೆಸ್ ಸರ್ಕಾರವೇ ಅಧಿ ಕಾರಕ್ಕೆ ಬರಬಹುದು. ಗುಂಡೂರಾವ್ ಸರ್ಕಾರದಂಥ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ರೈತರು ಮತ್ತೆ ತಮ್ಮ ಚಳುವಳಿಯನ್ನು ಪ್ರಾರಂಭ ಮಾಡಬೇಕಾಗುತ್ತದೆ. ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ಸುಮಾರು ೧೭೦ ಜನ ರೈತರು ಪ್ರಾಣ ತೆತ್ತರು. ನಮ್ಮ ಬಾಗೇಪಲ್ಲಿಯಲ್ಲಿ ದೊಡ್ಡತಿಮ್ಮ ಮತ್ತು ನರಸಿಂಹರೆಡ್ಡಿ ಎಂಬ ಹೆಸರಿನ ಇಬ್ಬರು ಕಾಮ್ರೇಡ್ಸ್ ತಮ್ಮ ಪ್ರಾಣ ಕಳೆದುಕೊಂಡರು. ಆದ್ದರಿಂದ ಮತ್ತೆ ಅಂತಹವರ ಕೈಯಲ್ಲಿ ಸುಲಭವಾಗಿ ಅಧಿಕಾರ ಕೊಡುವಂಥ ಸಂದರ್ಭ ಬರಬಾರದು. ಮುಖ್ಯ ವಾಗಿ ನೀವು ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಬೇಕು. ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ನೀವು ಹೆಚ್ಚಿನ ಕಾಳಜಿಯನ್ನು ವಹಿಸಬೇಕು. ಹರಿಯಾಣದಲ್ಲಿ ದೇವಿಲಾಲ್ ಅವರು ರೈತರ ಸಾಲ ವನ್ನು ಮನ್ನಾ ಮಾಡುವ ಬಗ್ಗೆ ಒಂದು ದೊಡ್ಡ ತೀರ್ಮಾನವನ್ನು ತೆಗೆದುಕೊಂಡರು. ಇಲ್ಲಿ ನೀವೂ ಸಹ ಅದೇ ರೀತಿ ರೈತರ ಸಾಲಗಳನ್ನು ರದ್ದು ಮಾಡಬೇಕು. ಇದರ ಜೊತೆಗೆ ಅನಧಿಕೃತವಾಗಿ ಯಾರು ಯಾರು ಸರ್ಕಾರದ ಬಂಜರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ, ಅದನ್ನು ಅವರಿಗೇ ಖಾಯಂ ಗೊಳಿಸಿದರೆ ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆ. ಈ ಜನತಾ ಸರ್ಕಾರಕ್ಕೂ ಕೂಡ ಪ್ರೊಗ್ರೆಸೀವ್ ಇಮೇಜ್ ಇದೆ ಎಂಬುದನ್ನು ಮತ್ತು ಬಡವರ ಬಗ್ಗೆ ಹೆಚ್ಚಿನ ಕಾಳಜಿ ಇದೆ ಎಂಬುದನ್ನು ನೀವು ತೋರಿಸಿಕೊಡಬೇಕು. ನಿರುದ್ಯೋಗ ಸಮಸ್ಯೆ ಎಂಬುದು ಇಡೀ ರಾಜ್ಯದಲ್ಲಿ ತುಂಬಿತುಳುಕುತ್ತಿದೆ. ಈ ಕಾರಣ ದಿಂದ ನೀವು ಕೃಷಿ ಕಾರ್ಮಿಕರ ಬಗ್ಗೆ ಮತ್ತು ಕಾರ್ಮಿಕರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸ ಬೇಕು. ಈ ಬಡಜನರ ವಿಚಾರದಲ್ಲಿ ಈ ಸರ್ಕಾರ ಸ್ಪಂಧಿಸಬೇಕು. ಇಲ್ಲದಿದ್ದರೆ ಈ ಜನತಾ ಸರ್ಕಾರ ಅಧಿಕಾರದಲ್ಲಿ ಉಳಿಯುವುದಿಲ್ಲ. ಇದು ಮಧ್ಯಮ ವರ್ಗದ ಜನರನ್ನು ಪ್ರತಿನಿಧಿಸುವ ಸರ್ಕಾರ ಎಂದು ಮಾನ್ಯ ರಮೇಶ್‌ಕುಮಾರ್ ಅವರು ಹೇಳಿದರು. ಆದರೆ ಈ ಮಧ್ಯಮವರ್ಗದ ಜನರ ಬೆಂಬಲ ಸಂಪೂರ್ಣ

ವಾಗಿ ಜನತಾ ಪಕ್ಷಕ್ಕೆ ಇದೆ ಎಂದು ತಾವು ಭಾವಿಸಬಾರದು. ಏಕೆಂದರೆ, ಮಧ್ಯಮವರ್ಗದವರ ಪೈಕಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಜನರೂ ಸಹ ಇದ್ದಾರೆ.

ಈ ಸರ್ಕಾರ ಮಧ್ಯಮ ವರ್ಗದ ಮನಾಪಲಿ ಅಲ್ಲ, ಜನತಾಪಾರ್ಟಿಯ ಮನಾಪಲಿ ಏನಲ್ಲ. ಇದನ್ನು ಸರಿ ಮಾಡಬೇಕು ಎನ್ನುವ ವರ್ಗ ಅಂದರೆ ಬಡವರು, ದಲಿತರು, ಕೃಷಿ ಕಾರ್ಮಿಕರು, ಕಾರ್ಮಿಕರು, ಸಣ್ಣ ಮತ್ತು ಅತಿ ಸಣ್ಣ ರೈತರು. ಮೊದಲೇ ಈ ಜನ ಕಾಂಗ್ರೆಸ್ ಓಟ್ ಬ್ಯಾಂಕ್ ಆಗಿದ್ದರು ನಂತರ ಬದಲಾವಣೆಯಾಯಿತು. ಈ ಬದಲಾದ ಪರಿಸ್ಥಿಯನ್ನು ಉಪಯೋಗ ಮಾಡಿಕೊಳ್ಳಬೇಕು. ಜೊತೆಗೆ ಮೈನಾರಿಟೀಸ್‌ಗೆ ಸರಿಯಾಗಿ ಹೇಳಬೇಕು. ಕಾಂಗ್ರೆಸ್‌ನವರು ಮೊದಲಿನಿಂದ ಮೈನಾರಿಟೀಸನ್ನು ತುಳಿದುಕೊಂಡು ಬಂದರು. ನೀವು ಕಾಂಗ್ರೆಸನ್ನು ನೆಚ್ಚಿಕೊಂಡಿದ್ದೀರಿ, ಅದು ನ್ಯಾಯವಲ್ಲ ಎಂದು ಹೇಳಬೇಕು. ಮೈನಾರಿಟೀಸ್ ಕಾರ್ಪೊರೇಷನ್‌ಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದನ್ನು ಜಾಸ್ತಿ ಮಾಡಬೇಕು. ಮೈನಾರಿಟೀಸ್ ಬಗ್ಗೆ ಜಾಸ್ತಿ ಕಾಳಜಿ ತೋರಿಸಿದರೆ, ಮೈನಾರಿಟೀಸ್, ಕಾಂಗ್ರೆಸ್ಸೇತರ ಸಹಾಯ ದೊರೆಯುವಂತಾಗುತ್ತದೆ ಆದುದರಿಂದ ಇನ್ನು ಎರಡು ವರ್ಷಗಳಾದರೂ ಕೆಲವು ಸ್ಕೀಮ್ಸ್ ತಂದು ನಾವು ಬಡವರ ಬಗ್ಗೆ ಕಾಳಜಿ ಇರುವವರು ಎಂದು ತೋರಿಸಿಕೊಂಡರೆ ಅನುಕೂಲವಾಗುತ್ತದೆ. ರಾಜ್ಯದಲ್ಲಿ ಹಿತದೃಷ್ಟಿಯಿಂದ ತಾವು ಉಳಿಯಬೇಕು. ಅದು ಆಗಬೇಕಾಗಿದೆ. ಎಂದು ಹೇಳಿ, ನನ್ನ ಅನಿಸಿಕೆಗಳನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯನ್ನು ಕೇಳಿದ್ದರು. ಅದಕ್ಕೆ ಉತ್ತರ ಹೇಳಿಬಿಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಈಗ ಆರೀತಿ ಉತ್ತರ ಹೇಳುವ ಅಭ್ಯಾಸ ಇಲ್ಲ.

ಶ್ರೀ ಎಂ. ರಘುಪತಿ.— ಅಭ್ಯಾಸ ಇದೆ.

ಶ್ರೀ ಎಂ. ರಘುಪತಿ.— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಪ್ರಾಥಮಿಕ ಮಂತ್ರಿಗಳ ಪರವಾಗಿ ಈ ಉತ್ತರವನ್ನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು.— ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆಯೇ, ಇಲ್ಲ, ಈಗ ಬೇಡ. ಈಗ ಮಾನ್ಯ ದೊಡ್ಡಮೇಟಿಯವರು ಮಾತನಾಡಲಿ.

† ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).— ಸನ್ಮಾನ್ಯ ಅಧ್ಯಕ್ಷರೇ, ರಾಜ್ಯ ವಿಧಾನ ಮಂಡಲದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ಇಡಬಯಸುತ್ತೇನೆ ಇಡಬಯಸುವುದಕ್ಕಿಂತ ಮೊದಲು ಡಿ. ವಿ. ಜಿ. ಯವರ ಮಂಕುತಿಮ್ಮನ ಕಗ್ಗದೊಳಗಿನ ಒಂದು ಮಾತು ಇಲ್ಲಿ ನೆನಪಾಗುತ್ತಿದೆ. ಅದನ್ನು ಹೇಳುತ್ತೇನೆ.

> "ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ
> ಗದ್ದಲ ತುಂಬಿ ಪ್ರಸಿದ್ಧನಾಗುತಿಹೆ"
> ಉದ್ಧರಿಸುವೆನು ಜಗವೆನ್ನುತಿಹ ಸಬನೆ ನೀ-
> ನ್ನುದ್ಧಾರವೆಷ್ಟಾಯ್ತೊ ? –ಮಂಕುತಿಮ್ಮ"

ಇಂದು ವಿಧಾನಸಭೆಯಲ್ಲಿ ಪ್ರತಿಪಕ್ಷದ ಸದಸ್ಯರು ಯಾರೂ ಇಲ್ಲ. ಬಹುತೇಕ ಆ ಸದಸ್ಯರ ಸಮುಖ ಕಾಣದೆ ಸಭೆ ಸ್ವಲ್ಪ ನೀರಸ ಎಂದು ಅನಿಸುತ್ತದೆ. ಆದರೂ ಕೂಡ ಈ ನನ್ನ ನಾಲ್ಕು ಮಾತುಗಳನ್ನು ಹೇಳುತ್ತೇನೆ. ರಾಜ್ಯಪಾಲರೂ ಕೂಡ ತಮ್ಮ ಭಾಷಣದಲ್ಲಿ ೫ ವರ್ಷಗಳಲ್ಲಿ ನಾವು ಬಹಳಷ್ಟು ಸಾಧನೆಯನ್ನು ಮಾಡಿದರೂ ಕೂಡ ಇನ್ನೂ ನಾವು ಸಾಧಯನ್ನು ಬಹಳಷ್ಟು ಮಾಡಬೇಕಾಗಿದೆ, ಸವಾಲುಗಳನ್ನು ಎದುರಿಸಬೇಕಾಗಿದೆ ಎನ್ನುವ ಒಂದು ಸತ್ಯಾಂಶವನ್ನು ಕೂಡ ಮುಚ್ಚುಮರೆಯಿಲ್ಲದೆ ಇಲ್ಲಿ ಇಟ್ಟಿದ್ದಾರೆ. ಅಮೇಲೆ ಬರಗಾಲದ ಒಂದು ಪರಿಸ್ಥಿತಿಯಲ್ಲೂ ಕೂಡ ರಾಜ್ಯ ಸರ್ಕಾರ ಸವಾಲುಗಳನ್ನು ಎದುರಿಸಿ ಆರ್ಥಿಕ ಪರಿಸ್ಥಿತಿಯ ಇತಿಮಿತಿಯೊಳಗೆ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದೆ. ರಾಜ್ಯ ಸರ್ಕಾರ ಅನೇಕ ಸಲ ಕೇಂದ್ರ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸುತ್ತಾ ಬಂದಿದೆ, ಅವರು ಕೊಟ್ಟ ಹಣ ಎಷ್ಟು ಎನ್ನುವುದನ್ನೂ ಕೂಡ ಹೇಳಿದೆ. ಕೇಂದ್ರ ಸರ್ಕಾರದವರು ಕೊಡತಕ್ಕ ನೆರವನ್ನು ಪೂರ್ಣವಾಗಿ ಅನುದಾನವಾಗಿ ಕೊಡಬೇಕು. ಯೋಜನೆಗಳಿಗೆ ಕಡಿತ ಮಾಡಬೇಡಿ ಎಂದು ಪದೇ ಪದೇ

ರಾಜ್ಯ ಸರ್ಕಾರ ಕೇಂದ್ರಕ್ಕೆ ಭಿನ್ನವಿಸಿದರೂ ಕೇಂದ್ರ ಸರ್ಕಾರ ಕಿವಿ ಮೇಲೆ ಹಾಕಿಕೊಳ್ಳದೆ ಹಾಗೆಯೇ ನಡೆದಿರುವುದು ಕಂಡುಬಂದಿದೆ. ಈ ರೀತಿಯಾಗಿ ರಾಜ್ಯ ಸರ್ಕಾರಗಳನ್ನು ಕಷ್ಟಕ್ಕೆ ಈಡುಮಾಡಿದೆ.

ಪ್ರತಿ ವರ್ಷವೂ ರಾಜ್ಯ ಸರ್ಕಾರ ಇದೇ ರೀತಿಯ ಮನವಿಗಳನ್ನು ಕೊಡುತ್ತಲೇ ಇದೆ. ಈ ದಿಸೆಯಲ್ಲಿ ಪರಿಣಾಮಕಾರಿಯಾದ ಕ್ರಮಗಳನ್ನು ಕೇಂದ್ರ ಸರ್ಕಾರ ಕೈಗೊಳ್ಳದೇ ಇರುವುದು ವಿಷಾದ ಅನ್ನಿಸುತ್ತದೆ. ಅಷ್ಟೇ ಅಲ್ಲ ಬರಗಾಲ ಕರ್ನಾಟಕಕ್ಕೆ ಕಳೆದ ೫ ವರ್ಷಗಳಿಂದ ಸತತವಾಗಿ ಬಿದ್ದರೂ ಕೂಡ ಯಾವುದೇ ರೀತಿಯ ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಲಿಲ್ಲ. ಇದೇ ಬರಗಾಲ ಡೆಲ್ಲಿಯ ಸಮೀಪ 'ಇರುವಂಥ ರಾಜ್ಯಗಳಲ್ಲಿ ಬಿದ್ದಾಕ್ಷಣ ಕೇಂದ್ರ ಸರ್ಕಾರ ತುರ್ತು ಕ್ರಮ ಕೈಗೊಂಡು, ಪ್ರಧಾನ ಮಂತ್ರಿಗಳ ಬರಗಾಲ ಪರಿಹಾರ ನಿಧಿಯನ್ನು ಪ್ರಾರಂಭ ಮಾಡಿ ತ್ವರಿತವಾಗಿ ಕ್ರಮ ಕೈಗೊಂಡಿದೆ. ಇವತ್ತು ಅಖಂಡ ಭಾರತದ ಪ್ರತಿಯೊಂದು ರಾಜ್ಯವೂ ಕೂಡ ಪ್ರಾದೇಶಿಕ ಭಾವನೆಗೆ ಯಾವ ಎಡೆಯನ್ನು ಮಾಡಿಕೊಟ್ಟಿದೆ ಎನ್ನುವುದರ ಬಗ್ಗೆ ವಿಚಾರ ಮಾಡುವುದಕ್ಕೆ ಹತ್ತಿವೆ. ಇವತ್ತು ಕೇಂದ್ರ ಸರ್ಕಾರದ ಆರ್ಥಿಕ ಪರಿಸ್ಥಿತಿ ಹೇಗೆ ಇದೆ. ನನಗನ್ನಿಸುತ್ತದೆ ಅದರ ಆರ್ಥಿಕ ಪರಿಸ್ಥಿತಿಯೂ ಕೂಡ ಬಹಳ ಉಬ್ಬರರೋಗಿ ಇದೆ. ಬಿಸಿ ಮುಟ್ಟಿದ ಪೀತಾಂಬರದಂತೆ ಇದೆ. ಉಟ್ಟುಕೊಳ್ಳಲೂ ಬಾರದು ಇಟ್ಟುಕೊಳ್ಳಲೂ ಬಾರದು. ರಾಜ್ಯ ಸರ್ಕಾರಗಳು ಪೀತಾಂಬರ ಹಿಡಿದರೆ ಕೇಂದ್ರ ಸರ್ಕಾರ ಬೆತ್ತಲೆಯಾಗುವಂಥ ಪರಿಸ್ಥಿತಿ ಬರುತ್ತದೆ. ಇದು ಸತ್ಯಕ್ಕೆ ದೂರವಾದುದೇನೂ ಅಲ್ಲ. ಇವತ್ತು ದೇಶದೊಳಗೆ ಕಪ್ಪು ಹಣ ಎಷ್ಟು ಕೆಲಸ ಮಾಡುತ್ತಿದೆ. ಸಾರ್ವಜನಿಕ ಹಣಕಾಸು ಯೋಜನಾ ಸಂಸ್ಥೆಯವರು, ಬ್ಯಾಂಕುಗಳು ರಾಷ್ಟ್ರೀಕರಣವಾದ ಮೇಲೆ ಕಪ್ಪು ಹಣ ಎಷ್ಟು ಹೊರಕ್ಕೆ ಬಂದಿದೆ ಎನ್ನುವುದರ ಬಗ್ಗೆ ಕೊಟ್ಟಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ನಮಗೆ ದಿಗ್ಭ್ರಮೆಯಾಗುತ್ತದೆ. ಆ ಸಂಸ್ಥೆಯ ವರದಿ ಪ್ರಕಾರ ೧೯೭೫–೭೬ ರಲ್ಲಿ ಸುಮಾರು ೧೧,೮೦೦ ಕೋಟಿ ರೂಪಾಯಿಗಳು. ೧೯೮೦–೮೧ ರಲ್ಲಿ ೨೩,೬೭೬ ಕೋಟಿ ರೂಪಾಯಿಗಳು. ೧೯೮೫–೮೬ ರಲ್ಲಿ ೩೬,೮೮೬ ಕೋಟಿ ರೂಪಾಯಿಗಳ ಕಪ್ಪು ಹಣ ಚಲಾವಣೆಯಲ್ಲಿದೆ. ಈ ಸಾಲಿನಲ್ಲಿ ೪೦ ರಿಂದ ೪೫ ಕೋಟಿಗು ಮೀರಿರಬಹುದೆಂದು ಅಂದಾಜು ಮಾಡಬಹುದು. ಇದು ಪ್ರಸರಣವಾಗುವುದರಿಂದ ನಮ್ಮ ಆರ್ಥಿಕ ಬೆಳವಣಿಗೆಗೆ ಶುಭಲಕ್ಷಣವಲ್ಲವೆಂದು ಹೇಳಬಯಸುತ್ತೇವೆ. ಆರ್ಥಿಕ ವ್ಯವಸ್ಥೆಯನ್ನು ನಮ್ಮ ರಾಜ್ಯ ಸರ್ಕಾರ ಹೇಗೆ ಮಾಡಬೇಕು ಇದೂ ಕೂಡ ನಾವು ಆಲೋಚನೆ ಮಾಡಬೇಕಾದ ವಿಷಯ. ಮಾರಾಟ ತೆರಿಗೆಗಳನ್ನು ಸರಿಯಾಗಿ ವಸೂಲು ಮಾಡಬೇಕು. ಅಬ್ಕಾರಿ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಬೇಕು. ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ನಾನು ಇಷ್ಟ ಪಡುತ್ತೇನೆ. ಗದಗಿನಲ್ಲಿ ಒಂದು ಪಾತ್ರೆ ಕೊಳ್ಳುವುದಕ್ಕೆ ಬಾಂಡೇದ ಅಂಗಡಿಗೆ ಹೋಗಿದ್ದೆ. ನಾನು ಕೊಂಡ ಪಾತ್ರೆಗೆ ೬೪೭ ರೂಪಾಯಿ ಹೇಳಿದ. ಅದರಲ್ಲಿ ೭ ರೂಪಾಯಿ ಬಿಟ್ಟುಕೊಡು ಎಂದು ಕೇಳಿದೆ. ಅದಕ್ಕೆ ಅವನು ಒಪ್ಪಿಕೊಂಡ ಪಾತ್ರೆ ತೆಗೆದುಕೊಂಡು ಹಣ ಕೊಟ್ಟ ಮೇಲೆ, ನಾನು ಅವನನ್ನು ಬಿಲ್ ಕೇಳಿದೆ ನಿಮಗೆ ೭ ರೂಪಾಯಿ ಬಿಟ್ಟುಕೊಟ್ಟಿದ್ದೇನೆ, ಬಿಲ್ ಕೊಡುವುದಿಲ್ಲ ಎಂದು ಹೇಳಿದ, ನಿಮಗೆ ಬಿಲ್ ಕೊಟ್ಟರೆ, ೪೭ ರೂಪಾಯಿ ನೀವು ಕೊಡಬೇಕಾಗುತ್ತದೆಂದು ಹೇಳಿದ. ನಾನು ೭ ರೂಪಾಯಿಗೆ ಆಸೆ ಪಟ್ಟಿದ್ದಕ್ಕೆ ಸರ್ಕಾರಕ್ಕೆ ನಾನು ೪೭ ರೂಪಾಯಿ ವಂಚನೆ ಮಾಡಿದ ಹಾಗಾಯಿತು. ವ್ಯಾಪಾರಿ ವರ್ಗದವರನ್ನು ಸರಿಯಾದ ಹಿಡಿತದಲ್ಲಿ ಸರ್ಕಾರ ಇಟ್ಟುಕೊಳ್ಳಬೇಕು. ಇವರಿಂದ ಸರಿಯಾದ ರೀತಿಯಲ್ಲಿ ತೆರಿಗೆಯನ್ನು ವಸೂಲು ಮಾಡಿದರೆ ಬಡ ರೈತರ ಮೇಲೆ ತೆರಿಗೆ ಬೀಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

೧೧–೩೦ ಎ.ಎಂ.

ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರ ತಿಳಿಸಬೇಕೆಂದರೆ. ಬಹಳ ಜನರು ಏನು ಹೇಳುತ್ತಾರೆ ಅಂದರೆ ಜಿಲ್ಲಾ ಪರಿಷತ್ ಬಂದ ಮೇಲೆ ಮಂಡಲ್ ಪಂಚಾಯಿತ್‌ಗಳ ಬಂದ ಮೇಲೆ ಜಗಳಗಳು ಹಳ್ಳಿಗಳಲ್ಲಿ ಹೆಚ್ಚಾಗಿವೆ ಎಂದು ಹೇಳುತ್ತಾರೆ. ಆಮೇಲೆ ಮನೆ ಮನೆಗಳಲ್ಲೂ ಯುದ್ಧಗಳು ಪ್ರಾರಂಭವಾಗಿವೆ ಎಂದು ಹೇಳುತ್ತಾರೆ. ಹಾಗಾದರೆ ಹಿಂದೆ ಜಗಳಗಳು ಇರಲಿಲ್ಲವೆ ? ಎಲ್ಲಿ ಜಗಳಗಳು ಇರಲಿಲ್ಲ ? ಮನುಷ್ಯ ಪ್ರಾಣಿ ಎಲ್ಲಿ ಇರುತ್ತಾನೆಯೋ ಅಲ್ಲಿ ಜಗಳ ಇದ್ದೇ ಇರುತ್ತದೆ. ಅವನ ಆಸೆ ಆಕಾಂಕ್ಷೆಗಳು ಇದ್ದ ಹಾಗೆ ಇವೆಲ್ಲಾ ಇರುತ್ತವೆ, ಇವೊತ್ತು ಜಿಲ್ಲಾ ಪರಿಷತ್ತುಗಳು ಹೇಗೆ ನಡೆಯುತ್ತವೆ, ನೀವು ಆರ್ಥಿಕ ಸಂಪನ್ಮೂಲವನ್ನು ಕೊಟ್ಟರೂ ಕೂಡ ಅವುಗಳು ಸರಿಯಾಗಿ ಕೆಲಸ ಮಾಡಬೇಕು. ಅವು ಕೂಡ ಇವೊತ್ತು ಏನಾಗಿವೆ ಎಂದರೆ ರಾಜಕೀಯದ ಆಡಂಬರಗಳಾಗಿವೆ. ಪ್ರತಿಯೊಬ್ಬರೂ ಜಿಲ್ಲಾ ಪರಿಷತ್

ಮತ್ತು ಮಂಡಲ್ ಪಂಚಾಯತ್ ಸಭೆಗಳಲ್ಲಿ ಸಭಾತ್ಯಾಗ ಮಾಡಿದ್ದು ಮಾಡಿದ್ದೆ. ಎಲ್ಲಿ ಪ್ರತಿಪಕ್ಷದವರು ಇದ್ದಾರೆ ಅವರೂ ಕೂಡ ಸಭಾತ್ಯಾಗ ಮಾಡುತ್ತಿದ್ದಾರೆ. ಇವೊತ್ತು ಗ್ರಾಮದ ಬಗ್ಗೆಯಾಗಲಿ, ಜಿಲ್ಲಾ ಪರಿಷತ್ ಬಗ್ಗೆಯಾಗಲಿ, ಕಳಕಳಿಯುಳ್ಳಂಥ ಸದಸ್ಯರು ಇದ್ದಾರೆ, ಅವರಿಗೆ ಸರಿಯಾದ ತರಬೇತಿಯನ್ನು ಕೊಡಬೇಕು. ಇವೊತ್ತು ನೀವೂ ತರಬೇತಿಯನ್ನು ಕೊಡುತ್ತಿದ್ದೀರಿ ಇಲ್ಲ ಎಂದು ಹೇಳುವುದಿಲ್ಲ, ಆದರೆ ಅದರಲ್ಲಿ ರಾಜಕೀಯದ ಒಂದು ಪ್ರೇರಿತ ಭೂತಗಳು ಅಡ್ಡಾಡುತ್ತಿವೆ. ಆದ್ದರಿಂದ, ಒಳ್ಳೆಯ ಕೆಲಸ ಮಾಡಬೇಕೆನ್ನುವ ಕಳಕಳಿಯ ಸದಸ್ಯರನ್ನು ನಾವು ತಯಾರು ಮಾಡಬೇಕಾಗಿದೆ. ಇನ್ನು ಜಿಲ್ಲಾ ಪರಿಷತ್ ಸದಸ್ಯರನ್ನಾಗಲಿ, ಅಥವಾ ಮಂಡಲ್ ಪಂಚಾಯತ್ ಸದಸ್ಯರನ್ನಾಗಲಿ, ನಮ್ಮ ವಿಧಾನ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಣೆ ಮಾಡಲಿಕ್ಕೆ ಮಾತ್ರ ನೀವು ಕರೆಸಿಕೊಂಡು ಒರಬಾರದು ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇಲ್ಲಿಯ ಛಾಯೆ ಅಲ್ಲಿಯೂ ಪಡೆದುಕೊಂಡೀತು. ಈ ಸಭಾತ್ಯಾಗ ಮಾಡುವ ಬಗ್ಗೆ ಬಹುತೇಕ ನನಗನ್ನಿಸುವುದು ಏನೆಂದರೆ, ನಮ್ಮ ರಾಜಕಾರಣಿಗಳಿಗೆ ಎಲ್ಲಾ ಕಾರ್ಯಕ್ಕಿಂತಲೂ ದೊಡ್ಡ ತ್ಯಾಗ ಎಂದರೆ ಸಭಾತ್ಯಾಗ ಎಂದು ತಿಳಿದುಕೊಂಡಿರುವಂತೆ ಕಾಣುತ್ತದೆ. ಅಂದರೆ ಜೀವನದಲ್ಲಿ ಇನ್ನೊಂದು ತ್ಯಾಗ ಬೇಡ ಇವೊತ್ತು ಜಿಲ್ಲಾ ಪರಿಷತ್‌ಗೆ ಮುಖ್ಯ ಅಂಗವಾಗಿರುವುದು ಗ್ರಾಮಸಭೆ. ಆದ್ದರಿಂದ, ನಿಜವಾಗಿ ಈ ಗ್ರಾಮ ಸಭೆಯನ್ನು ಯಾವರೀತಿ ನಡೆಸಿಕೊಳ್ಳಬೇಕು ಎನ್ನುವುದನ್ನು ವಿಚಾರ ಮಾಡಬೇಕು, ಜನತಾ ಸರ್ಕಾರ ಬಂದ ಮೇಲೆ ನಾವು ನಮ್ಮ ತಲೆಯ ಮೇಲೆ ತೂಗಾಡುವ ಖಡ್ಗವನ್ನು ಇಟ್ಟುಕೊಂಡಿದ್ದೇವೆ ಎಂದರೆ ಗ್ರಾಮಸಭೆ, ಅದು ಏನಾದರೂ ಕಳಚಿ ನಮ್ಮ ತಲೆಯ ಮೇಲೆ ಬಿದ್ದರೆ ತಲೆ ಹೋದೀತು ಎನ್ನುವ ಎಚ್ಚರಿಕೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇವೊತ್ತಿಗೂ ಸಹ ಗ್ರಾಮ ಸಭೆಯಲ್ಲಿ ಏನು ಕೇಳಬೇಕು ಎಂದು ಅನೇಕ ಗ್ರಾಮಸಭೆಗಳಲ್ಲಿ ಇರತಕ್ಕವರಿಗೆ ತಿಳುವಳಿಕೆ ಬಂದಿಲ್ಲ. ಇನ್ನೂ ಸಹ ನಮಗೆ ಮನವಿಗಳನ್ನು ಕೊಡುತ್ತಿದ್ದಾರೆ. ಅದು ಸಂಪ್ರದಾಯ ಬೆಳೆದುಕೊಂಡು ಬಂದಿದೆ. ಇವೊತ್ತು ನಿಜವಾಗಿ ಪ್ರಜಾಪ್ರಭುತ್ವದ ಬೇರುಗಳಿಗೆ ನೀರೆರೆಯುವುದು ಇದ್ದರೆ, ಮಂಡಲ್ ಪಂಚಾಯತ್‌ಗಳಿಗೆ, ಜಿಲ್ಲಾ ಪರಿಷತ್‌ಗಳಿಗೆ, ಮತ್ತು ಗ್ರಾಮ ಸಭೆಗಳು ಅಭಿವೃದ್ಧಿ ಮಾಡುವುದು ಎಂದು ಇಲ್ಲಿ ಹೇಳಬೇಕಾಗುತ್ತದೆ. ಇನ್ನು ಸರ್ಕಾರದ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ ಹೇಳಬೇಕೆಂದರೆ ಇದು ಹೃದಯಪೂರ್ವಕವಾಗಿ ಸ್ವಾಗತಿಸುವಂಥಾದ್ದು ೨೦ ಸಾವಿರಕ್ಕೂ ಕಡಿಮೆ ಜನಸಂಖ್ಯೆ ಹೊಂದಿರುವಂಥ ಎಲ್ಲಾ ಪಟ್ಟಣಗಳಲ್ಲಿ ವಾಸಿಸುವಂಥ ಜನರಿಗೆ ಹಸಿರು ಕಾರ್ಡಿನ ಸೌಲಭ್ಯವನ್ನು ಏನು ಕೊಟ್ಟಿದ್ದಾರೆ ಇದನ್ನು ನಮ್ಮ ಪ್ರತಿಪಕ್ಷದವರು ಸಹ ಸ್ವಾಗತ ಮಾಡಬೇಕಾಗಿತ್ತು. ಆದರೆ ಇದರಿಂದ ನಮ್ಮ ಮೇಲೆ ಆರ್ಥಿಕ ಭಾರ ಎಷ್ಟು ಬೀಳುತ್ತದೆಂಬ ಕಲ್ಪನೆ ಇದ್ದರೂ ಕೂಡ ೨೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ನಾವು ತೆರೆಯುತ್ತಿದ್ದೇವೆ ನಿಜವಾಗಿಯೂ ಇವುಗಳ ಅವಶ್ಯಕತೆ ರಾಜ್ಯದ ಜನತೆಗೆ ಇದೆ, ಹಸಿರು ಕಾರ್ಡ್‌ನ್ನು ಕೊಡುತ್ತಿರುವುದು ಕೇವಲ ಜನಪ್ರಿಯತೆಯ ಕಾರ್ಯಕ್ರಮವಲ್ಲ. ನಾವು ಕೊಡುತ್ತಿರುವ ಹಸಿರು ಕಾರ್ಡ್ ಏನಿದೆ ಇದು ನಿಜವಾಗಿಯೂ ಬಡವರ ಜೀವವನ್ನು ಉಳಿಸುವ ಒಂದು ಯೋಜನೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಹೇಳುವುದಾದರೆ, ಈ ಕುಡಿಯುವ ನೀರಿನ ವ್ಯವಸ್ಥೆ ರಾಜ್ಯದ ಎಲ್ಲಾ ಗ್ರಾಮಗಳಲ್ಲಿಯೂ ಸರಿಯಾಗಿ ನಡೆದರೂ ಕೂಡ ಸ್ವಲ್ಪಮಟ್ಟಿಗೆ ತಾಂತ್ರಿಕ ಸಿಬ್ಬಂದಿಯ ಕೊರತೆ ಇದೆ. ತಾಂತ್ರಿಕ ಸಿಬ್ಬಂದಿಯ ವ್ಯವಸ್ಥೆಯನ್ನು ನಾವು ಈ ಮೊದಲೇ ಮಾಡಿಕೊಳ್ಳಬೇಕಾಗಿತ್ತು. ಇದು ಹೇಗಾಯಿತು ಎಂದರೆ ನಾವು ಯುದ್ಧಕ್ಕೆ ಹೊರಟಾಗ ನನ್ನ ಆಯುಧಗಳು ಎಲ್ಲಿವೆ ? ನನ್ನ ಬಿಲ್ಲು ಎಲ್ಲಿದೆ ? ನನ್ನ ಬಾಣ ಎಲ್ಲಿದೆ ? ಎಂದು ಹುಡುಕಿಕೊಂಡಂತಾಗಿದೆ. ಈಗ ರಿಪೇರಿ ಮಾಡತಕ್ಕ ಸಿಬ್ಬಂದಿಯನ್ನು ನಾವು ತಯಾರು ಮಾಡುತ್ತಿದ್ದೇವೆ. ಈ ತಯಾರಿಯನ್ನು ನಾವು ಮೊದಲೇ ಮಾಡಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನ್ನಿಸುತ್ತದೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರವನ್ನು ಹೇಳುವುದಾದರೆ, ಅದು ಶಿಕ್ಷಣದ ವಿಚಾರ. ಶಿಕ್ಷಣ ಇಲಾಖೆಯ ವಿಚಾರದಲ್ಲಿ ತಾವೇ ತರಾಟೆಗೆ ತೆಗೆದುಕೊಂಡಿರಿ. ತಾವು ಅಂಕಿಸಂಖ್ಯೆಗಳನ್ನು ಒದಗಿಸಿ ಕೊಟ್ಟಿದ್ದೀರಿ. ಆದರೆ ಆ ಅಂಕಿಸಂಖ್ಯೆಗಳನ್ನು ತಾವು ಯಾವ ರೀತಿ ಒದಗಿಸಿಕೊಟ್ಟಿರಿ ಎಂಬುದು ಬೇರೆ. ಹಿಂದಿನ ಕಾಲದಲ್ಲಿ ನನಗೆ ತಿಳಿದಂತೆ ಸ್ವಚ್ಛ ಇಲಾಖೆ ಎಂದರೆ ಶಿಕ್ಷಣ ಇಲಾಖೆಯೆಂದು ಕೇಳಿಬರುತ್ತಿತ್ತು. ಆದರೆ ಈಗ ಆ ಮಾತು ತಪ್ಪಿಹೋಗಿದೆ. ನವೋದಯ ಶಾಲೆಗಳು ನಮ್ಮ ರಾಜ್ಯದಲ್ಲಿ ಧೂಮಕೇತುಗಳು ಇದ್ದಹಾಗೆ. ಈ ಶಾಲೆಗಳಿಗೆ ಕೇಂದ್ರ ಸರ್ಕಾರದವರು ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುತ್ತಿದ್ದಾರೆ. ಆ ಶಾಲೆಗಳಲ್ಲಿ ಹರಿಜನರಿಗೆ ಪ್ರವೇಶವನ್ನು ಕೊಡುತ್ತಿದ್ದಾರೆಯೋ ಎಂದರೆ ೨% ಪರ್ಸೆಂಟ್

ಅಲ್ಲ, ೫ ಪರ್ಸೆಂಟ್ ಕೂಡ ಹರಿಜನರಿಗೆ ಅಲ್ಲಿ ಪ್ರವೇಶ ಇಲ್ಲ. ಬುದ್ಧಿ ಇಲ್ಲದವರಿಗೆ ಬುದ್ಧಿಯನ್ನು ಕೊಡುವಂಥ ಶಾಲೆಗಳು ಅವಲ್ಲ. ಬುದ್ಧಿ ಇಲ್ಲದವರಿಗೆ ಬುದ್ಧಿಯನ್ನು ಕೊಡುವಂಥ ಶಾಲೆಗಳು ನಮ್ಮ ದೇಶದಲ್ಲಿ ಹುಟ್ಟಿಲ್ಲ. ೮೦–೯೦ ಪರ್ಸೆಂಟ್ ಅಂಕಗಳನ್ನು ತೆಗೆದುಕೊಳ್ಳುತ್ತಾ ಇರುವವರಿಗೆ ವಿದ್ಯೆಯನ್ನು ಕೊಡತಕ್ಕ ಶಾಲೆಗಳಿವೆ. ಇದು ಹೇಗಿದೆ ಎಂದರೆ ಬುದ್ಧಿವಂತರು ಬುದ್ಧಿವಂತರೇ ಆಗುತ್ತಿದ್ದಾರೆ, ದಡ್ಡರು ದಡ್ಡರೇ ಆಗುತ್ತಿದ್ದಾರೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ರೈತರ ಸಮಸ್ಯೆಗಳ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತ ಮಾಡಿರುವುದರ ಜೊತೆಗೆ ಅವರು ಕೊಡಬೇಕಾದ ಬಡ್ಡಿಯನ್ನು ಸೂಟಿ ಮಾಡಿದ್ದೇವೆ. ಇದಕ್ಕಿಂತ ಮೊದಲು ನಾವು ಇರುವುದೇ ರೈತರಿಗಾಗಿ. ನಾವು ನೌಕರದಾರರಿಗೆ ಪಗಾರಗಳನ್ನು ಜಾಸ್ತಿ ಮಾಡುತ್ತಿದ್ದೇವೆ. ಇವತ್ತು ಏನಾಗಿದೆ ಎಂದರೆ ಯಾವ ನೌಕರನೇ ಆಗಲಿ ಸತ್ತರೆ ಅವನ ಮಕ್ಕಳ ಪೈಕಿ ಯಾರಿಗಾದರೂ ಒಬ್ಬರಿಗೆ ತಕ್ಷಣ ಸರ್ಕಾರೀ ನೌಕರಿಯನ್ನು ಕೊಡುತ್ತಿದ್ದೇವೆ. ಅದು ಯಾವ ಆಧಾರದ ಮೇಲೆ ,ಅಂದರೆ, ಅನುಕಂಪದ ಆಧಾರದಮೇಲೆ. ಆದರೆ ರೈತರ ಬಗ್ಗೆ ಅನುಕಂಪವೂ ಇಲ್ಲ, ಭೂಕಂಪವೂ ಇಲ್ಲ. ನಮ್ಮ ಕೃಷಿ ಕಾರ್ಮಿಕ ಯಾರಾದರೂ ಸತ್ತರೆ ಅವನಿಗೆ ಯಾವರೀತಿಯ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ ? ಈ ಸರ್ಕಾರವಾಗಲಿ ಅಥವಾ ಬೇರೆ ಸರ್ಕಾರವಾಗಲಿ ಕೃಷಿ ಕಾರ್ಮಿಕರಿಗೆ ಏನು ಅನುಕೂಲಗಳನ್ನು ಒದಗಿಸಿಕೊಟ್ಟಿದೆ ? ಕೃಷಿ ಕಾರ್ಮಿಕರಿಗೆ ನಾವು ಇಂಥಿಂಥ ವ್ಯವಸ್ಥೆಗಳನ್ನು ಮಾಡಿದ್ದೇವೆ ಎಂಬುದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸೇರಿಸಬೇಕಾಗಿತ್ತು. ನೌಕರದಾರನಿಗಾದರೆ ಅವನು ಸತ್ತ ಕೂಡಲೇ ಈ ಹಣ, ಆ ಹಣ ಎಂದು ಎಲ್ಲಾ ಕಡೆಯಿಂದಲೂ ಅವನ ಹೆಣದಮೇಲೆ ಹಣ ಬಂದು ಬೀಳುತ್ತದೆ. ಆದರೆ ಅದೇ ಕೃಷಿ ಕಾರ್ಮಿಕ ಸತ್ತರೆ ಅವನ ಮನೆಯವರು ಗೋಳಾಡುತ್ತಾ ಕೂರಬೇಕಾಗಿದೆ.

ಮಾನ್ಯ ಸಭಾಧ್ಯಕ್ಷರೇ, ನಾನಾದರೂ ತಮ್ಮ ಮೂಲಕ ಕೇಳಿಕೊಳ್ಳುವುದಿಷ್ಟೆ. ಕೃಷಿ ಕಾರ್ಮಿಕರ ಮಕ್ಕಳು ಯಾರು ಬುದ್ಧಿವಂತರಿದ್ದಾರೆ, ಯಾರು ಪದವೀಧರರಿದ್ದಾರೆ, ಅಥವಾ ಅಲ್ಪಸ್ವಲ್ಪ ವಿದ್ಯಾಭ್ಯಾಸ ಮಾಡಿರುತ್ತಾರೆ ಸರ್ಕಾರೀ ನೌಕರಿಯನ್ನು ಕೊಡತಕ್ಕ ವ್ಯವಸ್ಥೆ ಆಗಬೇಕು. ನಾನು ಒಕ್ಕಲುತನದ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಏನಾಗಿದೆ ಎಂದರೆ, ಸರ್ಕಾರೀ ನೌಕರರಿಗಿಂತ ಒಕ್ಕಲುತನ ಲಾಭದಾಯಕ ಅಲ್ಲ ಎಂದು ಹೇಳುತ್ತಿರುವ ಮಾತು ಕೇಳಿ ಬರುತ್ತಿದೆ, ನೀವು ಸಿಪಾಯಿಗಳಿಗೆ ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಸುಮಾರು ೧೨ ಸಾವಿರ ರೂಪಾಯಿಗಳು ವರ್ಷಕ್ಕೆ ಕೊಡುತ್ತಿರುವುದು. ತಾವು ಯಾವ ಒಕ್ಕಲುತನದವರಿಗೆ ಇಷ್ಟು ಹಣವನ್ನು ಕೊಡುತ್ತೀರಿ ? ಇಡೀ ಕುಟುಂಬದವರು ಹೊಲದಲ್ಲಿ ಬೆವರುನೀರು ಇಳಿಸಿದರೂ ೧೨ ಸಾವಿರ ರೂಪಾಯಿಗಳ ಬೆಳೆಯನ್ನು ವರ್ಷದಲ್ಲಿ ತೆಗೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಬರೀ ನೌಕರ ಶಾಹಿಯನ್ನೇ ನಿರ್ಮಾಣ ಮಾಡಿದ್ದಾರೆನ್ನುವ ವಿಚಾರವನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ ಅದು ಬರಬರುತ್ತಾ ಅನಾರೋಗ ಇಲಾಖೆಯಾಗುತ್ತಿದೆ. ಉದಾಹರಣೆಗೆ ನಮ್ಮ ತಾಲ್ಲೂಕನ್ನೇ ತೆಗೆದುಕೊಂಡರೆ, ಮಾನ್ಯ ಅಧ್ಯಕ್ಷರೇ ತಮಗೂ ಕೂಡ ಪರಿಚಯವಿರಬಹುದು ೧೮ ಹಳ್ಳಿಗಳು ಅಲ್ಲಿ ಇವೆ. ಹಳ್ಳಿಗಳಲ್ಲಿ ಡಾಕ್ಟರುಗಳು ಇದ್ದಾರೆ, ಅವರಿಗೆ ಬೇಕಾದ ಉಪಕರಣಗಳನ್ನು ಒದಗಿಸಿಕೊಡಿ ಎಂದು ಕಳೆದ ಐದು ವರ್ಷಗಳಿಂದಲೂ ಕೇಳುತ್ತಲೇ ಇದ್ದೇವೆ. ಬಹುಶಃ ಕೇಳಿ ಕೇಳಿ ನನ್ನ ಎರಡು ಹಲ್ಲುಗಳು ಉದುರಿಹೋದವೇ ಹೊರತು ಆಸ್ಪತ್ರೆಗಳಿಗೆ ಬೇಕಾದ ಉಪಕರಣಗಳನ್ನು ಸರ್ಕಾರದವರು ಒದಗಿಸುವಂಥ ವ್ಯವಸ್ಥೆಯನ್ನು ಇನ್ನೂ ಮಾಡಲೇ ಇಲ್ಲ. ಪತ್ರಗಳಮೇಲೆ ಪತ್ರಗಳನ್ನು ಬರದೆವು. ಬರೆದ ಪತ್ರಗಳು ಕಸದ ಬುಟ್ಟಿಗೆ ಹೋದವು ಎಂದು ಕಾಣುತ್ತದೆ. ಇಂಥ ಒಂದು ಅವ್ಯವಸ್ಥೆ ಇದೆ. ನಾವು ಮಾನ್ಯ ಸಚಿವರಿಗೆ ಪತ್ರವನ್ನು ಬರೆಯುತ್ತೇವೆ, ಅವರು ಏನು ಮಾಡುತ್ತಾರೆಂದರೆ ಸೂಕ್ತ ಕ್ರಮ ತೆಗೆದುಕೊಳ್ಳುವ ಸಲುವಾಗಿ ಮೇಲಿನ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ. ಎಂದು ಉತ್ತರ ಬರೆಯುತ್ತಾರೆ. ಸೂಕ್ತ ಕ್ರಮ ಎಂದರೆ ಸಮಾಧಿ ಕ್ರಮವೆಂದು ಹೇಳಬೇಕಾಗುತ್ತದೆ. ಮೇಲಿನ ಅಧಿಕಾರಿಗಳಿಂದ ಉತ್ತರ ಬಂದಿಲ್ಲವೆಂದು ಕಾಗದ ಬರೆದರೆ ಮತ್ತೊಮ್ಮೆ ಉತ್ತರ ಬರೆಯುತ್ತಾರೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ ಎಂದು. ಇದು ಬಹಳ ವ್ಯಸನಪಡಬೇಕಾದ ವಿಷಯ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು.

ಇನ್ನು ಕೈಗಾರಿಗಳ ಬಗ್ಗೆ ಹೇಳುವುದಾದರೆ, ಬಹಳ ನತದೃಷ್ಟ ಕೈಗಾರಿಕೆಗಳು ನಮ್ಮ ಕೈಗಾರಿಕೆಗಳು ಭಾರತದ ಒಂದು ಚಿತ್ರವನ್ನು ನೋಡಿದಾಗ ಎಷ್ಟೋ ಕೈಗಾರಿಕೆಗಳು ಕೈಕಾಲುಗಳನ್ನು ಕಳೆದುಕೊಂಡು ಕುಳಿತಿವೆ. ೧೯೮೩ರಲ್ಲಿ ೨೩,೧೪೦ ಇದ್ದುದು, ಈಗ ೧೯೮೫ಕ್ಕೆ ಒಂದು ಲಕ್ಷಕ್ಕೆ ಏರಿಸಿದೆ. ಕೈಗಾರಿಕೆಗಳು ಬರುಬರುತ್ತಾ ಅಸ್ವಸ್ಥತೆಯ ರೀತಿಯಲ್ಲಿ ಬೆಳೆಯುತ್ತಿವೆ. ಇದಕ್ಕೆ ಮೂಲ ಅಸ್ವಸ್ಥತೆ ಆಗಲಿಕ್ಕೆ ಯಾವ ರೋಗ ಬಿದ್ದಿದೆ ಎನ್ನುವುದನ್ನು ಕನಿಷ್ಠ ರಾಜ್ಯ ಸರ್ಕಾರವಾದರೂ ಮನವರಿಕೆ ಮಾಡಿಕೊಳ್ಳಬೇಕು. ಅದನ್ನು ಬಗೆಹರಿಸಲು ಆಗುತ್ತದೆಯೋ ಇಲ್ಲವೋ ಎನ್ನುವ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ತಾವು ಮಾಡಬೇಕು. ಮನೆಯಲ್ಲಿ ರೋಗಗ್ರಸ್ಥ ಮಕ್ಕಳಿಗೆ ಯಾವರೀತಿ ಔಷದೋಪಚಾರ ಮಾಡುತ್ತೇವೆಯೋ ಆರೀತಿಯಲ್ಲಿ ರೋಗಗ್ರಸ್ಥ ಕೈಗಾರಿಕೆಗಳನ್ನು ಜೀವಂತಗೊಳಿಸುವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗೇಣಿದಾರರ ಬಗ್ಗೆ ಹೇಳುವುದಾದರೆ, ಭೂರಹಿತರಿಗೆ ಭೂಮಿಯನ್ನು ಸರ್ಕಾರದವರು ಕೊಟ್ಟಿದ್ದಾರೆ, ಇದರಿಂದ ಹರಿಜನರಿಗೆ ಗಿರಿಜನರಿಗೆ ಭೂಮಿ ಸಿಕ್ಕಿದೆ, ಇದರಿಂದ ಅನುಕೂಲವಾಗಿದೆ, ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಭೂಮಾಲೀಕರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಈರೀತಿ ತಡೆಯಾಜ್ಞೆಯನ್ನು ತಂದಿರುವುದರಿಂದ ಮುಂದೆ ಅದರ ಪರಿಸ್ಥಿತಿ ಏನು ? ಇಲ್ಲಿ ನ್ಯಾಯಾಲಯದ ಬಗ್ಗೆ ಹೆಚ್ಚು ಕಡಿಮೆ ಮಾತನಾಡಿದರೆ ನ್ಯಾಯಾಲಯವನ್ನು ನಿಂದನೆ ಮಾಡಿದಂತಾಗುತ್ತದೆ. ತಡೆಯಾಜ್ಞೆಯನ್ನು ಕೊಡಬೇಕಾದರೆ ವಿವೇಚನೆಯಿಂದ ಮತ್ತು ವಿವೇಕ ಪೂರ್ಣವಾಗಿ ತಡೆಯಾಜ್ಞೆಯನ್ನು ಕೊಡಬೇಕಾಗಿತ್ತು.

ಇನ್ನು ಕಾನೂನು ನೆರವು ಮಂಡಲಿಯಲ್ಲಿ ಏನು ಕೆಲಸ ಮಾಡುತ್ತಾರೆ, ಅವರು ಮಾಡುವ ಕೆಲಸ ದೇವರಿಗೇ ಪ್ರೀತಿ. ಅವರು ಏನು ಮಾಡುತ್ತಾರೆಂದರೆ, ಇವರ ಕಡೆಯಿಂದ, ಅವರ ಕಡೆಯಿಂದ ಮತ್ತು ಸರ್ಕಾರದ ಕಡೆಯಿಂದ ರೊಕ್ಕ ಹೊಡೆಯುತ್ತಾರೆ. ಅದು ಕಾನೂನು ನೆರವು ಸಮಿತಿ ಅಲ್ಲ. ಸರ್ಕಾರದ ಉದ್ದೇಶವೇನೋ ಒಳ್ಳೆಯದಿರಬಹುದು. ಆದರೆ ಆ ವಕೀಲರ ಮೇಲೆ ಯಾವ ಹಿಡಿತವನ್ನು ತಾವು ಇಟ್ಟುಕೊಂಡಿದ್ದೀರಿ? ಅವರು ಆಡಿದ್ದೇ ಆಟ, ಮಾಡಿದ್ದೇ ಮಾಟ. ಈ ಒಂದು ರೀತಿಯಲ್ಲಿ ಹೋದರೆ ಹೇಗೆ ? ಈ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಅರಣ್ಯ ಇಲಾಖೆಯಲ್ಲಿ ಏನು ಮಾಡಿದ್ದಾರೆಂದರೆ ಪವಿತ್ರವಾದ ಕಾಡು ದೇವರ ವನ ಎಂದು ಮಾಡಿದ್ದಾರೆ. ಅದು ನಿಜವಾದ ಯೋಜನೆ ದೇವರ ಹೆಸರಿನಲ್ಲಿ ಅರಣ್ಯ ಬೆಳೆಯುತ್ತದೆ ಎಂಬ ಮಾತು ಇದೆ. ಅದನ್ನು ಬೆಳಸಬೇಕು.

ಇನ್ನು ನೀರಾವರಿ ಬಗ್ಗೆ ಹೇಳಿ ಆಮೇಲೆ ಭ್ರಷ್ಟಾಚಾರದ ಬಗ್ಗೆ ಹೇಳುತ್ತೇನೆ. ನೀರಾವರಿ ಬಗ್ಗೆ ನಿಜವಾಗಿಯೂ ಸರ್ಕಾರ ಹೆಚ್ಚಿನ ಲಕ್ಷ್ಯ ಕೊಡುತ್ತಿದೆ. ರೊಕ್ಕ ಕಡಿಮೆ ಇದ್ದರೂ ಚಿಂತೆ ಇಲ್ಲ.

ಶ್ರೀ ಬಿ. ಎಸ್. ಎಡಿಯೂರಪ್ಪ.—ನೀರಾವರಿಗೆ ಆದ್ಯತೆ ಕೊಡುತ್ತೇವೆಂದು ೧೯೮೭–೮೮ರ ಲ್ಲಿ ತೆಗೆದಿಟ್ಟ ಹಣ ೩೦೦ ಕೋಟಿ ರೂಪಾಯಿಗಳು. ಅದರಲ್ಲಿ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಧೈರ್ಯವಾಗಿ ಹೇಳುವ ಸ್ಥಿತಿಯಲ್ಲಿ ಇಲ್ಲದಿರುವಾಗ ನೀರಾವರಿಗೆ ಆದ್ಯತೆ ಕೊಡುತ್ತೇವೆಂಬುದು ಎಷ್ಟರಮಟ್ಟಿಗೆ ಸಮಂಜಸ?

ಉಪಾಧ್ಯಕ್ಷರು.—ಅವರು ಏನು ಹೇಳುತ್ತಾರೆ ಹೇಳಲಿ ಬಿಡಿ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಸರ್ಕಾರ ಸಾಧ್ಯವಾದಷ್ಟು ಲಕ್ಷ್ಯ ಕೊಟ್ಟಿದೆ. ನೀರಾವರಿ ಮಾಡಬೇಕೆಂಬುದು ಸರ್ಕಾರದಲ್ಲಿ ಇದೆ. ಆದರೆ ಆರ್ಥಿಕ ಪರಿಸ್ಥಿತಿ ಒಂದು ರೀತಿಯಿಂದ ಕೈಕಟ್ಟಿದೆ. ನೀರಾವರಿ ಬಗ್ಗೆಯೂ ನನ್ನಲ್ಲಿ ಅಂಕಿ ಸಂಖ್ಯೆಗಳು ಇವೆ. ೧೯೭೦ರಲ್ಲಿ ೪೮೦೦ ಕೆರೆಗಳಿದ್ದು ಬರಬರುತ್ತಾ ಅವು ಕಡಿಮೆಯಾಗುತ್ತಾ ಬಂದಿವೆ. ಆ ಕೆರೆಗಳನ್ನೆಲ್ಲಾ ಸಾಗುವಳಿ ಮಾಡಿ ಇನ್ನಷ್ಟು ಹೂಳು ಬೀಳುವಂತೆ ಮಾಡಿ ರೈತರು ಅತಿಯಾಸೆ ಬಿದ್ದು ಕೆರೆಗಳನ್ನು ಹಾಳು ಮಾಡಿದರು. ಈಗ ಕೆರೆಗಳ ಹೂಳನ್ನು ತೆಗೆಯುವ ಕಾರ್ಯವನ್ನು ಕೂಡ ಮಾಡಲಾಗುತ್ತದೆ. ಅದಕ್ಕೆ ಪ್ರಾಮುಖ್ಯತೆ ಕೊಡಬೇಕು. ರಾಜ್ಯದಲ್ಲಿ ೧೯೮೩–೮೪ರಲ್ಲಿ ೩೪೩೭೪ ಕೆರೆಗಳು ಅಸ್ತಿತ್ವದಲ್ಲಿದ್ದವು. ಈಗ ಹೆಚ್ಚಾಗುತ್ತಾ ಬಂದಿವೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

೧೯೮೫ರಲ್ಲಿ ಅವುಗಳ ಸಂಖ್ಯೆ ೩೮ ೬೦೦ಕ್ಕೆ ಏರಿದೆ. ಈಗ ರಾಜ್ಯದಲ್ಲಿ ಒಟ್ಟು ಎಲ್ಲಾ ಕೆರೆಗಳಿಂದ ೬ ಲಕ್ಷದ ೧೯ ಸಾವಿರ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸುತ್ತಿದ್ದೇವೆಂಬ ಮಾತನ್ನು ಹೇಳಿದ್ದಾರೆ. ನೀರಾವರಿ ಹೆಚ್ಚಾಗಿ ಆಗಬೇಕಾದರೆ ಬಜೆಟ್ಟಿನಲ್ಲಿ ಏನು ಹಣವನ್ನು ಮೀಸಲಾಗಿಟ್ಟಿದ್ದಾರೆ ಆ ಹಣವನ್ನು ತೀವ್ರವಾಗಿ

ಬಿಡುಗಡೆ ಮಾಡಿ ಅಲ್ಲಲ್ಲಿ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವ ಕೆಲಸ ಆಗಬೇಕು. ನೀವು ಆರ್.ಎಲ್.ಇ.ಜಿ.ಪಿ. ತೆಗೆದುಕೊಳ್ಳಿ ಮತ್ತೊಂದು ತೆಗೆದುಕೊಳ್ಳಿ. ಒಟ್ಟಿನಲ್ಲಿ ನಮಗೆ ನೀರಾವರಿಗೆ ಹೆಚ್ಚು ಪ್ರದೇಶಕ್ಕೆ ಆಗಬೇಕು. ಹೀಗೆ ಮಾಡುವುದರಿಂದ ಜಲಾಭಿವೃದ್ಧಿಯಾಗಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಕೊನೆಯದಾಗಿ, ಭ್ರಷ್ಟಾಚಾರದ ಬಗ್ಗೆ ಎಲ್ಲರೂ ಹೇಳುತ್ತಾರೆ ಅದರ ಬಗ್ಗೆ ನಾನು ಕೂಡ ಬಹಳ ತಲೆ ಕೆಡಿಸಿಕೊಂಡಿದ್ದೇನೆ. ಎಲ್ಲಿದೆ ಈ ಭ್ರಷ್ಟಾಚಾರ? ಬಹುತೇಕ ದೇವರು ಇಂಥ ಕಡೆ ಇದ್ದಾನೆ ಎಂದು ಹೇಳುವುದು ಬಹಳ ಕಷ್ಟವಾಗುತ್ತದೆ. ದೇವರನ್ನು ಸರ್ವಾಂತರ್ಯಾಮಿ ಎಂದು ಹೇಳುವುದಕ್ಕೂ ನಾವು ಸಂಶಯಪಡುತ್ತೇವೆ. ಆದರೆ ಭ್ರಷ್ಟಾಚಾರ ಸರ್ವಾಂತರ್ಯಾಮಿ ಆಗಿದೆ. ಸರ್ವಾಂತರ್ಯಾಮಿ ಎಂದರೆ ದೇವರು ಇದ್ದ ಹಾಗೆ. ಆ ಮಟ್ಟಕ್ಕೆ ಬಂದು ನಿಂತಿದೆ. 'ತರಂಗ'ದಲ್ಲಿ ಶ್ರೀಧರ ಎಂಬುವವರು ಒಂದು ವ್ಯಂಗ ಚಿತ್ರವನ್ನು ಬರೆದಿದ್ದಾರೆ. ಅದು ಬಹಳ ಚೆನ್ನಾಗಿದೆ. ಅದನ್ನು ಸ್ವಲ್ಪ ಪರಿವರ್ತಿಸಿ ಹೇಳುತ್ತೇನೆ. ಅದರಲ್ಲಿ ಒಬ್ಬ ಡಾಕ್ಟರ್ ಹೇಳುತ್ತಾನೆ ಭ್ರಷ್ಟಾಚಾರ ಈ ದೇಶಕ್ಕೆ ಬಂದ ಅಲ್ಸರ್ ಎಂದು. ಇನ್ನೊಬ್ಬ ಡಾಕ್ಟರ್, ಅದು ಅಲ್ಸರ್ ಅಲ್ಲ ಟಿ.ಬಿ. ಎಂದು ಹೇಳುತ್ತಾನೆ. ಟಿ.ಬಿ. ಏಕಾದೀತು ಅದು ಕ್ಯಾನ್ಸರ್ ಎಂದು ಇನ್ನೊಬ್ಬ ಹೇಳುತ್ತಾನೆ. ಬೇರೊಬ್ಬ ಪಂಡಿತ್ ಡಾಕ್ಟರ್ ಹತ್ತಿರ ಹೋಗಿ ಈ ದೇಶದಲ್ಲಿರುವ ಭ್ರಷ್ಟಾಚಾರ ಯಾವ ಸ್ವರೂಪದಲ್ಲಿದೆ, ಅಲ್ಸರ್ ಸ್ವರೂಪದಲ್ಲೋ, ಕ್ಯಾನ್ಸರ್ ಸ್ವರೂಪದಲ್ಲೊ ಅಥವಾ ಟಿ.ಬಿ. ಸ್ವರೂಪದಲ್ಲೋ ಎಂದು ಕೇಳಿದಾಗ ಬುದ್ಧಿವಂತ ಡಾಕ್ಟರ್ ಹೇಳುತ್ತಾನೆ ಇದು ಯಾವಾಗ ಗೊತ್ತಾಗುತ್ತದಪ್ಪ ! ಅಂದರೆ ಪೋಸ್ಟ್‌ಮಾರ್ಟಂ ಮಾಡಿದಾಗ ಗೊತ್ತಾಗುತ್ತದೆ ಎಂದು, ಅಂದರೆ ಮರಣೋತ್ತರ ಪರೀಕ್ಷೆ ಮಾಡಿದ ಮೇಲೆ ಅದನ್ನು ತಿಳಿದುಕೊಳ್ಳಬಹುದು ಎಂದು ಹೇಳುತ್ತಾನೆ. ಹಾಗೆ ಇಲ್ಲಿ ಮರಣೋತ್ತರ ಪರೀಕ್ಷೆ ಮಾಡಿದಾಗ ಭ್ರಷ್ಟಾಚಾರ ಯಾವ ಸ್ವರೂಪದಲ್ಲಿದೆ ಎಂಬುದು ತಿಳಿಯುತ್ತದೆ. ಭ್ರಷ್ಟಾಚಾರ ಎಲ್ಲೆಲ್ಲಿ ಯಾವಯಾವ ಸ್ವರೂಪದಲ್ಲಿದೆ ಎಂಬುದನ್ನು ಪ್ರತಿಯೊಬ್ಬರೂ ವಿಚಾರ ಮಾಡಬೇಕು. ಭ್ರಷ್ಟಾಚಾರವನ್ನು ಹೋಗಲಾಡಿಸುವುದಕ್ಕೆ ಅನೇಕ ಪ್ರಯತ್ನಗಳು ನಡೆದರೂ ಅದು ಇನ್ನೂ ಉಳಿದುಕೊಂಡು ಬಂದಿದೆ. ಅಧಿಕಾರಿಗಳ ಬಗ್ಗೆ ಕೊನೆಯ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬಹಳ ಕೆಟ್ಟ ಅನುಭವ ನನಗೆ ಈ ವಿಚಾರದಲ್ಲಿ ಆಗಿದೆ. ಪ್ರಜಾಪ್ರಭುತ್ವ ಮತ್ತು ಅಧಿಕಾರಿಶಾಹಿ ಪ್ರಭುತ್ವ ಇವು ಯಾವಾಗಲೂ ಹೊಂದಾಣಿಕೆ ಆಗುವುದಿಲ್ಲ. ಪ್ರಜಾಪ್ರಭುತ್ವ ಪ್ರತಿನಿಧಿಗಳು, ನಾವು ಐದು ವರ್ಷಗಳು ಇರುತ್ತೇವೆ. ಆದರೆ ಅಧಿಕಾರಿಗಳು ಖಾಯಂ ಆಗಿ ಗೂಟ ಹೊಡೆದುಕೊಂಡು ಇರುತ್ತಾರೆ. ಅವರನ್ನು ಯಾರೂ ಅಲುಗಾಡಿಸುವುದಕಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಸ್ಥಿರತೆ ಉಂಟಾಗಬಹುದು. ಅಧಿಕಾರಿಶಾಹಿಯಲ್ಲಿ ಮೇಲಾಧಿಕಾರಿಗಳು ಸವಿನಯದಿಂದ ಮಾತನಾಡುತ್ತಾರೆ. ಕೆಳಗಿನ ಅಧಿಕಾರಿಗಳು ಆ ರೀತಿ ಮಾತನಾಡುವುದಿಲ್ಲ, ಕೆಳಗೆ ಪ್ರಥಮ ದರ್ಜೆ, ದ್ವಿತೀಯ ದರ್ಜೆಗುಮಾಸ್ತರು, ಆ ಸೆಕ್ಷನ್ ಈ ಸೆಕ್ಷನ್ ಎಲ್ಲಾ ಕಿತ್ತು ಒಗೆಯಿರಿ ಮೇಲಧಿಕಾರಿಗಳು ಪ್ರಥಮ ದರ್ಜೆ ಗುಮಾಸ್ತ ಏನು ಬರೆಯುತ್ತಾನೋ ಅದಕ್ಕೇ ಕಣ್ಣುಮುಚ್ಚಿ ಸಹಿ ಮಾಡುತ್ತಾರೆ. ಬರೀ ಸಹಿ ಮಾಡುವುದು ಅಧಿಕಾರಿ ಕೆಲಸ, ನೋಡುವುದಲ್ಲ. ಅವನು ಬುದ್ಧಿ ಓಡಿಸುವುದು ಬೇಡವೆ? ಎಲ್ಲಾ ಮಾಡಿ ತಟ್ಟೆಗೆ ಹಾಕಿದಮೇಲೆ ಅವರೇನು ಮಾಡುತ್ತಾನೆ? ಅಧಿಕಾರಿಗಳಿಗೂ ಉಪ್ಪು, ಹುಳಿ, ಖಾರ ಹಾಕಿ ಒಗ್ಗರಣೆ ಕೊಡುವ ಕೆಲಸವನ್ನು ಹಚ್ಚಿ ಎಫ್. ಡಿ ಸಿ. ಮಾಡಿದ್ದನ್ನೇ ಸರಿ ಎಂದು ಹೇಳುವವರೂ ಇದ್ದಾರೆ. ಅಂಥವರನ್ನೆಲ್ಲಾ ತೆಗೆದು ಒಗೆಯಿರಿ. ಅಧಿಕಾರಿಶಾಹಿ ಹೇಗೆ ನಡೆದುಕೊಳ್ಳುತ್ತಿದೆ ಎಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ನಾನು ಒಂದು ಸಾರಿ ಧಾರವಾಡ ಆಕಾಶವಾಣಿಗೆ ಹೋಗಿದ್ದೆ. ನಾನು ಹೋಗಿದ್ದೆ ಎಂಬುದಕ್ಕಿಂತ ಒಬ್ಬರು ಕಳುಹಿಸಿದ್ದರು ಎಂದು ಹೇಳಬಹುದು. ತಮಗೂ ಗೊತ್ತಿರಬೇಕು, ರೋಣದವರು ಒಬ್ಬರು ನಮ್ಮ ತಂದೆಯವರಾದ ಅಂದಾನಪ್ಪ ದೊಡ್ಡ ಮೇಟಿಯವರ ಬಗ್ಗೆ ಒಂದು ಚರಿತ್ರೆ ಬರೆದಿದ್ದರು. ಈ ಬಗ್ಗೆ ಅವರು ಆಕಾಶವಾಣಿಗೆ ಬರೆದೂ ಬರೆದೂ ಅವರ ಪೆನ್ನಿನ ಮಸಿ ಹೊರಟು ಹೋಗಿತ್ತು ಮತ್ತು ಮೈನ ಶಕ್ತಿ ಉಡುಗಿಹೋಗಿತು ಆಕಾಶವಾಣಿಯವರು ಉತ್ತರ ಕೊಟ್ಟಿರಲಿಲ್ಲ. ಇವನೂ ದೊಡ್ಡ ಮೇಟಿ, ಇವನ ಹತ್ತಿರ ಹೇಳಿದರೆ ಏನಾದರೂ ಮಾಡುತ್ತಾನೆ ಅಂದುಕೊಂಡು ನನ್ನ ಹತ್ತಿರ ಬಂದು ಹೇಳಿದ ಅವನು. ನಾನು ಬರೆಯುವುದಕ್ಕೆ ತಯಾರಿಲ್ಲ, ಅವರೇನು ಕೊಡುತ್ತಾರೋ ಕೊಡಲಿ ಎಂದು ಹೇಳಿದ ಕೊನೆಗೂ ಅವನು ಗಂಟು ಬಿದ್ದು ಅವನು ಬರೆದ ಚರಿತ್ರೆಯನ್ನು ನೀವಾದರೂ ಹೋಗಿ ಕೊಟ್ಟು ಬನ್ನಿರಿ ಎಂದು ಹೇಳಿದ. ನಾನು ಒಲ್ಲೆ ಎಂದು ಹೇಳಿದ. ಅವರು ಸತ್ತುಹೋದವರು ಸತ್ತುಹೋದರು, ಅವರ ನೆನಪು ಜನರಿಗೆ ಇರುತ್ತದೆ, ಆಕಾಶವಾಣಿ ಬಾಯಿಂದ ಬಂದರೆ ಮಾತ್ರ ಅದು ಅಮೃತ ವಾಕ್ಯ ಅಲ್ಲ, ಏತಕ್ಕೆ ಬಡ್ಕೊಳ್ಳಿ ಯಾ ಎಂದು ಹೇಳಿದರೂ ಕೇಳಲಿಲ್ಲ. ನಾನು ಆಕಾಶವಾಣಿಗೆ

ಹೋದೆ. ಅಲ್ಲಿನ ಸಿಸ್ಟಂ ನೋಡಿದರೆ ಎಂಥವರಿಗೂ ಕನಿಕರ ಪ್ರೀತಿ ಬರಬೇಕು. ನಾನು ಒಳಗೆ ಹೋಗುವಾಗ ಸಹಿ ಮಾಡಿ ಹೋಗಿದ್ದೆ.

ಅಲ್ಲಿದ್ದಂತಹ ಕಾರ್ಯನಿರ್ವಾಹಕರ ಹೆಸರು ಏನು ಎಂಬುದು ನೆನಪು ಇಲ್ಲ. ನೆನಪು ಇಡುವಂತಹ ಹೆಸರೂ ಅಲ್ಲ. ನಾನು ಹೋಗಿ ಅವರನ್ನು ಭೇಟಿಯಾಗಿದ್ದೆ. ಅದರಲ್ಲಿ ನನ್ನ ಪತ್ರ ಕೂಡ ಇತ್ತು. ಆ ಪತ್ರದಲ್ಲಿ ದೊಡ್ಡ ಮೇಟಿ ಎನ್ನುವಂತಹ ಮನುಷ್ಯ ಸತ್ತು ಹೋದ. ಆತ ಈ ದೇಶಕ್ಕೆ ಅಥವಾ ಈ ನಾಡಿಗೆ ಏನಾದರೂ ಸೇವೆ ಮಾಡಿದ್ದಾನೆಂದು ಇದನ್ನು ನೋಡಿದ ಮೇಲೆ ನಿಮಗೆ ಅನ್ನಿಸಿದರೆ ಇದನ್ನು ಬಿತ್ತರಿಸಿ ಎನ್ನುವ ಮಾತು ಆ ಪತ್ರದೊಳಗೆ ಇತ್ತು. ಅದನ್ನು ನಾನು ತೆಗೆದುಕೊಂಡು ಹೋಗಿ ಆತನಿಗೆ ಕೊಟ್ಟೆ. ಆದಕ್ಕೆ ಆತ ಹೇಳಿದ ಇದು ನನಗೆ ಸಂಬಂಧಪಡುವುದಿಲ್ಲ ನೀವೇ ಈ ಪತ್ರವನ್ನು ತೆಗೆದು ಕೊಂಡು ಹೋಗಿ ಇನ್ನೊಬ್ಬರಿಗೆ ಕೊಡಿ ಎಂಬುದಾಗಿ ಗರ್ವದಿಂದ ಹೇಳಿದ. ಅವರ ಕೈಗೆ ಒಬ್ಬ ಸಿಪಾಯಿ ಅವನ ಕಾಲಿಗೊಬ್ಬ ಸಿಪಾಯಿ ಇರುತ್ತಾರೆ. ಇದ್ದರೂ ಸಹ ನನಗೆ ನೀವೇ ಹೋಗಿ ಕೊಡಿ ಎಂದು ಹೇಳಿದ. ಅವರಿಗೆ ಇರುವಂತಹ ಸಿಪಾಯಿಗಳನ್ನು ಅವರ ಮನೆಯೊಳಗೆ ಕಸ ಹೊಡೆಯುವುದಕ್ಕೆ ಇಟ್ಟು ಕೊಂಡಿರುತ್ತಾರೆ. ಅವರ ಹೆಂಡತಿ ಸೀರೆಯನ್ನು ಒಗೆಯುವುದಕ್ಕೆ ಇಟ್ಟುಕೊಂಡಿರುತ್ತಾರೆ. ಒಬ್ಬ ಪ್ರಜಾಪ್ರತಿನಿಧಿಯಾಗಿ ಅವರ ಕಚೇರಿಗೆ ಹೋದಾಗ ಏನು ಗತಿಯಾಯಿತು ಎಂಬುದನ್ನು ಹೇಳುತ್ತಿದ್ದೇನೆ ಅವರಿಗೆ ಎಷ್ಟು ಗರ್ವ ಬಂದಿದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಅವರ ಗರ್ವವನ್ನು ಇಳಿಸಬೇಕು. ಅವರಿಗೆ ಕೊಟ್ಟಿರುವಂತಹ ಸಿಪಾಯಿಗಳನ್ನು ಅವರು ಎಲ್ಲಿಗೆ ಕಳುಹಿಸುತ್ತಾರೆ ? ಕೇಂದ್ರ ಸರ್ಕಾರದ ಕಚೇರಿಯಲ್ಲಿ ಅದಂತಹ ಒಂದು ನಿದರ್ಶನವನ್ನು ತಪ್ಪಲ್ಲಿ ಹೇಳಿದ್ದೇನೆ. ಇದೇ ರೀತಿಯ ಪರಿಸ್ಥಿತಿ ರಾಜ್ಯ ಸರ್ಕಾರದ ಕಚೇರಿಗಳಲ್ಲೂ ಕೂಡ ಕಾಣಬಹುದು. ಅದರ ಬಗ್ಗೆ ನನಗೆ ಅನುಭವ ಇಲ್ಲ. ಇಂಥ ಪ್ರಸಂಗಳು ಬರುತ್ತವೆಂದು. ಇದಕ್ಕಾಗಿಯೇ ನಾನು ಹೆಚ್ಚು ಕಚೇರಿಗಳಿಗೆ ಹೋಗುವುದಿಲ್ಲ ನಮಗೆ ಏನಾದರೂ ಕೆಲಸಗಳಾಗಬೇಕಾದರೆ ಮಾನ್ಯ ಸಚಿವರ ಕಡೆಗೆ ಹೋಗುತ್ತೇವೆ. ಅವರು ಎಷ್ಟು ಕೆಲಸ ಮಾಡುತ್ತಾರೋ ಅಷ್ಟೇ ಸರಿ. ಕಚೇರಿಗಳಿಗೆ ಅಲೆದಾಡುವ ಅಭ್ಯಾಸವನ್ನು ಇಟ್ಟು ಕೊಂಡವನಲ್ಲ. ಸ್ವಾಭಿಮಾನವನ್ನು ಇಟ್ಟುಕೊಂಡಿರತಕ್ಕ ಒಬ್ಬ ಶಾಸಕ ನಾನು ಇಷ್ಟೆಲ್ಲಾ ಆದರೂ ವಿರೋಧಪಕ್ಷದವರು ಇದ್ದಿದ್ದರೆ ಇನ್ನೂ ಹೆಚ್ಚಿನ ಸೊಬಗು, ಮೆರುಗು ಈ ಸಭೆಗೆ ಬರುತ್ತಿತ್ತು. ಅವರು ಇಲ್ಲದೆ ಈ ಸಭೆ ಬಹಳ ನೀರಸವೆಂದು ನನಗನ್ನಿಸುತ್ತದೆ. ಅವರ ರಸ ಮುಖಗಳು ಸೋಮವಾರವಾದರೂ ಕಾಣಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧೨-೦೦ ಮಧ್ಯಾಹ್ನ

†ಶ್ರೀ ಬಿ.ಎಸ್. ಯಡ್ಯೂರಪ್ಪ (ಶಿಕಾರಿ ಪುರ).—ಸನ್ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವರ್ಷ ದಿಂದ ಈ ರಾಜ್ಯದ ಸರ್ಕಾರ ಏನು ಕೆಲಸ ಕಾರ್ಯಗಳನ್ನು ಮಾಡಿದರೆ ಅದರ ಬಗ್ಗೆ ಒಂದು ವರದಿ ರೂಪ ದಲ್ಲಿ ಸನ್ಮಾನ್ಯ ರಾಜ್ಯಪಾಲರು ಕೆಲವು ಮಾತುಗಳನ್ನು ಆಡಿದ್ದಾರೆ. ಬಹುಶಃ ಇದರಲ್ಲಿ ಚರ್ಚೆಮಾಡು ವಂತಹದ್ದು, ವಿಮರ್ಶೆ ಮಾಡುವಂತಹದ್ದು ಯಾವುದೂ ಇಲ್ಲ. ಏಕೆಂದರೆ ಕಳೆದ ೮-೧೦ ತಿಂಗಳುಗ ಳಿಂದ ರಾಜ್ಯದ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವುದರಿಂದ ಇಲ್ಲಿ ಹೆಚ್ಚು ವಿಷಯಗಳನ್ನು ಹೇಳಿಸುವತಂಹ ಪ್ರಯತ್ನವನ್ನು ಈ ಸರ್ಕಾರ ಮಾಡಿಲ್ಲ ಅದಕ್ಕಾಗಿ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಆದರೆ ಈ ರೀತಿಯಾಗಿ ಕಳೆದ ೮-೧೦ ತಿಂಗಳುಗಳಿಂದ ಇಡೀ ರಾಜ್ಯದ ಜನತೆ ಕಣ್ಣೀರಿನಲ್ಲಿ ಕೈ ತೊಳೆಯು ತಕ್ಕಂಥ ಸಂದರ್ಭದಲ್ಲಿ ಸರ್ಕಾರ ಮಾಡಿದ ತಪ್ಪುನೆಪ್ಪುಗಳ ಬಗ್ಗೆ ಬೆಳಕನ್ನು ಚೆಲ್ಲಬೇಕಾದ ಸಂದರ್ಭ. ಅಂಥದ್ದರಲ್ಲಿ ಪ್ರಬಲವಾದ ವಿರೋಧಪಕ್ಷ ಅಂದರೆ ಆ ಪಕ್ಷದ ಸದಸ್ಯರು ಸದನದಲ್ಲಿ ಇಲ್ಲದೇ ಇದ್ದು ಚರ್ಚೆ ಪ್ರಾರಂಭವಾಗಿರುವಂಥದ್ದು ಸಹ ದುರದೃಷ್ಟಕರ. ಬಹುಶಃ ಆಡಳಿತ ಪಕ್ಷದವರೂ ಸಹ ಸರ್ಕಾರ ಮಾಡಿರತಕ್ಕ ತಪ್ಪುಗಳಿಂದ ತಪ್ಪಿಸಿಕೊಳ್ಳುವ ದೃಷ್ಟಿಯಿಂದ, ಹೇಗೂ ೫ ವರ್ಷವಾಗಿದೆ ಎಂಬುದಾಗಿ ತಿಳಿದುಕೊಂಡಿದ್ದಾರೆ. ಹೀಗಾಗಿ ಅವರ ಅವರ ಜೊತೆ ಚರ್ಚೆ ಮಾಡಿ, ಅವರು ಮಾಡಿರು ವಂತಹ ತಪ್ಪುನೆಪ್ಪುಗಳನ್ನು ಕ್ಷಮಿಸಿ ಒಂದು ಕಡೆ ಸೇರುವಂತಹ ಸಮಯ ಪ್ರಜ್ಞೆಯನ್ನು ಆಡಳಿತ ಪಕ್ಷ ದವರು ತೋರಿಸಲಿಲ್ಲ ಎನ್ನುವುದು ನನ್ನ ಮನಸ್ಸಿಗೆ ತುಂಬಾ ನೋವಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ.—ನಿನ್ನೆ ಸಂಜೆ ಅದರ ಬಗ್ಗೆ ಚರ್ಚೆಯಾಗಿದ್ದು, ಒಂದು ಅಂಡರ್ ಸ್ಟ್ಯಾಂಡಿಂಗ್‌ಗೆ ಬಂದಿದ್ದರು. ಅವರು ಬಂದು ಅಪಾಲಜಿ ಕೇಳಬೇಕೆಂದು ಆಗಿತ್ತು. ಆದರೆ ಆ ರೀತಿ ಅಪಾಲಜಿ ಕೇಳವುದು ಸರಿಯಲ್ಲವೆಂಬುದರ ಬಗ್ಗೆ ಅವರ ಪಕ್ಷದೊಳಗೆ ಇನ್ನೂ ಚರ್ಚೆ ನಡೆಯುತ್ತಿದೆ.

ನಾವು ಅವರಿಗೆ ಔದಾರ್ಯವನ್ನು ತೋರಿಸಿದ್ದೇವೆ. ಆದರೂ ತಾವು ಈ ತರಹ ಮಾತನಾಡುವುದು ಅಷ್ಟೇನೂ ಸಮಂಜಸವಾದುದಲ್ಲವೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ರಾಜ್ಯದ ಜನತೆಯ ದುರಾದೃಷ್ಟ. ಇದು ಯಾರೋ ಹೇಳುತ್ತಾರೆ ಎಂತಲೋ, ಅಥವಾ ಒಬ್ಬ ವ್ಯಕ್ತಿಯ ಅಥವಾ ಒಂದು ಪಕ್ಷದ ಪ್ರಶ್ನೆಯಲ್ಲ ರಾಜ್ಯದ ಜನತೆಯ ಪ್ರತಿನಿಧಿಗಳಾಗಿ ಇಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅವರನ್ನು ಈ ಸದನದಿಂದ ಹೊರಗೆ ಇಡುವಂತಹದ್ದು ಸರಿಯಲ್ಲ. ಅಥವಾ ಈ ರೀತಿಯ ಪ್ರತಿಷ್ಟೆಯಲ್ಲಿ ಯಾರಿಗೂ ಸರಿಯಲ್ಲ. ಒಂದು ಸಂತೋಷ ಸಂಗತಿ ಕಳೆದ ೮–೧೦ ತಿಂಗಳುಗಳಿಂದ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳಾಗ ಲಾಗದಿದ್ದರೂ ಸಹ ಜನತಾ ಸರ್ಕಾರ ೫ ವರ್ಷ ಆಡಳಿತವನ್ನು ನಡೆಸಿದ್ದಕ್ಕಾಗಿ ವಿಜಯೋತ್ಸವನ್ನು ಆಚರಣೆ ಮಾಡಿದರು. ಬಹುಶಃ ನಾನು ಅಂದುಕೊಂಡಿದ್ದೇನೆ. ಇಂತಹ ವಿಚಿತ್ರ ಪರಿಸ್ಥಿತಿಯಲ್ಲೂ ಸಹ ೫ ವರ್ಷಗಳ ಕಾಲ ಜನತಾ ಸರ್ಕಾರ ಉಳಿದಿದ್ದೇ ಅವರಿಗೆ ಸಂತೋಷವಾಗಿರಬಹುದು. ಅದಕ್ಕಾಗಿಯೇ ಇಂತಹ ಒಂದು ದೊಡ್ಡ ಮೇಳವನ್ನು ಮಾಡಿದರು. ಪ್ರಜಾಪ್ರಭುತ್ವದಲ್ಲಿ ಹಾಗೂ ಆ ಒಂದು ವ್ಯವಸ್ಥೆಯಲ್ಲಿ ಇದು ತಪ್ಪೆಂದು ನಾನು ಹೇಳುವುದಿಲ್ಲ. ಆದರೆ ನೀವು ೫ ವರ್ಷಗಳ ಮೇಳ ಮಾಡುವಂತಹ ಸಂದರ್ಭದಲ್ಲಿ ಲಕ್ಷಾಂತರ ಜನರು ಇಲ್ಲಿಗೆ ಬಂದಿದ್ದರು. ಯಾವ ಜನ ೫ ವರ್ಷಗಳ ಹಿಂದೆ ನಿಮ್ಮನ್ನು ಅಧಿಕಾರಕ್ಕೆ ತಂದರೊ ? ಆ ಸಂದರ್ಭದಲ್ಲಿ ಏನು ಆಸೆ ಆಕಾಂಕ್ಷೆಗಳನ್ನು ಇಟ್ಟು ಕೊಂಡು ನಿಮ್ಮನ್ನು ಅಧಿಕಾರಕ್ಕೆ ತಂದರೋ ಅದರ ಆಸೆ ಆಕಾಂಕ್ಷೆಗಳನ್ನು ಪೂರೈಸಿದ್ದೇವೆ ಎನ್ನುವ ಸಮಾಧಾನ ನಿಮಗಿದೆಯೇ ? ಇಲ್ಲ ಈ ರೀತಿ ಇರುವಂತಹ ಸಂದರ್ಭದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಕಾರ್ಯಗಳು ಆಗಿಲ್ಲ, ಎಲ್ಲವೂ ತಟಸ್ಥವಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದಾಗ ರಾಜ್ಯ ಸರ್ಕಾರದ ಪ್ರಮುಖ ಮಂತ್ರಿಗಳಿಂದ ಬರುವ ಒಂದು ಉತ್ತರವೂ ಕೇಂದ್ರ ಸರ್ಕಾರ ನಮಗೆ ಯಾವುದೇ ರೀತಿಯ ಸವಲತ್ತುಗಳನ್ನು ಕೊಡುತ್ತಿಲ್ಲ. ಕಳೆದ ೫ ವರ್ಷಗಳಿಂದಲೂ ಭೀಕರ ಬರಗಾಲ ಇತ್ತು, ಹೀಗಾಗಿ ನಾವು ಯಾವ ಕೆಲಸಗಳನ್ನು ಮಾಡಲು ಆಗಲಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಇದರಿಂದ ನೀವು ನಿಮ್ಮ ಜವಾಬ್ದಾರಿಯಿಂದ ಹಿಂದೆ ಸರಿಯುವುದಕ್ಕೆ ಸಾಧ್ಯ ಇಲ್ಲ. ಇಲ್ಲಿರುವ ಸಂಪನ್ಮೂಲಗಳನ್ನೇ ಉಪಯೋಗ ಮಾಡಿಕೊಂಡು ಕೇಂದ್ರ ಸರ್ಕಾರ ಕೊಡುವ ಸಹಾಯಧನವನ್ನು ಉಪಯೋಗ ಮಾಡಿ ಕೊಂಡು ಯಾವುದಕ್ಕೆ ಎಷ್ಟನ್ನು ಖರ್ಚು ಮಾಡಬೇಕು ? ಯಾವುದರ ಅಗತ್ಯ ಇದೆ ? ಯಾವುದರ ಅಗತ್ಯ ಇಲ್ಲ, ಎಂಬುದರ ವಿವೇಚನೆಯೂ ಸಹ ನಿಮಗಿಲ್ಲ. ಇದು ದುರಾದೃಷ್ಟ. ಅನೇಕ ಸಾರಿ ಪ್ರಚಾರದ ಭಾಷಣಗಳನ್ನು ಮಾಡಿದ್ದೀರಿ. ಅನೇಕ ಸಾರಿ ಪ್ರಚಾರದ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿದ್ದೀರಿ. ಈಗತಾನೇ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಸಮಾಜ ಕಲ್ಯಾಣ ಮಂತ್ರಿ ಗಳು "ತಾಳಿ ಭಾಗ್ಯ ಯೋಜನೆ" ಅಡಿಯಲ್ಲಿ ಖರ್ಚು ಮಾಡಿರುವಂತಹ ಹಣ ಎಷ್ಟು ಎಂಬುದಕ್ಕೆ ಉತ್ತರವಾಗಿ ಈ ಯೋಜನೆ ಪ್ರಾರಂಭವಾದಗಿನಿಂದ ಖರ್ಚಾಗಿರುವಂಥದ್ದು ೭೯ ಲಕ್ಷ ರೂಪಾಯಿಗಳೆಂದು ಹೇಳಿದರು ಅಂದರೆ ನಿಮಗೆ ಆ ತಾಳಿಯನ್ನೂ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅದನ್ನು ಬಿಟ್ಟು ೨೫೦ ರೂಪಾಯಿಗಳ ಸೇವಿಂಗ್ಸ್ ಸರ್ಟಿಫಿಕೇಟ್‌ನ್ನು ಕೊಡುವ ಸ್ಥಿತಿಗೆ ಬಂದು ಮುಟ್ಟಿದ್ದೀರಿ. ನೀವೇ ಹಾಕಿದ ಕಾರ್ಯಕ್ರಮ ಇದು. ಇದನ್ನು ನೀವೇ ಕಟ್ಟುನಿಟ್ಟಾಗಿ ಜಾರಿಗೆ ತರಲಿಲ್ಲ. ಏಕೆಂದರೆ ಬಂಗಾರದ ಬೆಲೆ ಜಾಸ್ತಿಯಾಗಿದೆ ಎಂಬುದಾಗಿ ನೀವು ಹೇಳಬಹುದು. ಆದರೆ ನೀವೇ ಮಾಡಿರುವಂತಹ ಕಾರ್ಯಕ್ರಮ ಇದು ೮೦೦–೧,೦೦೦ ರೂಪಾಯಿಗಳಾದರೂ ಪರವಾಗಿರಲಿಲ್ಲ. ಅದನು ನಾವು ಕೊಡುತ್ತೇವೆ ಎನ್ನುವ ಧೈರ್ಯ ನಿಮ್ಮಿಂದ ಬರಲಿಲ್ಲ. ೫ ವರ್ಷಗಳ ಕಾಲ ಸರ್ಕಾರದ ಆಡಳಿತವನ್ನು ನಡೆಸುವುದಕ್ಕೆ ಜನ ಕಳುಹಿಸಿ ಕೊಟ್ಟಿದ್ದಾರೆ ಎಂಬ ಧಾಟಿಯಲ್ಲಿ ಹೇಳುವುದನ್ನು ನೋಡಿ ನನಗೆ ದುಃಖವಾಗಿದೆ. ಈ ರಾಜ್ಯದ ಜನತೆ ಕಾಂಗ್ರೆಸ್‌ನ ಆಡಳಿತದ ನೀತಿಯನ್ನು ಅನುಭವಿಸಿದ್ದು, ಬಹಳ ವರ್ಷಗಳಿಂದಲೂ ಅದರ ವಿರುದ್ಧ ಹೋರಾಟ ಮಾಡಿದ ವಿರೋಧಪಕ್ಷವನ್ನು ಗುರುತು ಮಾಡಿ, ಈ ದೇಶದಲ್ಲಿ ತುರ್ತು ಪರಿಸ್ಥಿತಿ ಬಂದಂತಹ ಸಂದರ್ಭದಲ್ಲಿ ಅದರ ವಿರುದ್ಧ ಹೋರಾಟ ಮಾಡಿದಕ್ಕಾಗಿ ನಿಮ್ಮ ಬಗ್ಗೆ ಅನುಕಂಪವನ್ನು ತೋರಿಸಿ ನಿಮಗೆ ಈ ಒಂದು ಅಧಿಕಾರವನ್ನು ಕೊಟ್ಟರು. ಆ ಅಧಿಕಾರವನ್ನು ಸದುಪಯೋಗ ಮಾಡಿ ಕೊಂಡು ಇನ್ನೂ ಹೆಚ್ಚು ದಿವಸ ಅಧಿಕಾರದಲ್ಲಿ ಉಳಿಯಬೇಕು ಎಂದು ಜನ ಏನು ಅಂದುಕೊಳ್ಳುತ್ತಿದ್ದಾರೆ ಅದರಂತೆ ನಿಮ್ಮ ಆಡಳಿತ ನಡೆಯುತ್ತಿದೆಯೇ ಎಂಬುದೇ ಈಗ ಇರುವಂತಹ ಪ್ರಶ್ನೇ ?

ಇದು ಪ್ರಶ್ನೆ ಇರುವಂಥಾದ್ದು. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ಇಲ್ಲಿ ಇಲ್ಲ. ಆದರೆ ಪ್ರಮುಖ ಸಚಿವರು ಇದ್ದರೆ ದಯವಿಟ್ಟು

ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಿ ವಾಸ ಮಾಡತಕ್ಕಂಥ ರೈತ, ಕೂಲಿಕಾರ್ಮಿಕರು ಯಾರು ನಿಮ್ಮನ್ನು ನಂಬಿಕೊಂಡಿದ್ದರು, ಅವರು ಇವತ್ತು ಸರ್ಕಾರದ ಬಗ್ಗೆ ಏನು ಮಾತನಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಬಹಳ ಜನರ ಹೋರಾಟದ ಪರಿಣಾಮವಾಗಿ, ಕೇವಲ ಜನತಾ ಪಾರ್ಟಿ ಮಾತ್ರ ಹೋರಾಟ ಮಾಡಿದ್ದರಿಂದ ನೀವು ಅಧಿಕಾರಕ್ಕೆ ಬಂದಿದ್ದೀರಿ ಎಂದು ನೀವು ಅಂದುಕೊಂಡಿರಬಹುದು. ಆದರೆ ಇದು ಎಷ್ಟರಮಟ್ಟಿಗೆ ಸತ್ಯ ಎಂಬುದನ್ನು ನಿಮ್ಮನ್ನು ನೀವೇ ಪ್ರಶ್ನೆ ಮಾಡಿಕೊಂಡು ನೋಡಿ. ಅನೇಕ ವಿರೋಧ ಪಕ್ಷಗಳ ಹೋರಾಟದ ಪರಿಣಾಮವಾಗಿ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ತಮ್ಮ ಪ್ರಾಣ ಕೊಟ್ಟು ಹೋರಾಟ ಮಾಡಿದ ಅನೇಕ ಕಾರ್ಯಕರ್ತರ ಹೋರಾಟದ ಪರಿಣಾಮವಾಗಿ ಜನತಾ ಸರ್ಕಾರವು ಇಲ್ಲಿ ಅಧಿಕಾರಕ್ಕೆ ಬಂದಾಗ ಯಾರನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಿ ? ದುರಾದೃಷ್ಟ, ಇಲ್ಲಿ ಕುಳಿತುಕೊಳ್ಳುವ ಯಾರೋ ಒಬ್ಬ ಕಾಂಗ್ರೆಸ್ ಮಿತ್ರರು ಈ ಸರ್ಕಾರದ ವೈಫಲ್ಯಗಳು ಏನಿವೆ, ಜನವಿರೋಧಿ ಕೆಲಸಕಾರ್ಯಗಳ ಬಗ್ಗೆ ಅವರು ಎತ್ತಿತೋರಿಸುವುದಕ್ಕೆ ಸಾಧ್ಯವಿದೆಯೆ ? ನೀವು ವಾಪಸ್ಸು ಕೇಳುತ್ತೀರಿ, ನೀವು ಏನು ಮಾಡಿದ್ದೀರಿ ? ಎಂದು. ಆಗ ಅವರು ಎದೆಮುಟ್ಟಿಕೊಂಡು ನೋಡಬೇಕಾಗುತ್ತದೆ. ಇಂತಹ ವಿಚಿತ್ರವಾದ ಸನ್ನಿವೇಶ ಕರ್ನಾಟಕ ರಾಜ್ಯದಲ್ಲಿ, ಈ ದೇಶದಲ್ಲಿ ಇದೆ. ಬೇರೆ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರ ನಿರ್ನಾಮವಾಗುತ್ತಿದೆ. ಬದಲಾವಣೆ ತರುವಂಥ ಪ್ರಯತ್ನ ಬೇರೆ ರಾಜ್ಯಗಳಲ್ಲಿ ನಡೆಯುತ್ತಿದೆ. ಇಲ್ಲಿಯೂ ಬದಲಾವಣೆ ಬರಬೇಕೆಂದು ನಾವೂ ಸಹ ಬೆಂಬಲವನ್ನು ಕೊಟ್ಟೆವು. ಬಹುಶಃ ನಿಮಗೆ ಇದು ತಮಾಶೆಯಾಗಿ ತೋರಬಹುದು. ನೀವು ನಮ್ಮನ್ನು ಈಗ ಜ್ಞಾಪಕ ಮಾಡಿಕೊಳ್ಳುವುದಿಲ್ಲ. ರಾಜಕಾರಣದಲ್ಲಿ ನಾವು ನಿಮ್ಮಷ್ಟು ಪರಿಣಿತ ಜನ ಅಲ್ಲ. ೧೫ ಜನ ಬೇಷರತ್ ಬೆಂಬಲ ಕೊಟ್ಟು ಈ ಸರ್ಕಾರವನ್ನು ಉಳಿಸಬೇಕೆಂದು ಪ್ರಯತ್ನ ಮಾಡಿದೆವು. ನಿಮ್ಮ ಮೇಳ ಮಾಡಿದಂಥ ಸಂದರ್ಭದಲ್ಲಿ ಯಾರು ಕಾರಣಕರ್ತರು ಅಲ್ಲವೋ ಅವರನ್ನು, ಎಲ್ಲಾ ನಾಯಕರನ್ನು ಕರೆಯಿಸಿಕೊಂಡು ಅವರ ಮೂಲಕ ಭಾಷಣ ಮಾಡಿಸಿದಿರಿ. ಅವರಿಂದ ಮೆಚ್ಚುಗೆ ಪಡೆಯುವಂಥ ಪ್ರಯತ್ನ ಮಾಡಿದಿರಿ. ನೀವು ಹೇಳುತ್ತೀರಿ ಮುಖ್ಯಮಂತ್ರಿಗಳು ಎಲ್ಲರಿಗೂ ಕಾಗದ ಬರೆದಿದ್ದರು ಎಂದು —

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—ಪ್ರತಿಯೊಬ್ಬರನ್ನೂ ಹೋಗಿ ಮುಖ್ಯಮಂತ್ರಿಗಳು ಬರಬೇಕೆಂದು ಕರೆಯಲಿಲ್ಲ. ಪ್ರತಿಯೊಬ್ಬರಿಗೂ ಪತ್ರ ಬರೆದಿದ್ದರು. ಸಿ. ಪಿ. ಐ. ಮತ್ತು ಸಿ.ಪಿ.ಎಂ. ನಡುವೆ ವ್ಯತ್ಯಾಸ ಇರುವುದರಿಂದ ಒಂದೇ ಪ್ಲಾಟ್‌ಫಾರಂ ಆಗುತ್ತದೆ, ಆದ್ದರಿಂದ ಅವರು ಬಂದಿಲ್ಲವೆಂದು ನಮಗೆ ಬಂದ ವರದಿ.

ಶ್ರೀ ಬಿ. ಯಸ್. ಯಡಿಯೂರಪ್ಪ.—ಅಧ್ಯಕ್ಷರೇ, ದಯಮಾಡಿ ಮಾನ್ಯ ಜಾಲಪ್ಪನವರು ನನ್ನನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಖಂಡಿತವಾಗಿಯೂ ತಾವುಗಳು ನಮ್ಮನ್ನು ಆಹ್ವಾನ ಮಾಡಲಿಲ್ಲ ಅಥವಾ ನಮ್ಮ ನಾಯಕರನ್ನು ಕರೆಯಿಸಲಿಲ್ಲ ಎಂದು ನಾನು ಪ್ರಸ್ತಾಪ ಮಾಡುತ್ತಿರುವ ಉದ್ದೇಶ ಅಲ್ಲ. ಶ್ರೀ ಅಟಲ್‌ಬಿಹಾರಿ ವಾಜಪೇಯಿ ಮತ್ತು ಅದ್ವಾನಿಯವರನ್ನು ಕರೆಯಿಸಿ ಅವರು ಈ ಸರ್ಕಾರದ ಬಗ್ಗೆ ಒಳ್ಳೆಯ ಮಾತನಾಡಿದ್ದರೆ ಅದನ್ನು ಪುಸ್ತಕ ರೂಪದಲ್ಲಿ ಪ್ರಿಂಟ್ ಮಾಡಿಸಿ ದೆಲ್ಲಿಯಲ್ಲಿ ಹಂಚುವುದಕ್ಕೆ ಸಾಧ್ಯತೆ ಇದೆ. ಶ್ರೀ ವಿ. ಪಿ ಸಿಂಗ್ ಅವರು ಕರ್ನಾಟಕಕ್ಕೆ ಬಂದಾಗ ನಾವೇ ನಿಂತುಕೊಂಡರೆ ವಿರೋಧ ಪಕ್ಷಗಳು ಬಂದಂತೆ ಆಗುವುದಿಲ್ಲವೆಂದುಕೊಂಡು ಬಿ.ಜೆ.ಪಿ. ಯವರನ್ನು ಕರೆಯುವುದಕ್ಕೆ ನಿಮಗೆ ಜ್ಞಾಪಕ ಇದೆ. ನಮ್ಮನ್ನು ಕರೆಯಲಿಲ್ಲವೆಂದು ನಾನು ಹೇಳಲಿಲ್ಲ ತುಂಬಾ ಸಂತೋಷ ನಿಮಗೆ ಸಮಾಧಾನವಾಗಿದ್ದರೆ ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮದು ಬಿಡಿ. ಆದರೆ ಇವತ್ತು ಎಲ್ಲಿಗೆ ಬಂದು ಮುಟ್ಟಿದೆ ನಿಮ್ಮ ಸ್ಥಿತಿ ? ಬಿ.ಜೆ.ಪಿ. ಆಯಿತು. ಕೆಲವು ಜನತಾ ಪಕ್ಷದ ಮೂಲ ಕಾರ್ಯಕರ್ತರು, ಅನೇಕ ಹಿರಿಯ ಸಚಿವರನ್ನು ಕಡೆಗಣಿಸಿದಂಥ ಸ್ಥಿತಿ ಇದೆ. ಇತ್ತೀಚಿನ ವರ್ಷಗಳಲ್ಲಿ ಸಣ್ಣಪುಟ್ಟ ಮಾಡಿದ್ದನ್ನು ತೆಗೆದುಕೊಂಡು ದೊಡ್ಡದು ಮಾಡಿ ನಿಮ್ಮನ್ನು ನೀವೇ ಮೆಚ್ಚಿಕೊಳ್ಳುವಂಥ ಪ್ರಯತ್ನ. ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳುವ ಸಂದರ್ಭದಲ್ಲಿ ನೀವು ನಮ್ಮನ್ನು ಜ್ಞಾಪಿಸಿಕೊಳ್ಳುವ ಪ್ರಶ್ನೆ ಏನು ಬಂತು ? ಈ ರಾಜ್ಯಪಾಲರ ಭಾಷಣದಲ್ಲಿ ಒಂದು ಒಳ್ಳೆಯ ಮಾತು ಇದೆಯೆಂದು ನಾನು ಅಂದುಕೊಂಡಿಲ್ಲ. ನಿಮ್ಮ ಒಳ್ಳೆಯ ಕೆಲಸಗಳ ಬಗ್ಗೆ, ಸಾಧನೆಗಳ ಬಗ್ಗೆ ಹೇಳಿಕೊಳ್ಳುವುದಕ್ಕೆ ನಿಮ್ಮ ಜನ ಇದ್ದಾರೆ. ಆದರೆ ಏನು ನಿಮ್ಮ ವೈಫಲ್ಯತೆಗಳು ಇವೆ ಅವುಗಳನ್ನು ಹೇಳದೇ ಇದ್ದರೆ ನಾನು ಕರ್ತವ್ಯಭ್ರಷ್ಟನಾಗುತ್ತೇನೆ. ಆದ್ದರಿಂದ ಅದನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದೀರಿ.

''೧೯೮೮ರನೇ ಇಸವಿ ಜೂನ್ ೩೦ನೇ ತಾರೀಖಿಗೆ ಮುಂಚಿತವಾಗಿ ತಮ್ಮ ಎಲ್ಲಾ ಸಾಲಗಳ ಬಾಕಿಯನ್ನು ಸಂಪೂರ್ಣವಾಗಿ ಮರು ಸಂದಾಯ ಮಾಡಿದ ರೈತರಿಗೆ ದಂಡ ರೂಪದಲ್ಲಿ ಬಡ್ಡಿಯೂ ಸೇರಿದಂತೆ ಎಲ್ಲಾ ಸಾಲಗಳನ್ನು ಮನ್ನಾ ಮಾಡಲಾಗುವುದು'' ಎಂದು ಹೇಳಿದ್ದಿರಿ. ಮೊನ್ನೆ ನಾನು ನನ್ನ ಕ್ಷೇತ್ರಕ್ಕೆ ಹೋಗಿದ್ದಾಗ ಸಹಕಾರಿ ಸಂಘಕ್ಕೆ ಸಾಲ ಕಟ್ಟುವುದಕ್ಕೆ ಹೋದರೆ ಸಂಸ್ಥೆಬಡ್ಡಿ ಮನ್ನಾದ್ದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿರಬಹುದು, ನಮಗೆ ಆರ್ಡರ್ ಬಂದಿಲ್ಲ, ಬೇಕಾದರೆ ಕಟ್ಟಿಕೊಳ್ಳಿ ಇಲ್ಲದಿದ್ದರೆ ಇಲ್ಲ ಎಂದು ಹೇಳಿದ್ದಾರ. ಈ ಮಾತನ್ನು ಕೋಆಪರೇಟಿವ್ ಸೊಸೈಟಿಗಳಲ್ಲಿ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು ಹೇಳುತ್ತಿದ್ದಾರೆ. ಕೋಆಪರೇಟಿವ್ ಮಂತ್ರಿಗಳಿಗೆ ಮೊನ್ನೆ ೩೩ರಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಬಗ್ಗೆ ಸ್ಪಷ್ಟೀಕರಣ ಕೊಡಿ ಎಂದು ಕೇಳಿದಾಗ ನೇರವಾದ ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ಕೋಆಪರೇಟಿವ್ ಮಿನಿಸ್ಟರ್ ಇರಲಿಲ್ಲ.

ರೈತರಿಗೆ ಸುಸ್ತಿ ಬಡ್ಡಿ ಮನ್ನಾ ಮಾಡಿದ್ದೀರಾ ಎಂದು ಕೇಳಿದರೆ, ಅದಕ್ಕೆ ನೇರವಾಗಿ ಉತ್ತರ ಕೊಡುವುದಕ್ಕೆ ಕೋ-ಆಪರೇಟಿವ್ ಮಿನಿಸ್ಟರ್ ಇಲ್ಲ. ರಾಜ್ಯಪಾಲರ ಭಾಷಣದಲ್ಲಿ ಹೇಳುವ ಸಂಗತಿಗಳ ಬಗ್ಗೆ ಕ್ಯಾಬಿನೇಟ್ ಮಂತ್ರಿಗಳು ಒಟ್ಟಿಗೆ ಸಗಿವಾಡಿಕೊಂಡು, ಏನು ಹೇಳಿಸುತ್ತಿದ್ದೇವೆ, ಏನು ಬರುತ್ತದೆ, ಇದರ ಬಗ್ಗೆ ಚರ್ಚೆ ಆಗಿದೆಯೋ ? ಅಥವಾ ಇದು ಪ್ರಚಾರದ ಮಾತೇ ? ಅದಕ್ಕೋಸ್ಕರ ಒಂದು ಮಾತನ್ನು ತುಂಬಾ ವಿನಮ್ರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ರಾಜ್ಯದ ರೈತರ ಸುಸ್ತಿ ಬಡ್ಡಿ ಮನ್ನಾ ಮಾಡಿದರೆ ಸಾಲದು. ಕಳೆದ ೫ ವರ್ಷದಿಂದ ರೈತರ ಭೀಕರ ಬರಗಾಲಕ್ಕೆ ತುತ್ತಾಗಿ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾನೆ. ಇದರ ಪರಿಣಾಮ ಸರ್ಕಾರಕ್ಕೆ ಆಗಿದೆ ಎಂದು ಅಂದುಕೊಳ್ಳುವ ಸಂದರ್ಭದಲ್ಲಿ ಒಂದು ಕಡೆ ಸರ್ಕಾರ ದಿವಾಳಿಯಾಗಿದೆ. ಈಗಿರುವ ಸಂದರ್ಭದಲ್ಲಿ ಈ ಸರ್ಕಾರ ಉಳಿಯಬೇಕೆಂಬ ದೃಷ್ಟಿಯಿಂದ ಒಂದು ಪ್ರಾರ್ಥನೆ ಮಾಡುತ್ತೇನೆ, ಈ ರಾಜ್ಯದ ರೈತರ ಸಾಲವನ್ನು ಒಂದು ಸಾರಿ ಮನ್ನಾ ಮಾಡಿ, ಏನಾಗುತ್ತದೆ ? ಯಾವುದೇ ಕಾರ್ಯಕ್ರಮ ನಮ್ಮ ಕಣ್ಣು ಮುಂದೆ ಇಲ್ಲದೇ ಹೋದರೂ ಸುಸ್ತಿ ಬಡ್ಡಿ ಮನ್ನಾ ಮಾಡುವುದರಲ್ಲಿ ತೃಪ್ತಿಪಟ್ಟುಕೊಳ್ಳಲಿ ಎಂದು ದಯಮಾಡಿ, ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡಿ, ಸ್ವಲ್ಪ ಪುಣ್ಯ ಕಟ್ಟಿಕೊಳ್ಳಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ಈ ಸರ್ಕಾರ ದಿವಾಳಿಯಾಗಿದೆ ಈ ಮಾತನ್ನು ಹೇಳುವ ಪ್ರಯತ್ನವನ್ನು ನಾನು ಮಾಡಿದೆ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳ ಹೊಸ ವ್ಯವಸ್ಥೆ ಆಯಿತು. ಇದು ಮಾನ್ಯ ನಜೀರ್ ಸಾಬ್ ಅವರ ಕಳಕಳಿ ಈ ಬಿಲ್ ಪಾಸ್ ಆಗಿ, ರಾಜ್ಯಪಾಲರ ಒಪ್ಪಿಗೆ ಬರದೇ ಹೋದರೆ ರಾಷ್ಟ್ರಪತಿ ಭವನದ ಮುಂದೆ ಸತ್ಯಾಗ್ರಹ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಅವರ ಕಳವಳವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಬಿಲ್ ಮಂಜೂರಾಗಿ ಬಂದು, ಈಗ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯ್ತಿ ವ್ಯವಸ್ಥೆ ಆಗಿ ಹೋಗಿದೆ. ಸ್ವಲ್ಪ ಅವ್ಯವಸ್ಥೆ ಆದರೆ, ಸರಿಪಡಿಸಿಕೊಳ್ಳಬಹುದು. ಆದರೆ ಹೊಸ ವ್ಯವಸ್ಥೆ ತಂದು ಅಧಿಕಾರ ವಿಕೇಂದ್ರೀಕರಣ ಮಾಡಿದಿರಿ. ಹಳ್ಳಿಯ ರೈತ, ಕೂಲಿ ಕಾರ್ಮಿಕ, ಹರಿಜನ ಗಿರಿಜನ ಬಂಧುಗಳು ಈ ಹೊಸ ವ್ಯವಸ್ಥೆಯಿಂದ ಉದ್ಧಾರವಾಗುತ್ತಾರೆ ಎಂದು ನಂಬಿಕೊಂಡ ಜನ ಈ ವ್ಯವಸ್ಥೆಯನ್ನು ತಂದರು. ಆದರೆ ಕೇವಲ ೭-೮ ತಿಂಗಳೊಳಗೇ ಚುನಾಯಿತ ಪ್ರತಿನಿಧಿಗಳು, ''ಥೂ, ಚೀ,'' ಎಂದು ಹೇಳುವಂಥ ಸ್ಥಿತಿಗೆ ತಂದಿದ್ದೀರಿ. ಇದಕ್ಕೆ ಯಾರು ಕಾರಣಕರ್ತರು ? ಮುಂದೆ ನಾಲ್ಕಾರು ವರ್ಷಗಳಾದ ಮೇಲೆ ಈ ರೀತಿಯ ಅವ್ಯವಸ್ಥೆ ಆಯಿತು ಎಂದರೆ, ಯಾವುದೋ ಸರ್ಕಾರ ನಾವು ಮಾಡಿದ್ದನ್ನು ಸರಿಯಾಗಿ ಕಾರ್ಯರೂಪಕ್ಕೆ ತರಲಿಲ್ಲ ಎಂದು ಹೇಳಿದ್ದರೆ ಅದನ್ನು ಒಪ್ಪಿಕೊಳ್ಳಬಹುದಿತ್ತು. ನೀವು ಅಧಿಕಾರದಲ್ಲಿದ್ದಾಗ, ನೀವೇ ತಂದಂಥ ಜಿಲ್ಲಾಪರಿಷತ್, ಮಂಡಲ್ ಪಂಚಾಯಿತಿಗಳಲ್ಲಿ ಏನು ಅವ್ಯವಸ್ಥೆ ಆಗಿದೆ ಇದನ್ನು ಸರಿಪಡಿಸುವುದಕ್ಕೆ ಏನು ಪ್ರಾಮಾಣಿಕ ಪ್ರಯತ್ನ ಮಾಡಿದಿರಿ ? ತಾಲ್ಲೂಕು ಪಂಚಾಯ್ತಿ ಏನಿದೆ, ಅದರಲ್ಲಿ ಇಂಜಿನಿಯರ್ ವಿಭಾಗ, ಇರಿಗೇಷನ್, ಪಿ. ಡಬ್ಲ್ಯು. ಡಿ. ಸಿ. ಅಂಡ್ ಬಿ.ಗೆ ಸಂಬಂಧಪಟ್ಟ ಕೆಲಸಗಳು, ನಲ್ಲಿ ನೀರು, ಬೋರ್‌ವೆಲ್ ಎಲ್ಲಾ ಆ ಇಲಾಖೆಗೆ ಹೇರಿದ್ದೀರಿ. ಅಲ್ಲಿ ಯಾವುದೇ ಸ್ಟಾಫ್ ಇಲ್ಲ. ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಸ್ಟಾಫ್ ಇದೆ, ಅಲ್ಲಿ ಹಣ ಇಲ್ಲ, ಕೆಲಸ ಇಲ್ಲ. ಅವರಲ್ಲಿ ರೋಲರ್ ಇದೆ ರೋಲ್ ಮಾಡುವುದಕ್ಕೆ ಜೆಲ್ಲಿ ಸಂಗ್ರಹ ಇಲ್ಲ. ಇಲ್ಲಿ ಜೆಲ್ಲಿ ಸಂಗ್ರಹ ಇದೆ, ಆದರೆ ರೋಲರ್ ಇಲ್ಲ. ಅವರ ಹತ್ತಿರ ಲಾರಿ ಇದೆ, ಡೀಸಲ್ ಇಲ್ಲ. ಇಲ್ಲಿ ಲಾರಿ ಇಲ್ಲ, ಡೀಸಲ್ ಕೊಂಡುಕೊಳ್ಳುವುದಕ್ಕೆ ಹಣ ಇದೆ. ಈ ಸಣ್ಣ ಪುಟ್ಟ ವಿಷಯಗಳನ್ನು ಸರಿಪಡಿಸುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ, ಅಂದರೆ ನಿಮ್ಮ ಹೊಸ ಪದ್ಧತಿ ಏನು ? ಬಹುಶಃ ಮಂತ್ರಿಗಳು

ಎದ್ದು ನಿಂತು ಹೇಳಬಹುದು. ಈ ರಾಜ್ಯದಲ್ಲಿ ಹಿಂದೆ ಪಂಚಾಯಿತಿ ವ್ಯವಸ್ಥೆ ಇತ್ತು. ಈಗ ಯಾರಾದರೂ ಒಬ್ಬ ಚುನಾಯಿತ ಪ್ರತಿನಿಧಿ ಬರುತ್ತಿದ್ದಾಗೆ, ಕಂರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದಹಾಗೆ, ನೋಟ್ ಬಗ್ಗೆ ಯೋಚನೆ ಮಾಡತಕ್ಕಂಥ ಪ್ರವೃತ್ತಿ ಏಕೆ ಮಾಡಿದಿರಿ ? ಪ್ರಧಾನರಿಗೆ ಗೌರವ ಧನ ೩೦೦ ರೂಪಾಯಿಗಳು, ಸಿಟಿಂಗ್ ಫೀ. ಜಿಲ್ಲಾ ಪರಿಷತ್ ಅಧ್ಯಕ್ಷ, ಉಪಾಧ್ಯಕ್ಷರಿಗೆ ಮಂತ್ರಿಗಳ ಸ್ಥಾನ. ಸ್ವಾಮಿ ನಾನು ಹೇಳುತ್ತೇನೆ, ಒಬ್ಬ ಸಾಮಾನ್ಯ ವ್ಯಕ್ತಿ, ಗ್ರಾಮಾಂತರ ಪ್ರದೇಶದಲ್ಲಿ ಜನಪ್ರೀತಿಯನ್ನುಗಳಿಸಿ, ಚುನಾವಣೆಯಲ್ಲಿ ಗೆದ್ದು, ಪಕ್ಷದ ಬಲದಿಂದ ಜಿಲ್ಲಾಪರಿಷತ್ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಆದರೆ, ಒಂದೆರಡು ವರ್ಷ ಅಲ್ಲಿರಬಹುದು. ಆದರೆ ಆ ಪದವಿ ಕಳೆದುಕೊಂಡ ಮೇಲೆ ಆತ ಏನು ಮಾಡಬೇಕು. ಮಂತ್ರಿ ಸ್ಥಾನಕ್ಕೆ ಏಕೆ ಏರಿಸಿದಿರಿ ? ಆತ ಕಾರಿನಲ್ಲಿ ಓಡಾಡಿ, ಅಭ್ಯಾಸ ಆಗಿರುತ್ತದೆ. ಮುಂದೆ ಒಂದು ವರ್ಷ ಕಳೆದ ಮೇಲೆ ಆತ ಏನು ಮಾಡಬೇಕು. ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ, ಸರ್ಕಾರದ ಸ್ಥಿತಿ ಏನಿದೆ, ಅದಕ್ಕೆ ತಕ್ಕಂಥ ಕೆಲಸ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಿ ಎಂದು ಹೇಳದೇ, ಪ್ರಾರಂಭದಲ್ಲೇ ಸಿಟಿಂಗ್ ಫೀ. ಪ್ರಧಾನರಿಗೆ ಸಂಬಳ, ಕ್ಯಾಬಿನೆಟ್ ರ್ಯಾಂಕ್–ಈ ರೀತಿ ನಮ್ಮ ಬೊಕ್ಕಸಕ್ಕೆ ಬರುವಂಥ ಹಣವನ್ನು ವ್ಯರ್ಥ ಮಾಡುವ ಕಡೆ ಗಮನದಲಿರಿಸಿದಿರಿ. ಇವತ್ತು ಸರ್ಕಾರ ದಿವಾಳಿಯಾಗಿದೆ. ಇನ್ನೊಂದು ಮಾತನ್ನು ಹೇಳುತ್ತೇನೆ. ಈ ೫ ವರ್ಷದ ಹಿಂದೆ ಒಂದು ತಿಂಗಳಿಗೆ ಅಡ್ಮಿನಿಸ್ಟ್ರೇಷನ್ ಖರ್ಚು ಎಷ್ಟಿತ್ತು, ಎಂದರೆ ೩೨–೩೩ ಕೋಟಿ ರೂಪಾಯಿಗಳು ಈಗ ನೀವು ೧೦೮–೧೧೦ ಕೋಟಿ ಖರ್ಚ್ ಮಾಡುತ್ತಿದ್ದೀರಿ. ನಮ್ಮ ಬಜೆಟ್ ಹಣದಲ್ಲಿ ಶೇಕಡ ೩೩ ಪರ್ಸೆಂಟ್ ಆಗುತ್ತದೆ. ಅಂದರೆ ಸುಮಾರು ೧೩೨೦ ಕೋಟಿ ಆಯಿತು. ಒಂದು ತಿಂಗಳಿಗೆ ೧೧೦ ಕೋಟಿ ಖರ್ಚು ಬರುತ್ತಿದೆ. ಈ ರೀತಿ ಶೇಕಡ ಒಬ್ಬ ಸರ್ಕಾರಿ ನೌಕರ ಜನತೆಯ ಹಿತಕ್ಕೋಸ್ಕರ ಇದ್ದಾರೆ, ಅವರಿಗೋಸ್ಕರ ೧೩೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ: ಇದರಲ್ಲಿ ಇನ್ನು ಉಳಿದಿರುವುದು ಎಷ್ಟು ? ಈ ೩೩ನ್ನು ಕಳೆದರೆ, ಇನ್ನು ೬೭ ಕೋಟಿ ರೂಪಾಯಿಗಳು, ಇದರಲ್ಲಿ ಆ ಕಮೀಷನ್, ಈ ಕಮೀಷನ್, ಲಂಚ್ ಇನ್ನೂ ಏನೇನೋ ಎಂದು ೧೭ ಕಳೆದರೆ, ಉಳಿಯುವುದು ೫೦ ಕೋಟಿ. ಇದರಲ್ಲಿ ರಾಜ್ಯದ ಜನತೆಯ ಹಿತ ಆಗಬೇಕು, ಇದು ಸಾಧ್ಯವೇ ? ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ,

ಹಿಂದೆ ಇದ್ದಂಥ ಕಾಂಗ್ರೆಸ್ ಆಡಳಿತದ ಭ್ರಷ್ಟಾಚಾರದ ನೀತಿಯಿಂದ ಈ ರಾಜ್ಯದಲ್ಲಿ ಏನು ಒಂದು ಅವ್ಯವಸ್ಥೆ ಇತ್ತು. ಆ ಅವ್ಯವಸ್ಥೆಯನ್ನು ಸಂಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ಸ್ವಾಮಿ ? ಇಲ್ಲ, ಮಾಡಲಿಲ್ಲ, ನೀವು ಯಾರನ್ನು ಬೆಳೆಸುವುದಕ್ಕೆ ಹೊರಟಿರಿ ? ಟಾಟಾ, ಬಿರ್ಲಾ, ಖೋಡೇಸ್ ಇವರನ್ನು ಬೆಳೆಸುವುದಕ್ಕೆ ಹೊರಟಿರಿ. ಇವರನ್ನು ಬೆಳೆಸುವಂತಹ ಪ್ರಯತ್ನ ಮಾಡಿದಿರಿ. ನಿನ್ನೆ ಮಾನ್ಯ ರೆವಿನ್ಯೂ ಸಚಿವರು ಇಲ್ಲಿದ್ದರು. ಆಮೇಲೆ ನನಗೆ ಮರೆತು ಹೋಗಬಹುದು, ಈಗಲೇ ಹೇಳುತ್ತೇನೆ. ನಮ್ಮ ಊರಿನಲ್ಲಿ ಒಂದು ದೇವಸ್ಥಾನವನ್ನು, ಕಾಂಗ್ರೆಸ್, ಜನತಾ, ಬಿ. ಜೆ. ಪಿ. ಎಲ್ಲಾ ಪಕ್ಷ ಪಕ್ಷದವರೂ ಸೇರಿ ಕಟ್ಟಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಎಲ್ಲರೂ ಸೇರಿ ಹಣ ವಸೂಲು ಮಾಡಿ ಒಂದು ಸೈಟ್ ಮಂಜೂರಾತಿ ಮಾಡಿ ಎಂದು ದುಡ್ಡು ಕಟ್ಟಿ ಮಾನ್ಯ ಮಂತ್ರಿಗಳ ಹತ್ತಿರ ಬಂದರೆ, ಅವರು ದುಡ್ಡು ಕಡಿಮೆ ಆಯಿತು. ಆ ರೇಟ್‌ಗೆ ಕೊಡುವುದಕ್ಕೆ ಹೇಗೆ ಆಗುತ್ತದೆ ಎಂದರು. ಇದನ್ನು ಇಡೀ ಊರಿಗೆ ಊರೇ ಸೇರಿ ಮಾಡುತ್ತಿದ್ದ, ಅಲ್ಲಿ ಒಂದು ರಾಘವೇಂದ್ರಸ್ವಾಮಿ ದೇವಸ್ಥಾನ ಕಟ್ಟಬೇಕೆಂದು ಲಕ್ಷಾಂತರ ರೂಪಾಯಿಗಳ ಹಣ ಸಂಗ್ರಹ ಮಾಡಿದ್ದಾರೆ. ನಿಮಗೆ ದೇವರು ದಿಂಡರು ಬಗ್ಗೆ ನಂಬಿಕೆ ಇದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಹಳ್ಳಿಗಾಡಿನ ಬಡವ ದೇವರು ದಿಂಡರು ಎಂದುಕೊಂಡು, ಕೈಮುಗಿದುಕೊಂಡು, ನೀವು ಮಾಡಿದಂಥ ತಪ್ಪನ್ನೆಲ್ಲಾ ಕ್ಷಮಿಸಿ ಎಂದು ಹೇಳುತ್ತಾನೆ. ಅದನ್ನು ಮಾಡುವುದಕ್ಕೆ ಕಾನೂನಿನ ತೊಡಕೇ ? ಗೌರ್ನಮೆಂಟ್ ಆರ್ಡರ್ ನಂಬರ್ ೧೬೩ ಎಲ್‌ಜಿಬಿ ೮೪, ಬೆಂಗಳೂರು. ಇದರ ಪ್ರಕಾರ, ಬೆಂಗಳೂರು. ಇದರ ಪ್ರಕಾರ, ಬೆಂಗಳೂರು ರಿಬ್ಬನ್ ಲೇಬಲ್ ಅಂಡ್ ಅಲೈಡ್ ಪ್ರಾಡಕ್ಟ್ಸ್. ಇವರಿಗೆ ಕುರುಬರ ಹಳ್ಳಿ, ಮಾಗಡಿ ತಾಲ್ಲೂಕು ಇಲ್ಲಿ ಖೋಡೇಸ್‌ಗೆ ಅನುಕೂಲವಾಗಲಿ ಎಂದು ಹೇಳಿ ೧೦೪ ಎಕರೆ, ೧೪ ಗುಂಟೆ ಜಮೀನನ್ನು ಕೊಟ್ಟಿದ್ದಾರೆ. ನಾನು ಇವತ್ತು ಒಂದು ಅಗ್ರಹ ಮಾಡುತ್ತೇನೆ, ನೀವು ಅಧಿಕಾರಕ್ಕೆ ಬಂದಮೇಲೆ ಈ ರೀತಿ, ಖೋಡೇಸ್ ನಂತಹ ಹೆಂಡ ಸಾರಾಯಿ ಮಾಲೀಕರು ಯಾರು ಇದ್ದಾರೆ ಇವರಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಜಮೀನನ್ನು, ಯಾವ ಯಾವ ಕೆಲಸಕ್ಕಾಗಿ ಕೊಟ್ಟಿದ್ದೀರಿ ಎಂಬುದರ ಬಗ್ಗೆ ಒಂದು ವೈಟ್ ಪೇಪರ್ ಹೊರಡಿಸಬೇಕು. ನಾನು ವಿವರವಾಗಿ ಹೋಗುವುದಿಲ್ಲ. ಇನ್ನೂ ಬಹಳ ವಿಷಯಗಳಿವೆ. ಇನ್ನೊಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಿಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ

ಪ್ರಚಾರದ ಬಗ್ಗೆ ಎಷ್ಟೊಂದು ಆಸಕ್ತಿ ಇದೆ. ಬರಗಾಲ ಇದ್ದಾಗ ಅವರು ಪ್ರವಾಸ ಹೋಗಲಿಲ್ಲ, ಆರೋಗ್ಯ ಸರಿಯಿಲ್ಲ ಎಂದು ನಾವು ತಿಳಿದುಕೊಂಡಿದ್ದೆವು. ಆಮೇಲೆ ಉತ್ತರ ಕರ್ನಾಟಕ ಪ್ರವಾಸಕ್ಕೆ ಹೋಗಿದ್ದರು. ಆ ಸಮಯದಲ್ಲಿ ಪತ್ರಿಕಾ ಹೇಳಿಕೆ ಕೊಟ್ಟರು. ಮುಂದಿನ ವರ್ಷ ನೀರಾವರಿ ಸೌಲಭ್ಯಗಳಿಗೆ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿಡುತ್ತೇವೆ, ಒಂದು ಜಿಲ್ಲೆಗೆ ಒಂದು ಸಾವಿರಕ್ಕಿಂತ ಹೆಚ್ಚು ಜನತಾ ಮನೆಗಳನ್ನು ಬಡವರಿಗೋಸ್ಕರ ಮಾಡಿಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ ಈ ವರ್ಷ ನೀರಾವರಿ ಸವಲತ್ತುಗಳಿಗಾಗಿ ಇಟ್ಟಂಥ ಮೂರು ನೂರು ಕೋಟಿ ರೂಪಾಯಿಗಳಲ್ಲಿ ಒಂದು ನೂರು ಕೋಟಿ, ರೂಪಾಯಿಗಳೂ ಖರ್ಚು ಮಾಡುವುದಕ್ಕೆ ಸಿಗಲಿಲ್ಲ. ಹೀಗಾದರೆ ಪ್ರಚಾರ ಏತಕ್ಕೆ ಬೇಕು ? ಭಾಷಣ ಏತಕ್ಕೆ ಮಾಡಬೇಕು, ಮಾಡದಂಥ ಕೆಲಸವನ್ನು ಹೇಳಿಕೊಂಡು ಬಂದಿರಿ ಈ ಪ್ರಚಾರ ಏತಕ್ಕೆ ಬೇಕಾಗಿತ್ತು. ನೀವು ವಿರೋಧ ಪಕ್ಷವನ್ನು ಕಾನ್‌ಫಿಡನ್ಸ್‌ಗೆ ತೆಗೆದುಕೊಳ್ಳಿ. ಇದುವರೆಗೆ ನೀವು ಯಾರನ್ನು ಕೇಳಿದ್ದೀರಿ, ನಮ್ಮನ್ನು ಯಾರು ಕೇಳಿದ್ದಾರೆ. ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದಿದ್ದಾಗ, ನೀವು ವಿರೋಧ ಪಕ್ಷವನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು, ನೋಡಿ ಇರುವಂತಹ ಪರಿಸ್ಥಿತಿ ಇದು, ಇಷ್ಟು ದುಡ್ಡಿದೆ, ಇದರಲ್ಲಿ ಯಾವ ರೀತಿ ಮಾಡುವುದು ಎಂದು ಕೇಳಬೇಕು, ಇದು ಒಂದು ಸಂಸಾರ ಇದ್ದಹಾಗೆ ಅಧಿಕಾರದಲ್ಲಿ ನೀವು ಕುಳಿತರೆ ನಿಮಗೆ ತಿಳಿದಹಾಗೆ ಮಾಡಬೇಕೆಂದೇನೂ ಇಲ್ಲ, ಪ್ರಜಾ ಪ್ರಭುತ್ವದಲ್ಲಿ ವಿರೋಧ ಪಕ್ಷಗಳನ್ನು ನೀವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ನಾವು ಇಲ್ಲಿ ಕುಳಿತಿದ್ದರೂ ಕೂಡಾ, ನಾವು ಹೇಳಿದಂತಹ ಮಾತನ್ನು, ಅದು ಸತ್ಯ ಎಂದು ಕಂಡುಬಂದರೆ, ಅದನ್ನು ಪಾಲನೆ ಮಾಡುವಂತಹ ವ್ಯವಸ್ಥೆ ಇದ್ದಿದ್ದರೆ, ಈ ದೇಶ ವಿಪತ್ತಿನ ಪರಿಸ್ಥಿತಿಗೆ ಬರುತ್ತಿರಲಿಲ್ಲ. ಆ ರೀತಿ ಮಾಡಿದ್ದರೆ ನಾವು ಚರ್ಚೆ ಮಾಡುವುದಕ್ಕೆ ಬರುತ್ತಿರಲಿಲ್ಲ.

ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲಿದ್ದಾರೆ, ಅವರು ಬಹಳ ಉತ್ಸಾಹಿಗಳು ನೀರಾವರಿ ಮತ್ತು ಪಿ. ಡಬ್ಲ್ಯೂ. ಡಿ. ಇಲಾಖೆಗಳಲ್ಲಿ ಹೆಚ್ಚು ಕೆಲಸ ಮಾಡಬೇಕೆಂದು ಇದ್ದಾರೆ. ಆದರೆ ಇವತ್ತು ಅವರ ಬಾಯಿ ಮುಚ್ಚುವಂತಹ ಕಾರ್ಯ ಆಯಿತು. ಇವತ್ತಿನ ದಿವಸ ನಾನು ಕೇಳುತ್ತೇನೆ ಜನತಾ ಸರಕಾರದ ಸಾಧನೆಗಳ ಬಗ್ಗೆ ಒಂದು ವೈಟ್ ಪೇಪರ್ ಹೊರಡಿಸಿ. ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ, ನೀವು ಮಂಜೂರಾತಿ ಮಾಡಿದಂಥ ನೀರಾವರಿ ಮತ್ತು ಕಾಮಗಾರಿ ಕೆಲಸಗಳು ಯಾವ ಯಾವುದನ್ನು ಮಂಜೂರು ಮಾಡಿದ್ದೀರಿ, ಅದು ಯಾವ ಸ್ಥಿತಿಯಲ್ಲಿವೆ ಇದರ ಬಗ್ಗೆ ಒಂದು ವೈಟ್ ಪೇಪರ್ ಹೊರಡಿಸಿ.. ಆಗ ನಿಮ್ಮ ಮುಖಾಂತರವೇ ನಿಮ್ಮ ಚಿತ್ರ ಸ್ಪಷ್ಟವಾಗಿ ಕಾಣುತ್ತದೆ. ಯಾವ ಕೆಲಸ ಆಗಿದೆ, ಯಾವ ಯೋಜನೆ ಆಗಿದೆ ಟಾರ್ ರಸ್ತೆ ಎಷ್ಟೋ ವರ್ಷಗಳ ಹಿಂದೆ ಮಾಡಿದ್ದುದು. ಮಣ್ಣಿನ ರಸ್ತೆ. ಆಗುತ್ತಿದೆ. ರಸ್ತೆಗಳ ಮಧ್ಯದಿಂದ ಅಕ್ಕಪಕ್ಕಕ್ಕೆ ಬಸ್, ಕಾರುಗಳು ಬಂದರೆ, ಪಕ್ಕದಲ್ಲಿದ್ದ ಗುಂಡಿಗೆ ಬೀಳುತ್ತವೆ, ರಸ್ತೆಯ ಪಕ್ಕದಲ್ಲಿರುವ ಗುಂಡಿಯನ್ನು ಮುಚ್ಚುವ ಕೆಲಸವೂ ಆಗಿಲ್ಲ. ಹರಿಜನ ಗಿರಿಜನರ ಕೆಲಸಗಳು ಆಗಿಲ್ಲ. ಅವರಿಗೆ ಸಿಗಬೇಕಾದ ಸವಲತ್ತುಗಳು ಸಿಗುತ್ತಿಲ್ಲ. ಈ ರೀತಿಯ ಅನೇಕ ಉದಾಹರಣೆಗಳು ಇವೆ. ಇದು ಇರತಕ್ಕಂಥ ಸ್ಥಿತಿ. ಇದು ಸುಧಾರಣೆಯೇ ? ಏನು ಸುಧಾರಣೆ ಮಾಡಿದ್ದೀರಿ, ಏನು ಸಾಧನೆಗಳನ್ನು ಮಾಡಿದ್ದೀರಿ ? ಚುನಾವಣೆ ಬಂದಾಗ ಕೆಲವು ತಿಂಗಳ ಹಿಂದೆ ಅವರು (ಕಾಂಗ್ರೆಸ್-ಐ) ಏನು ಮಾಡುತ್ತಿದ್ದರೋ ಅದನ್ನೇ ನೀವು ಮಾಡುತ್ತಿದ್ದೀರಿ, ಚುನಾವಣೆ ಹತ್ತಿರ ಬರುತ್ತಿದೆ ಎಂದು ಕಾಣುತ್ತದೆ. ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿಸಿದ್ದೀರಿ. ಚುನಾವಣೆ ಹತ್ತಿರ ಬರುತ್ತಿದೆ. ನಿಮ್ಮ ವಿರೋಧ ಪಕ್ಷವಾಗಿರುವ ರಾಜಕೀಯ ಪಕ್ಷದವರು ಮಾಡಿದುದನ್ನೇ ನೀವೂ ಮಾಡುವುದಕ್ಕೆ ಹೊರಟಿದ್ದೀರಿ ಹರಿಜನ ಗ್ರಾಮಗಳ ವಿದ್ಯುದೀಕರಣ, ನಿವೇಷನ ರಹಿತರಿಗೆ ನಿವೇಶನ ಹಂಚಿಕೆ, ಭಾಗ್ಯ ಜ್ಯೋತಿ ಯೋಜನೆ ಇದರ ಬಗ್ಗೆ ಹೇಳಿದ್ದೀರಿ. ಆದರೆ ಈ ಯೋಜನೆಗಳ ಸೌಲಭ್ಯ ಪೂರ್ಣವಾಗಿ ದೊರೆಯುತ್ತಿಲ್ಲ ಎಂಬುದು ಮುಖ್ಯ. ಇದರ ಬಗ್ಗೆ ನೀವು ಏನೂ ಮಾಡಲಿಲ್ಲ ಎಂದು ಹೇಳುವುದಿಲ್ಲ, ಮಾಡಿದ್ದು ವಿದ್ಯುಚ್ಛಕ್ತಿ ಉತ್ಪಾದನೆ, ವಿದ್ಯುಚ್ಛಕ್ತಿ ದೀಪಗಳನ್ನು ಕೊಡುವುದು, ಇದರ ಜೊತೆಗೆ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ, ಇದರ ಬಗ್ಗೆ ತಾವು ಅಂಕಿ ಅಂಶಗಳನ್ನು ಕೊಟ್ಟರೆ ಆಗ ಗೊತ್ತಾಗುತ್ತದೆ. ನಿಮ್ಮ ಜನತಾ ಸರಕಾರ ಅಧಿಕಾರಕ್ಕೆ ಬಂದಮೇಲೆ ಏನಾಗಿದೆ ಅದನ್ನು ಕೊಡಿ. ಹಳೆಯದು ಮತ್ತು ಈ ವರ್ಷದನ್ನು ಕೊಡಿ. ಎಷ್ಟು ಬಡವರನ್ನು ಗುರುತು ಮಾಡಿದ್ದೀರಿ. ಎಷ್ಟು ಜನಕ್ಕೆ ಸೈಟ್ ಕೊಟ್ಟಿದ್ದೀರಿ, ಈ ವರ್ಷ ೩೧-೩-೧೯೮೮ರ ಒಳಗೆ ಇದನ್ನು ಪೂರ್ಣವಾಗಿ ಮುಗಿಸಿದ್ದೇವೆ ಎಂದು ತಾವು ಹೇಳಿದ್ದೀರಿ. ಇದು ಬುಕ್‌ನಲ್ಲಿರುವುದು.

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಸಂಗತಿ, ಪ್ರಿಂಟ್ ತಪ್ಪಾಗುತ್ತದೆಯೇ ? ಪ್ರಿಂಟ್ ತಪ್ಪಾಗಿದೆ ಎಂದು ನೀವು ಹೇಳುತ್ತಿದ್ದೀರಿ. ೧೯೮೮ನೇ ಇಸವಿಯೊಳಗೆ ಬರವನ್ನು ಗುರುತು ಮಾಡುವುದಕ್ಕೆ ನಿಮಗೆ ಟೈಮ್ ಇಲ್ಲ. ಇದು ನಿಮಗೆ ಆಮೇಲೆ ಗೋಚರವಾಗಿದೆ. ನಾನು ಹೇಳುತ್ತಿದ್ದೇನೆ. ಈ ಕೆಲಸ ಪ್ರಾಮಾಣಿಕವಾಗಿ ಆಗಬೇಕು ಅದೂ ನಿಮ್ಮ ಕಡೆಯಿಂದ. ನಾವು ಟೀಕೆ ಮಾಡುವ ಉದ್ದೇಶ ನಿಮ್ಮ ತಪ್ಪು ಸರಿ ಮಾಡಿಕೊಂಡು ಪ್ರಾಮಾಣಿಕವಾಗಿ ಈ ರಾಜ್ಯದ ಬಡವರಿಗೆ ಅನುಕೂಲ ಮಾಡಿಕೊಡಿ ಎಂದು. ರಕ್ತ ಹೀರುವಂತಹ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬರುವಂತಹ ಪರಿಸ್ಥಿತಿಯನ್ನು ತಾವು ತಂದೊಡ್ಡುತ್ತಿದ್ದೀರಲ್ಲ ಎಂದು ದುಃಖದಿಂದ ಈ ಮಾತನ್ನು ಹೇಳುತಿದ್ದೇನೆ. ಈಗಲಾದರೂ ಅದನ್ನು ತಾವು ತಿದ್ದಿಕೊಂಡು ಅಧಿಕಾರದಲ್ಲಿಯೇ ಉಳಿಯಬೇಕು. ನಾನು ಮೊನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಮಾಷೆಯಾಗಿ ಮಾತನಾಡುತ್ತಾ ಹೇಳಿದೆ, ನಾವೆಷ್ಟು ಟೀಕೆ ಮಾಡಿದರೂ ನೀವು ಅಧಿಕಾರದಲ್ಲಿರಬೇಕು ಎನ್ನುವುದೇ ನಮ್ಮ ಅಪೇಕ್ಷೆ. ಆಗ ನಾನು ತಮಾಷೆಯಾಗಿ ಹೇಳಿದ ಮಾತು ಈಗ ನಿಜವಾಯಿತು. ನನ್ನ ದುಃಖ ಏನು ಗೊತ್ತೆ ? ನಮ್ಮ ಶಾಸಕರು ಇವತ್ತು ಚಿಂತೆ ಮಾಡುತ್ತಿದ್ದಾರೆ ಜನತಾಪಕ್ಷದ ಭವಿಷ್ಯವೇನು ? ಈ ಸರ್ಕಾರದ ಭವಿಷ್ಯವೇನು ? ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ ವ್ಯವಸ್ಥೆಯನ್ನು ತಂದಿದ್ದೀರಿ. ನಮ್ಮ ಮಾನ್ಯ ನಜೀರ್ ಸಾಬ್‌ರವರನ್ನು ನಾನು ನಂಬಿದ್ದೇನೆ ನೀವು ನಂಬಿದ್ದೀರಿ. ಅವರು ಮಾಡಿದಂತಹ ಕೆಲಸವನ್ನು ಮೆಚ್ಚಿ ಅವರಿಗೆ ನಾನು ಒಂದು ಕಂಗ್ರಾಜುಲೇಶನ್ ಪತ್ರ ಬರೆದೆ. ಆದರೆ ನನಗೆ ಇರುವ ಭಯವೇನೆಂದರೆ ಬಹಳ ವರ್ಷಗಳಿಂದ ಮಾನ್ಯ ನಜೀರ್‌ಸಾಬ್‌ರವರು ಕಾಂಗ್ರೆಸ್ ಪಕ್ಷದಲ್ಲಿದ್ದವರು. ಅವರಿಗೆ ಒಳಗೊಳಗೆ ಏನಾದರೂ ಹೇಳಿಕೊಟ್ಟು, ಮಂತ್ರ, ತಂತ್ರ ಗಿಂತ್ರ ಮಾಡಿ ನೋಡಯ್ಯ ನೀನು ಈ ಮಂಡಲ್ ಪಂಚಾಯತ್ ವ್ಯವಸ್ಥೆಯನ್ನು ಜಿಲ್ಲಾ ಪರಿಷತ್ತು ವ್ಯವಸ್ಥೆಯನ್ನು ಜಾರಿಗೆ ತೆಗೆದುಕೊಂಡು ಬಾ, ಅದು ಅವ್ಯವಸ್ಥೆಯಾಗುತ್ತದೆ, ಆಗ ನಾವು ಆನಂದದಿಂದ ಅಧಿಕಾರಕ್ಕೆ ಬರುತ್ತೇವೆಂದು ಏನಾದರೂ ತಂತ್ರ ಮಾಡಿದ್ದಾರೆಯೇ ಎನ್ನುವುದು ನನ್ನ ಭಾವನೆ. ಇದ್ದರೂ ಇರಬಹುದು ಅವರು ತಂದಿರತಕ್ಕಂಥ ಉದ್ದೇಶ ಒಳ್ಳೆಯದಿರಬಹುದು ಆದರೆ ಯಾರ್ಯಾರೂ ಎಲ್ಲೆಲ್ಲಿ ಏನೇನು ಮಾಡುತ್ತಾರೋ ಯಾರಿಗೆ ಗೊತ್ತು ? ಒಂದು ವೇಳೆ ಆ ರೀತಿ ಏನಾದರೂ ಆಗಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಇಷ್ಟು ಮಾತ್ರ ನಾನು ಹೇಳುತ್ತೇನೆ. ನಾನು ಹೆಚ್ಚು ಟೀಕೆ ಮಾಡಿದರೆ ನೋಡಿ ನಾವು ಅಧಿಕಾರ ವಿಕೇಂದ್ರೀಕರಣ ಮಾಡಿದೆವು ಬಡವರ ಕೈಗೆ ಅಧಿಕಾರ ಕೊಟ್ಟೆವು ಅದನ್ನು ಬಿ. ಜೆ. ಪಿ.ಯ ಯಡಿಯೂರಪ್ಪನವರು ಸಹಿಸಲಿಲ್ಲ ಎನ್ನುವ ಮಾತು ಬಂದರೂ ಬರಬಹುದು ಆದ್ದರಿಂದಲೇ ನಾನು ತಮ್ಮನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ, ನಿಮ್ಮ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲಿ ಲೋಪದೋಷಗಳಾಗಿವೆಯೋ ಅವುಗಳನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಸ್ವಾಮಿ ತಾವೇನು ಹೇಳಿದ್ದಿರಿ ? ಮಾನ್ಯ ಮುಖ್ಯ ಮಂತ್ರಿಗಳೇನು ಹೇಳಿದರು ? ನಿಮ್ಮ ಸರ್ಕಾರವೇನು ಹೇಳಿತು ? ಒಂದು ಕುಟುಂಬಕ್ಕೆ ಒಂದು ಉದ್ಯೋಗ ಎನ್ನುವಂತಹ ಘೋಷಣೆಯನ್ನು ಮಾಡಿದ್ದಿರಿ. ಆದರೆ ನಿಮ್ಮ ವಿಚಾರ ಒಳ್ಳೆಯದಿರಬಹುದು. ಎಷ್ಟು ಕುಟುಂಬಗಳಿಗೇ ನೌಕರಿಯನ್ನು ಕೊಟ್ಟಿದ್ದೀರಿ ? ಈಗ ೧೦೫—೧೧೦ ಕೋಟಿ ರೂಪಾಯಿಗಳವರೆವಿಗೆ ಸರ್ಕಾರಿ ನೌಕರರಿಗೆ ಕೊಡುತ್ತಿದ್ದೀರಿ. ಈ ರೀತಿಯಾದರೆ ನಿಮ್ಮ ಆರ್ಥಿಕ ಬಿಕ್ಕಟ್ಟು ಉಂಟಾಗದೆ ಏನು ಮಾಡುತ್ತದೆ ? ಒಬ್ಬ ವ್ಯಕ್ತಿಗೆ ನೀವು ಸರ್ಕಾರಿ ನೌಕರಿ ಕೊಡದಿದ್ದರೂ ಚಿಂತೆ ಇಲ್ಲ. ತನ್ನ ಸ್ವಂತ ಕಾಲ ಮೇಲೆ ತಾನು ನಿಲ್ಲತಕ್ಕಂಥ ಉದ್ಯೋಗವನ್ನಾದರೂ ಕೊಡುವುದಕ್ಕೆ ಪ್ರಯತ್ನ ಮಾಡಬಹುದಾಗಿತ್ತು. ಅದನ್ನು ಮಾಡಿದ್ದೀರಾ ? ಇದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ ? ಸುಮ್ಮನೆ ತಾವು ಘೋಷಣೆ ಮಾಡಿದಿರಿ. ಆ ಘೋಷಣೆ ಮಾಡಿದ ಮೇಲೆ ಪರಿಸ್ಥಿತಿ ಎಲ್ಲಿಗೆ ಬಂತು ? ನಿಮ್ಮನ್ನು ಯಾರೂ ಹೇಳುವವರಿಲ್ಲ, ಕೇಳುವವರಿಲ್ಲ. ನಿಮಗೆ ಖುಷಿ ಬಂದಂತೆ ಕೆಲಸ ಮಾಡುತ್ತಿದ್ದೀರಿ. ಸ್ವಾಮಿ ತಾವು ಒಂದು ನೋಟಿಫಿಕೇಷನ್ ಹೊರಡಿಸಿದಿರಿ. ಇನ್ನು ಮುಂದೆ ಸರ್ಕಾರಿ ನೌಕರಿಗಳನ್ನು ಮೂರು ವರ್ಷಗಳ ಕಾಲ ತುಂಬುವುದಿಲ್ಲವೆಂದು. ಅದೂ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಆಗ ಈ ರಾಜ್ಯದ ಜನ ಹೋರಾಟ ಮಾಡಲು ಹೊರಟರು. ನಾವು ಸಹ ಮಾನ್ಯ ಮುಖ್ಯ ಮಂತ್ರಿಗಳ ನಿವಾಸದ ಕೃಷ್ಣಾದ ಬಳಿ ಗಲಾಟೆ ಮಾಡಿದೆವು ಆಗ ಅದನ್ನು ತಿದ್ದುಪಡಿ ಮಾಡಿದಿರಿ. ನೀವು ಹೇಳುವುದೊಂದು ಮಾಡುವುದೊಂದು. ನೀವು ಆಗ ತದ್ವಿರುದ್ಧವಾಗಿ ಹೇಳಿದಿರಿ. ನೀವೆಲ್ಲಾ ಚಂಡಿ ಕಥೆ ಹೇಳುತ್ತೀರಿ. ನಾವೇ ಬೃಹಸ್ಪತಿಗಳೆಂದು ತಿಳಿದುಕೊಂಡು ೫೫ ವರ್ಷಗಳಿದ್ದನ್ನು ೫೮ ವರ್ಷಕ್ಕೆ ಏರಿಸಿದಿರಿ. ನಿಮಗೆ ಯಾರು ಮೆಮೋರೆಂಡಂ ಕೊಟ್ಟಿದ್ದರು ? ಸರ್ಕಾರಿ ನೌಕರ ಈ ೫೫

ವರ್ಷಗಳಾದ ಮೇಲೆ ಕೈ ಕಾಲು ಅಲ್ಲಾಡಿಸಿಕೊಂಡು ಕೆಲಸ ಮಾಡುವುದಕ್ಕೆ ಆಗುತ್ತದೆಯೇ ? ಆ ವಯಸ್ಸಿನಲ್ಲಿ ಆತ ತನ್ನ ಮೊಮ್ಮಕ್ಕಳ ಜೊತೆಯಲ್ಲಿ ಆನಂದವಾಗಿರುವುದನ್ನು ಬಿಟ್ಟು ೫೮ ವರ್ಷಗಳ ವರೆಗೆ ಕೆಲಸ ಕೊಟ್ಟಿರಿ. ಈಗ ೫೮ ವರ್ಷದಿಂದ ೬೦ ವರ್ಷ ಮಾಡಬೇಕೆಂದು ಯೋಚನೆ ನಡೆಯಿತು. ತಿರುಗಿ ಎಕೋ ವಾಪಸ್ ತೆಗೆದುಕೊಂಡಿರಿ ತುಂಬಾ ಸಂತೋಷ. ಇಂತಹ ಪರಿಸ್ಥಿತಿಯನ್ನು ತಾವು ಉಂಟು ಮಾಡುತ್ತೀರಿ. ಸರ್ಕಾರಿ ನೌಕರ ನಿವೃತ್ತಿಯಾದ ಮೇಲೆ ಅವನಿಗೆ ಕೊಡಬೇಕಾದಂತಹ ಹಣ ಕೊಡುವುದಕ್ಕೆ ನಿಮ್ಮಲ್ಲಿ ಹಣ ಇಲ್ಲವೆಂದು ನಾನು ಕೇಳಿದ್ದೇನೆ. ನಿಮ್ಮ ಮನಸ್ಸಿಗೆ ಬಂದಂತೆ ಮಾಡುವುದು. ಇಂತಹ ದರ್ಬಾರು ಮಾಡಿಯೇ ನೀವು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವುದು. ಮಾನ್ಯ ಮುಖ್ಯ ಮಂತ್ರಿಗಳೊಂದು ಮಾತು ಹೇಳಬೇಕಾಗಿತ್ತು. ಕೇಂದ್ರ ಸರ್ಕಾರವು ಹಣಕಾಸಿನ ಕೆಲವು ನಿಬಂಧನೆಗಳನ್ನು ಹಾಕಿದೆ ಆದ್ದರಿಂದ ನಾನು ಈ ಆರ್ಡರನ್ನು ತಿದ್ದುಪಡಿ ಮಾಡುವುದಿಲ್ಲವೆಂದು. ಅದನು ಹೇಳಲಿಲ್ಲ. ನೀವೇನು ಹೇಳಿದ್ದೀರಿ. ಅರ್ಜೆಂಟ್ ಪ್ಲೀಜ್ ಎಂದು ವಿಧಾನ ಸೌಧದಿಂದ ಜನವರಿ ೫ನೇ ತಾರೀಖು ೧೯೮೮ ರಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿದಿರಿ. ಅದು ಈ ರೀತಿ ಇದೆ.

೧೨-೩೦ ಪಿ. ಎಂ.

ಸರ್ಕಾರ ದಿವಾಳಿಯಾಗಿದೆಯೆಂದು ನೀವು ಒಪ್ಪಿಕೊಳ್ಳುತ್ತೀರಾ ? ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲವೆಂದು ನೀವು ಒಪ್ಪಿಕೊಳ್ಳುತ್ತೀರಾ? ಸುಮಾರು ೨೫೦ ಕೋಟಿ ರೂಪಾಯಿಗಳ ಯೋಜನೆಯ ವೆಚ್ಚ ಕಡಿಮೆ ಮಾಡುತ್ತೇವೆಂದು ಮಾನ್ಯ ಮುಖ್ಯ-ಮಂತ್ರಿಯವರು ಹೇಳಿಕೆ ಕೊಟ್ಟಿದ್ದಾರೆ, ಈ ರೀತಿ ಮಾಡುವುದರಿಂದ ಹೊಸ ಉದ್ಯೋಗಗಳು ನಿರ್ಮಾಣ ಆಗುವುದೆ ? ಅಕ್ಟೋಬರ್ ನಂತರ ಯಾವುದೇ ಕೆಲಸವನ್ನು ಮಂಜೂರಾಗದೇ ತೆಗೆದುಕೊಳ್ಳುವ ಹಾಗಿಲ್ಲವೆಂದು ಗೌರ್ನಮೆಂಟ್ ಆರ್ಡರನು ಇಷ್ಯೂ ಮಾಡಿದ್ದೀರಿ. ಅಂದರೆ, ಅಕ್ಟೋಬರ್ ನಂತರ ಯಾವುದೇ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಆಯಿತು. ಸರ್ಕಾರದಲ್ಲಿ ದುಡ್ಡಿಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಅಪ್ರೂವಲ್ ಕೊಟ್ಟರೆ ಮಾತ್ರ ಕೆಲಸ ತೆಗೆದುಕೊಳ್ಳುತ್ತೇವೆಂದು ಈ ಒಂದು ತರಹದ ಮುಖಕ್ಕೆ ಬೂದಿಯನ್ನು ಎರಚುವಂಥ ಏನು ಕೆಲಸ ಇದೆ, ದಯವಿಟ್ಟು ಅದನ್ನು ಮಾಡಬೇಡಿ. ಈ ತರಹ ಕೆಲಸವನ್ನು ಮಾಡಿದ್ದರೆ ಅದು ಬೇರೆ ತರಹ ಇರುತ್ತಿತ್ತು. ನಿಮ್ಮನ್ನು ನಂಬಿದಂಥ ಜನಕ್ಕೆ, ನಂಬಿದಂಥ ತರುಣರಿಗೆ ನೀವು ಯಾವ ರೀತಿ ಮೋಸ ಮಾಡುತ್ತಿದ್ದೀರಿ? ನಾನು ಹೇಳುತ್ತಿರುವುದು ನಿಜವೋ ಅಲ್ಲವೋ ನೀವೇ ಹೇಳಿ ? ಸರ್ಕಾರಿ ನೌಕರಿ ಕೊಡುವುದಕೋಸ್ಕರ ನಿಮ್ಮನ್ನು ವಿದ್ಯಾವಂತರನ್ನಾಗಿ ಮಾಡುತ್ತಿಲ್ಲ ನಿಮಗೆ ಏನು ಸವಲತ್ತುಗಳು ಬೇಕೋ ಅವುಗಳನ್ನು ನಾವು ಹಳ್ಳಿಯಲ್ಲೇ ಕೊಡುತ್ತೇವೆ. ನೀವು ಹಳ್ಳಿಗಳನ್ನು ಬಿಟ್ಟು ನಗರಗಳಿಗೆ ಬರುವುದು ಬೇಡ ಎಂದು ಜನತೆಗೆ ಹೇಳಬೇಕಾಗಿತ್ತಲ್ಲವೇ ? ನೀವು ಏಕೆ ಆ ರೀತಿ ಹೇಳಲಿಲ್ಲ ? ಕಳೆದ ಆರೇಳು ತಿಂಗಳುಗಳಿಂದ ರಾಜ್ಯದಲ್ಲಿ ಕೆಲಸಕಾರ್ಯಗಳು ಸ್ಥಗಿತವಾಗಿರುವುದರಿಂದ ಸರ್ಕಾರಿ ನೌಕರರು ಮತ್ತು ವಿದ್ಯಾವಂತರ ಮೇಲೆ ಅಷ್ಟಾಗಿ ಪರಿಣಾಮವಾಗಿಲ್ಲ. ಯಾರು ಕೃಷಿ ಕಾರ್ಮಿಕರು ಲಕ್ಷಾಂತರ ಜನ ರಾಜ್ಯದಲ್ಲಿ ವಾಸ ಮಾಡುತ್ತಿದ್ದಾರೋ ಅವರಿಗೆ ಇದರ ಪರಿಣಾಮ ಕಂಡು ಬಂದಿದೆ. ಈ ಕೃಷಿ ಕಾರ್ಮಿಕರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ, ಇದರ ಬಗ್ಗೆ ನಿಮಗೆ ಏನಾದರೂ ಚಿಂತನೆ ಇದೆಯೇ ? (ಒಂದು ಸ್ಟೇಟ್‌ಮೆಂಟನ್ನು ಸದನಕ್ಕೆ ತೋರಿಸಿ) ಇಲ್ಲಿ ಏನು ಹೇಳಿದ್ದೀರಿ ಎಂದರೆ ಬರಗಾಲ ಕಾಮಗಾರಿಗಳು ಮತ್ತು ಫ್ಲಡ್ ವರ್ಕ್ಸ್‌ಗಳನ್ನು ಸರ್ಕಾರ ಸರಿಯಾದ ರೀತಿಯಲ್ಲಿ ಮಾಡುತ್ತಿದೆ ಎಂದು ಹೇಳಿದ್ದೀರಿ. ಬರಗಾಲ ಕಾಮಗಾರಿ ಎಂದು ನಮ್ಮ ರಾಜ್ಯದಲ್ಲಿ ಬಡವರಿಂದ ಕೆಲಸ ಮಾಡಿಸಿಕೊಂಡು, ಕೆಲಸ ಮಾಡಿದಂಥ ಕೂಲಿ ಕಾರ್ಮಿಕರಿಗೆ ಕೂಲಿ, ದವಸ ಧಾನ್ಯಗಳನ್ನು ಕೊಡದೇ ಇರುವಂಥ ಉದಾಹರಣೆಗಳು ಇವೆ. ಈ ರೀತಿ ಕೆಲಸ ಮಾಡಿದ ಕಾರ್ಮಿಕರಿಗೆ ಸರ್ಕಾರವು ಕೋಟ್ಯಾಂತರ ರೂಪಾಯಿಗಳ ಪೇಮೆಂಟ್ ಮಾಡಬೇಕಾಗಿದೆ. ಒಂದೊಂದು ಜಿಲ್ಲೆಯಲ್ಲೂ ಐದಾರು ಲಕ್ಷ ರೂಪಾಯಿಗಳು ಪೇಮೆಂಟ್ ಆಗಬೇಕಾಗಿದೆ ನಮ್ಮ ಜಿಲ್ಲೆಯ ಸಾಗರ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಕೂಲಿ ಕಾರ್ಮಿಕರಿಗೆ ಕೂಲಿ ವಿತರಣೆ ಮಾಡಬೇಕೆಂದು ಧರಣಿ, ಚಳುವಳಿ ಮಾಡಿದರೂ ಇದುವರೆಗೆ, ಕೂಲಿಯನ್ನು ವಿತರಣೆ ಮಾಡಿಲ್ಲ. ಈ ರೀತಿ ನಿಮ್ಮ ಸ್ಥಿತಿ ಇದ್ದರೂ ಸಹ ಈ ತರಹ ಘೋಷಣೆ ಏಕೆ ಬೇಕು? ನಾವು ಬೆಳೆಸಿದ್ದೇವೆಂದು ಹೇಳಿದಿರಿ. ಎಲ್ಲಿ ಬೆಳೆಸಿದ್ದೀರಿ ನೀವು ಏನನ್ನು? ಈ ರೀತಿ ಸುಮ್ಮನೆ ಘೋಷಣೆಯನ್ನು ಮಾತ್ರ ದಯವಿಟ್ಟು ಮಾಡಬೇಡಿ ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ನಿಮಗೆ ಇನ್ನೂ ಎಷ್ಟು ಹೊತ್ತು ಬೇಕು ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ನನಗೆ ಒಂದು ಗಂಟೆ ಬೇಕು.

ಅಧ್ಯಕ್ಷರು.—ನಿಮ್ಮ ಭಾಷಣವನ್ನು ಸೋಮವಾರಕ್ಕೆ ಬೇಕಾದರೆ ಮುಂದುವರಿಸಿ. ಈಗ ನಾನ್ ಅಫಿಶಿಯಲ್ ಬಿಸ್‌ನೆಸ್ ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇನ್ನು ಐದು ನಿಮಿಷದಲ್ಲಿ ಒಂದೆರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಬಗರ್‌ಹುಕುಮ್ ಸಾಗುವಳಿಯನ್ನು ನೀವು ಖಾಯಂ ಮಾಡದೇ ಅವರು ಹೋರಾಟ ಮಾಡುವ ಸಂದರ್ಭದಲ್ಲಿ ತಾವು ಫಾರೆಸ್ಟ್ ಆ್ಯಕ್ಟ್‌ಗೆ ಅಮೆಂಡ್‌ಮೆಂಟನ್ನು ತರುವಂಥ ಪ್ರಯತ್ನ ಮಾಡಿದ್ದೀರಿ. ಸ್ವಾಮಿ, ನೀವು ಈ ತರಹ ಮಾಡಿದರೆ ನಿಮ್ಮ ಸರ್ಕಾರಕ್ಕೆ ಅದು ಶಾಪವಾಗಿ ಪರಿಣಮಿಸುತ್ತದೆ. ನಿಮ್ಮ ಅಮೆಂಡ್‌ಮೆಂಟ್ ಏನು ಎಂದರೆ, Un-authorisedly occupied, land for any pupose, ಇದನ್ನು ಹೇಳುತ್ತಾ after the words ''reserved forest'' the words ''or any land in a protected forest and certain other lands'' shall be inserted. ಎಂದು ಇಲ್ಲಿ ಹೇಳಿದ್ದೀರಿ. ಬಗರ್‌ಹುಕುಮ್ ಸಾಗುವಳಿ ಮಾಡಿರುವ ಗೋಮಾಳ ಜಾಗವನ್ನು ನೀವು ಗೊತ್ತಿದ್ದೋ, ಗೊತ್ತಿಲ್ಲದೆಯೋ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದೀರಿ. ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ಬಡಬಗ್ಗರು ಸರ್ಕಾರಿ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ನನ್ನ ಜಿಲ್ಲೆಯಲ್ಲೇ ಸುಮಾರು ಆರೇಳು ಸಾವಿರ ಬಗರ್ ಹುಕುಂ ಸಾಗುವಳಿದಾರರಿದ್ದಾರೆ. ಸ್ವಾಮಿ ನಾನು ಕೈಮುಗಿದು ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ತರಹ ಅಮೆಂಡ್‌ಮೆಂಟ್‌ನ್ನು ತರಬೇಡಿ. ಫಾರೆಸ್ಟ್ ಉಳಿಸಬೇಕು, ರೈತ ಉಳಿಯಬೇಕು, ಮಳೆ ಬರಬೇಕು. ಈಗ ಬಗರ್‌ಹುಕುಂ ಮಾಡಿರುವ ಜಾಗವನ್ನು ಅರಣ್ಯ ಇಲಾಖೆಗೆ ಕೊಡಬೇಡಿ. ನಮ್ಮ ರಾಜ್ಯದಲ್ಲಿ ಅನೇಕ ಖಾಲಿ ಇರುವ ಜಾಗಗಳು ಇವೆ. ಅಲ್ಲೆಲ್ಲಾ ಗಿಡಮರಗಳನ್ನು ಬೆಳೆಸುವ ಪ್ರಯತ್ನ ಮಾಡಿ. ಯಾವ ಬಡ ರೈತನು ಕಣ್ಣುಮುಚ್ಚಿಕೊಂಡು. ನಿಮ್ಮನ್ನು ನಂಬಿಕೊಂಡು ಓಟು ಹಾಕಿದನೋ ಬಗರ್‌ಹುಕುಮ್ ಸಾಗುವಳಿ ಮಾಡಿರುವವರಿಗೆ ಅದನ್ನು ಖಾಯಂ ಮಾಡುತ್ತೇವೆಂದು ಯಾವ ಬಡ ರೈತರಿಗೆ ನೀವು ಹೇಳಿದ್ದೀರೋ ಅವನಿಗೆ ಗೊತ್ತಿಲ್ಲದೆ ನಿಮ್ಮ ರೆವಿನ್ಯೂ ಇಲಾಖೆಯವರು ಬಗರ್‌ಹುಕುಂ ಸಾಗುವಳಿ ಮಾಡಿರುವ ಜಮೀನನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟನವರಿಗೆ ಹ್ಯಾಂಡ್‌ಓವರ್ ಮಾಡಿದ್ದಾರೆ ಕೂಲಿ ಕೆಲಸ ಮಾಡತಕ್ಕಂಥ ಬಡ ರೈತರು ಎರಡು ಅಥವಾ ಮೂರು ಎಕರೆ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಫಾರೆಸ್ಟ್ ಆ್ಯಕ್ಟ್‌ಗೆ ನೀವು ಅಮೆಂಡ್‌ಮೆಂಟ್ ತಂದು ಈ ಜಮೀನುಗಳಲ್ಲಿ ಗಿಡಗಳನ್ನು ನಡೆವಂಥ ಪ್ರಯತ್ನ ಮಾಡಿದ್ದೀರಿ. ಈ ರೀತಿ ನೀವು ಮಾಡಿದರೆ ರಾಜ್ಯದಲ್ಲಿ ರಕ್ತ ಕ್ರಾಂತಿಯಾಗುತ್ತದೆಂದು ನಾನು ತುಂಬಾ ನೊಂದು ಹೇಳುತ್ತಿದ್ದೇನೆ. ನಿಮ್ಮ ಕೈಯಿಂದ ಈ ಕೆಲಸ ಆಗುವುದು ಬೇಡ ಇವತ್ತಿನಿಂದ ಇನ್ನು ಮುಂದಕ್ಕೆ ಯಾರೂ ಬಗರ್‌ಹುಕುಂ ಸಾಗುವಳಿಯನ್ನು ಸರ್ಕಾರದ ಜಮೀನಿನಲ್ಲಿ ಮಾಡಬಾರದೆಂದು ಹೇಳಿ. ಇನ್ನು ಮುಂದೆ ಯಾರೇ ಇರಲಿ, ಕೂಲೀಕಾರರೇ ಇರಲಿ ಬಗರ್‌ಹುಕುಂ ಸಾಗುವಳಿ ಮಾಡಬಾರದೆಂದು ಆಜ್ಞೆ ಮಾಡಿದರೆ ಯಾರೂ ಬಗರ್‌ಹುಕುಂ ಸಾಗುವಳಿ ಮಾಡುವುದಿಲ್ಲ. ಹೊಟ್ಟೆ ಬಟ್ಟೆಗೋಸ್ಕರ ದುಡಿಯುವ ಬಡ ಕೂಲಿ ಕಾರ್ಮಿಕರು ಬಹಳ ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡಿರುವ ಜಮೀನನ್ನು ಫಾರೆಸ್ಟ್ ಇಲಾಖೆಗೆ ವಹಿಸುವ ಪ್ರಯತ್ನ ಮಾತ್ರ ನೀವು ಮಾಡಬೇಡಿ. ಬಗರ್‌ಹುಕುಂ ಸಾಗುವಳಿ ಯಾವುದೇ ಜಮೀನಿನಲ್ಲಿ ಮಾಡಿರಲಿ ಜಮೀನನ್ನು ಭಗವಂತ ಕೊಟ್ಟಿರುವುದು. ನೀವು ಅಧಿಕಾರಕ್ಕೆ ಬಂದ ತಕ್ಷಣ ಎಲ್ಲಾ ಸರಿ ಮಾಡುತ್ತೇವೆಂದು ಬಡವನ ಜೋಬಿಗೆ ಕೈ ಹಾಕುವುದು ಬಡವನ ದುಡಿಮೆಗೆ ತೊಂದರೆ ಮಾಡುವುದನ್ನು ದಯಮಾಡಿ ಮಾಡಬೇಡಿ. ಫಾರೆಸ್ಟ್ ಆ್ಯಕ್ಟ್ ಅಮೆಂಡ್‌ಮೆಂಡ್ ಬಿಲ್ ಇನ್ನೂ ಪಾಸ್ ಆಗಿಲ್ಲವಾದ್ದರಿಂದ ಅದನ್ನು ಪುನಃ ತರಬೇಡಿ. ಬಡವನಿಗೆ, ಹರಿಜನ ಗಿರಿಜನರಿಗೆ ನಿಮ್ಮಿಂದ ಅನ್ಯಾಯವಾಗಬಾರದು. ನಿಮಗೆ ಸಹಾಯ ಮಾಡುವುದಕ್ಕೆ ಆಗದಿದ್ದರೆ, ಬಡ ಕಾರ್ಮಿಕರು ತಮ್ಮ ಉಳಿವಿಗೋಸ್ಕರ ವ್ಯವಸ್ಥೆ ಏನು ಮಾಡಿಕೊಂಡಿದ್ದಾರೋ ಅದಕ್ಕೆ ಕಲ್ಲು ಹಾಕುವಂಥ ಪಾಪದ ಕೆಲಸವನ್ನು ನೀವು ಮಾಡಬಾರದು, ನಿಮ್ಮ ಕೈಯಿಂದ ಈ ಕೆಲಸವನ್ನು ಮಾಡುವುದು ಬೇಡ ಎಂದು ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಯವರು ಪ್ರಸ್ತಾವವನ್ನು ಮಂಡಿಸಬೇಕು.